"JANAPADA" Monthly - November 2016
"ಜನಪದ" ಮಾಸಿಕ – ನವೆಂಬರ್ 2016

Page No. -52
RNI No. KAR/KAN/2010/20676

REGD NO. : KA/BG/GPO-2526/2015-17 License to post without prepayment WPP 34
Dt. 29th & 30th Posted at (Every month) Bangalore PSO, Mysore Road, Bangalore-26




ವಾರ್ಷಿಕ ಚಂದಾ ರೂ.25/-


# ಜನಪದ

ನವೆಂಬರ್ 2016



ಕರ್ನಾಟಕ
ಏಕೀಕರಣ
ವಜ್ರಮಹೋತ್ಸವ
60


# ಕರ್ನಾಟಕದ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರು




ಶ್ರೀ ಕುವೆಂಪು (1967)




ಶ್ರೀ ದ. ರಾ. ಬೇಂದ್ರೆ (1973)



ಶ್ರೀ ಶಿವರಾಮ ಕಾರಂತ
(1977)



ಶ್ರೀ ಮಾಸ್ತಿ ವೆಂಕಟೇಶ್ ಅಯ್ಯಂಗಾರ್
(1983)



ಶ್ರೀ ವಿ. ಕೆ. ಗೋಕಾಕ್ (1990)




ಶ್ರೀ ಯು. ಆರ್. ಅನಂತಮೂರ್ತಿ
(1994)



ಶ್ರೀ ಗಿರೀಶ್ ಕಾರ್ನಾಡ್
(1998)



ಶ್ರೀ ಚಂದ್ರಶೇಖರ ಕಂಬಾರ
(2010)



ಹಂಪಿಯ ಕೃಷ್ಣ ಬಜಾರು

# ಜನಪದ

ಸಂಪುಟ–59 • ಸಂಚಿಕೆ–8 • ನವೆಂಬರ್ 2016



05 ಕರ್ನಾಟಕ ಏಕೀಕರಣ – 60
• ಡಾ॥ ಎಸ್. ನಂಜುಂಡಸ್ವಾಮಿ

14 ಏಕೀಕರಣ ಮತ್ತು ಅಭಿವೃದ್ಧಿಯ ಹಾದಿ
• ಲಕ್ಷ್ಮಣ ಕೊಡಸೆ

18 ಧಾರವಾಡ ಕರ್ನಾಟಕ ವಿದ್ಯಾವರ್ಧಕ ಸಂಘ
• ಮಂಜುನಾಥ ಬಿ. ಡೊಳ್ಳಿನ

21 ಕರ್ನಾಟಕ ಏಕೀಕರಣಕ್ಕೆ ಮೊದಲು ಮತ್ತು ನಂತರ
• ಬಿ. ಎಂ. ಚಂದ್ರಶೇಖರಯ್ಯ

28 ತ್ರಿಕರಣಗಳ ಕುಲುಮೆಯಲ್ಲಿ ನಮ್ಮ ಕನ್ನಡ
• ಬರಗೂರು ರಾಮಚಂದ್ರಪ್ಪ

30 ಕನ್ನಡಕ್ಕೆ ಕೈ ಎತ್ತಿ ಕಲ್ಪವೃಕ್ಷರಾದ ಆಲೂರು ವೆಂಕಟರಾಯರು
• ಹರ್ಷವರ್ಧನ ವಿ. ಶೀಲವಂತ

33 ಏಕೀಕರಣಕ್ಕಾಗಿ ದುಡಿದ ಮಹನೀಯರು

39 ಏಕೀಕರಣವನ್ನು ಹದಗೊಳಿಸಿದ ರಂಗಭೂಮಿ
• ಗುಡಿಹಳ್ಳಿ ನಾಗರಾಜ್

44 ಏಕೀಕರಣದ ಚಳುವಳಿಯಲ್ಲಿ ಪತ್ರಿಕೆಗಳು
• ಸಿ. ವಿ. ವೇದವತಿ

47 ಕರ್ನಾಟಕದ ಹೆಮ್ಮೆಯ ವಾಸ್ತುಶಿಲ್ಪ
• ಡಾ॥ ಎಸ್. ನಂಜುಂಡಸ್ವಾಮಿ

ಪ್ರಧಾನ ಸಂಪಾದಕರು
ಎನ್. ಆರ್. ವಿಶುಕುಮಾರ್
ನಿರ್ದೇಶಕರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ಸಂಪಾದಕೀಯ ಸಲಹೆ
ಎಂ. ರವಿಕುಮಾರ್
ಜಂಟಿ ನಿರ್ದೇಶಕರು

ಬಸವರಾಜ ಕಂಬಿ
ಉಪ ನಿರ್ದೇಶಕರು

ಉಪ ಸಂಪಾದಕರು
ಸಿ. ರೂಪಾ
ಸಹಾಯಕ ನಿರ್ದೇಶಕರು

ಪ್ರಕಾಶಕರು
ನಿರ್ದೇಶಕರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
#17, ವಾರ್ತಾ ಸೌಧ, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 01
email : varthajanapada@yahoo.co.in

ಮುದ್ರಕರು
ಲಾವಣ್ಯ ಮುದ್ರಣ
#19, ವಿದ್ಯಾಪೀಠ ವೃತ್ತ, ಬನಶಂಕರಿ 1ನೇ ಹಂತ, ಬೆಂಗಳೂರು – 50

ಲೇಖಕರ ಅಭಿಪ್ರಾಯಗಳು ಸರ್ಕಾರದ ಅಭಿಪ್ರಾಯಗಳಲ್ಲ

'ಜನಪದ' ಮಾಸಿಕ ಈಗ
www.kanaja.inನಲ್ಲಿ ಲಭ್ಯ

# ಓದುಗರಿಂದ...

ಗಾಂಧೀ ವಿಶೇಷಾಂಕದಲ್ಲಿ ಇಲಾಖೆಯ ಮಾನ್ಯ ನಿರ್ದೇಶಕರು ಬರೆದಿರುವ 'ಮಹಾತ್ಮಾಗಾಂಧೀಜಿ ನಮ್ಮ ಕಣ್ಣ ನೋಟದ ಬೆಳಕು' ಲೇಖನ ತುಂಬಾ ಅರ್ಥವತ್ತಾಗಿದೆ. ಮುಖ್ಯ ಲೇಖನ 'ರಚನಾತ್ಮಕ ಕಾರ್ಯಕ್ರಮವೆಂಬುದು ನಾಯಕತ್ವ ತರಬೇತಿ ಕಾರ್ಯಕ್ರಮವೇ ಆಗಿದೆ' ಬಹಳ ಚೆನ್ನಾಗಿ ಮೂಡಿದೆ. ಗಾಂಧಿ ಹಾಗೂ ಪರಿಸರ ಕಾಳಜಿ ಲೇಖನ ಬಹಳ ಸೊಗಸಾಗಿ ಮೂಡಿದೆ. ಬದನವಾಳು ಸತ್ಯಾಗ್ರಹದ ಲೇಖನ ಆಸಕ್ತಿದಾಯಕವಾಗಿದೆ. ಅಸ್ಪೃಶ್ಯತಾ ನಿವಾರಣೆ ಲೇಖನವೂ ಬಹಳ ಚೆನ್ನಾಗಿ ಮೂಡಿ ಬಂದಿದೆ. ಒಟ್ಟಾರೆ ಲೇಖನಗಳೊಂದಿಗೆ ಗಾಂಧೀ ಅವರ 32 ಅಪರೂಪದ ಛಾಯಾ ಚಿತ್ರಗಳನ್ನು ಪ್ರಕಟಿಸಿದ್ದಕ್ಕೆ ತುಂಬಾ ಧನ್ಯವಾದಗಳು.


**–ಬಿ. ಮಧುಸೂದನ,** ಬಾಗಲಕೋಟೆ

ಗಾಂಧೀಜಿಯವರ ಕುರಿತಾದ ಲೇಖನಗಳು ಸಂಗ್ರಹ ಯೋಗ್ಯ. ಹತ್ತು ಹಲವು ವಿಷಯಗಳನ್ನು ತಿಳಿಸಿಕೊಟ್ಟ ಬರಹಗಳು ಮೆಚ್ಚುಗೆಯಾದವು.

**–ಜಿ.ಡಿ. ಹಳ್ಳಿ ಲಕ್ಷ್ಮೀನಾರಾಯಣ,**
ದೊಡ್ಡಬಳ್ಳಾಪುರ

ಮಹಾನ್ ಶಾಂತಿದೂತ, ಅಹಿಂಸಾಪ್ರಿಯ ಮಹಾತ್ಮ ಗಾಂಧೀಜಿ ಅವರ ಜೀವನ ಸಂದೇಶಗಳನ್ನು ಹೊತ್ತು ತಂದ ಅಕ್ಟೋಬರ್ ಸಂಚಿಕೆಗೆ ವಂದನೆಗಳು. 'ಈ ಭೂಮಿ ಇರುವುದು ಮನುಷ್ಯನ ಅಗತ್ಯಗಳ ಪೂರೈಸಲು; ದುರಾಸೆಗಳನ್ನಲ್ಲ..' ಎನ್ನುವುದು ಅದೆಷ್ಟು ಅರ್ಥಪೂರ್ಣ ಮಾತು. ಜೀವನ– ನಡೆ ನುಡಿಗಳು ಸರಳವಾದರೆ ಶಾಂತಿ–ನೆಮ್ಮದಿಗಳು ನಮ್ಮನ್ನು ಅರಸಿ ಬರುವುದರಲ್ಲಿ ಸಂಶಯವಿಲ್ಲ.

**– ಕೆ ಎನ್ ಜಗದೀಶ,** ಶಿವಮೊಗ್ಗ




**ಅರ್ಥಪೂರ್ಣ ಸಂಚಿಕೆ**

ಅಕ್ಟೋಬರ್–2016ರ ಜನಪದ ಪತ್ರಿಕೆಯು ಗಾಂಧೀಜಿ ಜಯಂತಿಯಂಗವಾಗಿ ವಿಶೇಷ ಸಂಚಿಕೆಯಾಗಿ ಪ್ರಕಟಗೊಂಡಿದ್ದು ಅತ್ಯಂತ ಸಂತಸದ ಸಂಗತಿ. ಈ ಸಂಚಿಕೆಯಲ್ಲಿ ಪ್ರಕಟವಾದ ಪ್ರತಿಯೊಂದು ಲೇಖನಗಳು ಅರ್ಥಪೂರ್ಣವಾಗಿವೆ.

"ರಾಷ್ಟ್ರೀಯ ಶಿಕ್ಷಣ ಚಳುವಳಿ" ಲೇಖನದಲ್ಲಿ ಹಾವೇರಿ ಜಿಲ್ಲೆಯ ಹೊಸರಿತ್ತಿಯ ಗುರುಕುಲದ ಸಮಗ್ರ ಪರಿಚಯವಿದ್ದು, ಶೈಕ್ಷಣಿಕ ರಂಗದಲ್ಲಿ ಇಂಥ ಗುರುಕುಲಗಳ ಅವಶ್ಯವುಂಟು. ಜೀವನ ಶಿಕ್ಷಣ ಇಂದು ಅವಶ್ಯ. ನೇಯ್ಗೆ, ತೋಟ, ಹೈನು, ಪರಿಸರ ಚಿಂತನೆ ಮೊದಲಾದ ಚಟುವಟಿಕೆ ಇಂದಿನ ಸ್ಥಿತಿಯಲ್ಲಿ ಮಕ್ಕಳ ಭವಿಷ್ಯಕ್ಕೆ ಬೇಕೇ ಬೇಕು. ಹುದಲಿ, ಬೆಂಗೇರಿಯಲ್ಲಿಯ ಖಾದಿ ಉದ್ಯೋಗದ ಪ್ರಗತಿ ಬದನವಾಳು ಸತ್ಯಾಗ್ರಹ ಪರಿಚಯ ಚೆನ್ನಾಗಿ ಮೂಡಿ ಬಂದಿದೆ. ಒಟ್ಟಾರೆ ಈ ವಿಶೇಷ ಸಂಚಿಕೆ ಸಂಗ್ರಹ ಯೋಗ್ಯವಾಗಿದೆ.

**–ಕೊತ್ತಲ ಮಹಾದೇವಪ್ಪ,**
ಲಕ್ಷ್ಮೇಶ್ವರ

'ಜನಪದ' ಮಾಸಿಕಕ್ಕೆ ಚಂದಾದಾರರಾಗುವವರು ರೂ. 25/– ಅನ್ನು ಕಡ್ಡಾಯವಾಗಿ ಡಿ.ಡಿ. ಮುಖಾಂತರವೇ ಕಳಿಸಬೇಕು. ಮನಿ ಆರ್ಡರ್ ಹಣವನ್ನು ಸ್ವೀಕರಿಸುವುದಿಲ್ಲ.

ವಾರ್ಷಿಕ ಚಂದಾ ರೂ.25/–

ಗಾಂಧೀ ವಿಶೇಷಾಂಕ ಉತ್ತಮ ಸಂಗ್ರಹಯೋಗ್ಯ ಸಂಚಿಕೆಯಾಗಿತ್ತು. ಮಹಾತ್ಮ ಗಾಂಧೀಜಿಯವರ ಬಗ್ಗೆ ಪ್ರಕಟಗೊಂಡ ಎಲ್ಲಾ ಲೇಖನಗಳಿಂದ ಬಹಳಷ್ಟು ಮಾಹಿತಿ ಲಭ್ಯವಾಯಿತು. ಅಹಿಂಸಾವಾದಿ ಮಹಾತ್ಮ ಗಾಂಧೀಜಿಯವರು ಭೂಮಿಯಲ್ಲಿ ನಡೆದಾಡಿದ ದೇವತಾ ಮನುಷ್ಯರೆನಿಸಿದರು. ಪ್ರಾಥಮಿಕದಿಂದ ಸ್ನಾತಕೋತ್ತರದವರೆಗೂ ಗಾಂಧೀಜಿಯವರನ್ನು ಇನ್ನಷ್ಟು, ಮತ್ತಷ್ಟು ತಿಳಿದುಕೊಳ್ಳುವಂತಹ ವಿಷಯ ಸಂಗ್ರಹವನ್ನು ನೀಡಿದ 'ಜನಪದ' ಪತ್ರಿಕೆಯ ಸಂಪಾದಕೀಯ ಬಳಗಕ್ಕೆ ಗಾಂಧಿ ಜಯಂತಿಯ ಶುಭಾಶಯಗಳು.

**–ವಿ. ಹೇಮಂತಕುಮಾರ್,** ಬೆಂಗಳೂರು

**ಧನ್ಯವಾದಗಳು**

ವಾರ್ತಾ ಇಲಾಖೆಯಿಂದ ಪ್ರತಿ ತಿಂಗಳು ಪ್ರಕಟವಾಗುವ ಜನಪದ ಮಾಸ ಪತ್ರಿಕೆಯನ್ನು ನಾನು ಪ್ರತಿ ತಿಂಗಳು ಓದುತ್ತಾ ಬರುತ್ತಿದ್ದೇನೆ. ಅಕ್ಟೋಬರ್ ಮಾಹೆಯ ಸಂಚಿಕೆಯನ್ನೂ ಕೂಡ ಓದಿದೆ. ಈ ಸಂಚಿಕೆಯು ಮುಖಪುಟದಿಂದ ಹಿಡಿದು ಕೊನೆಯ ಪುಟದವರೆಗೂ ಸುಮಾರು 52 ಪುಟಗಳಲ್ಲಿಯೂ ಮಹಾತ್ಮಾ ಗಾಂಧೀಜಿಯವರ ಜೀವನದ ವಿವಿಧ ಸ್ತರಗಳನ್ನು ಅರ್ಥವತ್ತಾಗಿ ಪ್ರಕಟಿಸಿರುತ್ತೀರಿ. ಅದಕ್ಕಾಗಿ ತಮಗೂ ಹಾಗೂ ಪತ್ರಿಕೆಯ ಸಂಪಾದಕೀಯ ವರ್ಗಕ್ಕೂ ಧನ್ಯವಾದಗಳು.

**–ಸಣ್ಣೇಗೌಡ**
ಅಂಕನಾಯಕನಳ್ಳಿ, ಹಾಸನ ಜಿಲ್ಲೆ

ಗಾಂಧೀಜಿಯವರ ಆದರ್ಶಗಳು ಸರ್ವರಿಗೂ ಸಕಲಕಾಲಕ್ಕೂ ಅನ್ವಯಿಸುತ್ತವೆ. ಅವರ ಹದಿನೆಂಟು ರಚನಾತ್ಮಕ ಕಾರ್ಯಕ್ರಮಗಳನ್ನು ವಿದ್ಯಾರ್ಥಿಗಳಿಗೆ ಶಾಲಾಮಟ್ಟದಲ್ಲಿಯೇ ಮನಮುಟ್ಟುವಂತೆ ಅರ್ಥೈಸಬೇಕು. ಜಗತ್ತಿನ ಇಂದಿನ ಓಟ ಗಮನಿಸಿದಲ್ಲಿ ಬಾಪು ಹಿಂದೆಂದಿಗಿಂತಲೂ ಈಗ ಹೆಚ್ಚು ಅಪ್ಯಾಯಮಾನರಾಗುತ್ತಾರೆ. ಅತ್ಯುತ್ತಮ ಬಾಪು ಸಂಚಿಕೆ ನೀಡಿದಕ್ಕೆ ಧನ್ಯವಾದಗಳು.

**–ಎನ್ ರವಿಪ್ರಕಾಶ್,** ರಾಮನಗರ






**ಎನ್. ಆರ್. ವಿಶುಕುಮಾರ್**
ನಿರ್ದೇಶಕರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

**ಕನ್ನಡ ಎನೆ ಕುಣಿದಾಡುವುದೆನ್ನೆದೆ**
**ಕನ್ನಡ ಎನೆ ಕಿವಿ ನಿಮಿರುವುದು**

– ಕುವೆಂಪು

ಕನ್ನಡದ ಅಭಿಮಾನ ಮೆರೆಯುವ ಇಂತಹ ಹಲವಾರು ಸೂಕ್ತಿಗಳನ್ನು ನಮ್ಮ ಖ್ಯಾತ ಸಾಹಿತಿಗಳು ನಾಡಿನ ಜನರ ಮಡಿಲಿಗೆ ಹಾಕಿದ್ದಾರೆ. ನಾವು ಇವುಗಳನ್ನು ಆಗಾಗ್ಗೆ ಅದರಲ್ಲೂ ಪ್ರತಿ ವರ್ಷದ ನವೆಂಬರ್ ಮಾಹೆಯಲ್ಲಿ ಎತ್ತಿಕೊಂಡು ಮುದ್ದಾಡಿ ಮತ್ತೆ ಮರೆಯುತ್ತೇವೆ. ಈ ಪ್ರವೃತ್ತಿ ಮರೆಯಾಗಿ ನಮ್ಮ ಜೀವನ ಪೂರ್ತಿ ನಾವು ಕನ್ನಡವನ್ನು ಎತ್ತಿ ಮುದ್ದಾಡುವಂತಾಗಬೇಕು ಎನ್ನುವುದು ನಿಜವಾದ ಕನ್ನಡಾಭಿಮಾನಿಗಳ ಆಶಯ.

ನಿಜ; ಭಾಷೆ ಒಂದು ಭಾವನಾತ್ಮಕ ವಿಷಯ. ಒಂದು ಸೀಮಿತ ಎಲ್ಲೆಯಲ್ಲಿ ವಾಸಿಸುವ ಜನರೆಲ್ಲರೂ ಆಡುವ ಭಾಷೆ ನಮಗೆ ಒಂದು ಅಸ್ಮಿತೆ. ನಮ್ಮ ನೆಲದಲ್ಲಿಯೇ ಇದ್ದಾಗ ಈ ಅಸ್ಮಿತೆ ನಮ್ಮನ್ನು ಅಷ್ಟಾಗಿ ಭಾವನಾತ್ಮಕವಾಗಿ ಕಾಡಿಸುವುದಿಲ್ಲ. ಆದರೆ ನಮ್ಮ ನೆಲವನ್ನು ಬಿಟ್ಟು ದೂರವಿದ್ದಾಗ; ನಮ್ಮ ಭಾಷೆಯ ಒಂದು ಕಿರುನುಡಿ ನಮ್ಮ ಕಿವಿಗೆ ಬಿದ್ದರೂ ಸಾಕು ನಮ್ಮ ಇಡೀ ಮೈ ರೋಮಾಂಚನಗೊಳ್ಳುತ್ತದೆ. ನಮ್ಮ ಭಾಷೆಯ ಮೇಲಿನ ಅಭಿಮಾನ ಉಕ್ಕಿ ಹರಿಯುತ್ತದೆ. ಇದು ನಮ್ಮ ನಮ್ಮ ಭಾಷೆಗಿರುವ ಶಕ್ತಿ ಮತ್ತು ಚೈತನ್ಯ.

ಕರ್ನಾಟಕ ಏಕೀಕರಣದ ವಿಷಯವೂ ಸಹ ಇದೇ ಕತೆ. ನಾನಾ ಐತಿಹಾಸಿಕ ಕಾರಣಗಳಿಂದಾಗಿ ಕನ್ನಡ ಭಾಷೆ ಮಾತನಾಡುವ ಜನರೆಲ್ಲರೂ ಬೇರೆ ಬೇರೆ ಪ್ರಾಂತ್ಯದ ಆಡಳಿತಕ್ಕೆ ಒಳಗಾಗಿ ಭಾವನಾತ್ಮಕವಾಗಿ ನೋವನ್ನು ಅನುಭವಿಸುತ್ತಿದ್ದುದು ಕರ್ನಾಟಕ ಏಕೀಕರಣದ ಕನಸಿಗೆ ಕಾರಣವಾಯಿತು. ಕನ್ನಡ ಭಾಷೆ ಮಾತನಾಡುವ ಜನರಿರುವ ಪ್ರದೇಶವೆಲ್ಲವೂ ಒಂದೇ ಆಡಳಿತಕ್ಕೆ ಒಳಗಾಗಿ ಅಖಂಡ ಕರ್ನಾಟಕವಾಗಿ ಒಡಮೂಡಬೇಕು ಎಂದು ಎಲ್ಲ ಕನ್ನಡಿಗರು ಕಂಡ ಕನಸು 1956 ರ ನವೆಂಬರ್ 1 ರಂದು ನನಸಾಯಿತು. ನಂತರ ಕನ್ನಡಿಗರ ಇನ್ನೊಂದು ಕನಸಾಗಿದ್ದ ಕನ್ನಡ ನಾಡಿನ ಹೆಸರು "ಕರ್ನಾಟಕ" ಎಂದು 1973ರ ನವೆಂಬರ್ 1 ರಂದು ಸಾಕಾರವಾಯಿತು. ಈ ಎರಡೂ ಸಂದರ್ಭಗಳು ಈಗ ಕನ್ನಡಿಗರ ಪಾಲಿಗೆ ಅವಿಸ್ಮರಣೀಯ ದಿನಗಳಾಗಿ ಪ್ರತಿ ವರ್ಷ ನವನೂತನವಾಗಿ ಚೈತನ್ಯದ ಬುಗ್ಗೆಯಾಗಿ ಮರಳಿ ಮರಳಿ ಬರುತ್ತಿವೆ.

ಈ ವರ್ಷದ ನವೆಂಬರ್ 1, ಕನ್ನಡಿಗರಿಗೆ ಇನ್ನೊಂದು ಸಂಭ್ರಮವನ್ನು ಹುಟ್ಟು ಹಾಕುತ್ತಿದೆ. ಕನ್ನಡಿಗರ ಬಹುದಿನದ ಕನಸು ನನಸಾಗಿ ಕರ್ನಾಟಕ ಏಕೀಕರಣವಾಗಿ 2016 ರ ನವೆಂಬರ್ 1 ಕ್ಕೆ 60 ವರ್ಷ ಪೂರ್ಣಗೊಳ್ಳುತ್ತಿದೆ. ಈ ಸಂಭ್ರಮವನ್ನು ನಾಡಿನಾದ್ಯಂತ "ಕರ್ನಾಟಕ ಏಕೀಕರಣ – 60 ವಜ್ರ ಮಹೋತ್ಸವ ವರ್ಷ" ಎಂದು ನಾವೆಲ್ಲರೂ ವರ್ಷ ಪೂರ್ತಿ ಸಡಗರದಿಂದ ಆಚರಿಸುವ ಸಂದರ್ಭ ಒದಗಿ ಬಂದಿದೆ.

ಕನ್ನಡ ನಾಡು ನುಡಿಗೆ ಅಪಾರ ಪ್ರೋತ್ಸಾಹ ನೀಡುತ್ತಿರುವ ಕರ್ನಾಟಕದ ಮಾನ್ಯ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯನವರು. 60ನೇ ಏಕೀಕರಣ ವರ್ಷದ ಸಂಭ್ರಮವನ್ನು ಮತ್ತಷ್ಟು ಅರ್ಥಪೂರ್ಣವಾಗಿಸಲು "ವಿಶ್ವಕನ್ನಡ ಸಮ್ಮೇಳನ"ವನ್ನು ಆಚರಿಸುವುದಾಗಿ 2016–17 ನೇ ಆಯವ್ಯಯದಲ್ಲಿ ಘೋಷಿಸಿದ್ದಾರೆ. ಈಗಾಗಲೇ ಎರಡು ವಿಶ್ವ ಕನ್ನಡ ಸಮ್ಮೇಳನಗಳು ನಮ್ಮ ಹೆಮ್ಮೆಯ ಮೈಸೂರು ಮತ್ತು ಬೆಳಗಾವಿ ನಗರಗಳಲ್ಲಿ ಯಶಸ್ವಿಯಾಗಿ ನಡೆದಿವೆ. ಈ ಸಾಲಿನ ವಿಶ್ವಕನ್ನಡ ಸಮ್ಮೇಳನ ಸಹಜವಾಗಿಯೇ ಉತ್ತರ ಕರ್ನಾಟಕದಲ್ಲಿ ನಡೆಯಬೇಕೆಂಬುದು ಬಹುಜನರ ಆಶಯವಾಗಿದೆ.

ಈ ವಿಶ್ವ ಕನ್ನಡ ಸಮ್ಮೇಳನದ ಆಶಯ ನುಡಿ **"ನಡೆ ಕನ್ನಡ – ನುಡಿ ಕನ್ನಡ – ನಡೆ ನುಡಿ ಒಂದಾದ ಕನ್ನಡ" ಎಂದಾದರೆ ಚೆನ್ನ ಎನ್ನುವುದು ನಮ್ಮ ಬಯಕೆ.**

# ಕರ್ನಾಟಕ ಏಕೀಕರಣ 60

ಡಾ॥ ಎಸ್.ನಂಜುಂಡಸ್ವಾಮಿ

> ಕನ್ನಡಿಗರನ್ನು ಬೇರೆ ಭಾಷಿಕರು, ಅವರ ಆಡಳಿತಗಳು ನಿರ್ಲಕ್ಷ್ಯ ಮಾಡಿದವು. ಕನ್ನಡ ಭಾಷೆ, ಸಂಸ್ಕೃತಿ ಅಸ್ತಿತ್ವಕ್ಕೆ ತೊಂದರೆಗಳು ಬಂದವು. ಹತ್ತೊಂಬತ್ತನೆ ಶತಮಾನದ ಕೊನೆಗೆ ಕನ್ನಡ-ಕನ್ನಡಿಗರ ಮೇಲೆ ದಬ್ಬಾಳಿಕೆ ಹೆಚ್ಚಿತು. ಹೊಸ ಶಿಕ್ಷಣ ಪದ್ಧತಿಯಲ್ಲಿ ಕಲಿತ ಕನ್ನಡಿಗರು ತಾವೆಲ್ಲ ಒಂದಾಗದಿದ್ದರೆ ಬೇರೆ ದಾರಿ ಇಲ್ಲವೆಂಬುದನ್ನು ಅರಿತು ಒಂದೇ ಆಡಳಿತದಲ್ಲಿ ಒಗ್ಗಟ್ಟಾಗಿ ನೆಲೆಸಲು ಒಂದುಗೂಡಿ ಹೋರಾಡಿ ಏಕೀಕರಣದ ಯಶಸ್ಸು ಪಡೆದರು.


1799ರಲ್ಲಿ ಟಿಪ್ಪೂವಿನ ಮರಣಾನಂತರ ಬ್ರಿಟಿಷರು, ಕನ್ನಡ ನಾಡನ್ನು ಮೂರು ಭಾಗವನ್ನಾಗಿ ಮಾಡಿದರು. ಟಿಪ್ಪೂವಿನ ಮೇಲಿನ ಯುದ್ಧದಲ್ಲಿ ಆಗಿದ್ದ ಒಪ್ಪಂದದಂತೆ ಬ್ರಿಟಿಷರು ಹೈದರಾಬಾದಿನ ನಿಜಾಮ ಮತ್ತು ಮರಾಠರಿಗೂ ಕರ್ನಾಟಕ ರಾಜ್ಯದಲ್ಲಿ ಪಾಲು ನೀಡಬೇಕಾಗಿತ್ತು. ಒಂಬತ್ತು ಜಿಲ್ಲೆಗಳಿಂದ ಕೂಡಿದ ಹಳೆಯ ಮೈಸೂರು ಸಂಸ್ಥಾನವನ್ನು ಮೈಸೂರು ಅರಸರಿಗೂ, ಈಶಾನ್ಯ ಭಾಗದ ಕನ್ನಡ ತೆಲುಗು, ಮರಾಠಿ, ಉರ್ದು ಭಾಷಿಕ ಪ್ರದೇಶಗಳಾದ ರಾಯಚೂರು, ಕಲಬುರ್ಗಿ, ಲಿಂಗಸೂಗೂರು, ಬೀದರ್, ಉಸ್ಮಾನಾಬಾದ್ ಪ್ರದೇಶಗಳನ್ನು ಹೈದರಾಬಾದ್ ನಿಜಾಮರಿಗೂ ಹಂಚಿಕೆ ಮಾಡಿದರು.

ದಕ್ಷಿಣ ಕನ್ನಡ, ಬಳ್ಳಾರಿ, ನೀಲಗಿರಿ, ಕೊಳ್ಳೇಗಾಲ, ಹೊಸೂರು ಪ್ರದೇಶಗಳನ್ನು ತಮ್ಮದೇ ಆದ ಮದ್ರಾಸ್ ಸರ್ಕಾರಕ್ಕೂ ಸೇರಿಸಿಕೊಂಡರು. ಕೊಡಗಿನ ಅರಸರ ಪತನದ ನಂತರ ಕೊಡಗುರಾಜ್ಯವು ಸಹ ಬ್ರಿಟಿಷರಿಗೆ ಸೇರಿತು. ಅದಕ್ಕೆ ಅವರು ಪ್ರತ್ಯೇಕ ರಾಜ್ಯದ ಸ್ಥಾನ ನೀಡಿದರು. ತುಂಗಭದ್ರಾ ನದಿಯ ಉತ್ತರಕ್ಕಿದ್ದ ಕರ್ನಾಟಕದ ಬಹುಭಾಗ ಮರಾಠಾ ಪೇಶ್ವೆಗಳಿಗೆ ದೊರೆಯಿತು. ಕ್ರಿ.ಶ.1818ರವರೆಗೆ ಮರಾಠಾ ಪೇಶ್ವೆಗಳೇ ಈ ಪ್ರದೇಶವನ್ನು ಆಳುತ್ತಿದ್ದರು. ಆದರೆ ಪೇಶ್ವೆಗಳ ಆಡಳಿತ ಕೊನೆಗೊಂಡಾಗ, ಅವೆಲ್ಲವೂ ಬ್ರಿಟಿಷರ ವಶವಾಗಿ ಮುಂಬಯಿ ಪ್ರಾಂತ್ಯಕ್ಕೆ ಸೇರಿದವು.

ಈ ಪ್ರದೇಶದಲ್ಲಿ ಬ್ರಿಟಿಷರು 1881ರ ಹೊತ್ತಿಗೆ ಧಾರವಾಡ, ಬಿಜಾಪುರ, ಬೆಳಗಾವಿ, ಕನ್ನಡ (ಉತ್ತರ ಕನ್ನಡ) ಜಿಲ್ಲೆಗಳನ್ನು ರಚಿಸಿ, ತಮ್ಮದೇ ಆದ ಮುಂಬಯಿ ಪ್ರಾಂತ್ಯಕ್ಕೆ ಸೇರಿಸಿಕೊಂಡರು. ಕರ್ನಾಟಕದ ಉತ್ತರ ಭಾಗದಲ್ಲಿ ಇದ್ದ ಅನೇಕ ಸಣ್ಣ ಸಣ್ಣ ಕನ್ನಡದ ಸಂಸ್ಥಾನಗಳ ಆಡಳಿತವನ್ನು ಮರಾಠಿ ಸಂಸ್ಥಾನಿಕರಿಗೇ ವಹಿಸಿದರು. ಈ ಸಂಸ್ಥಾನಗಳಲ್ಲಿ ಕನ್ನಡ ಭಾಷಿಕರೇ ಬಹುಸಂಖ್ಯಾತರಾಗಿದ್ದರು, ಆದರೆ ಆಳ್ವಿಕೆ ನಡೆಸುವ ಸಂಸ್ಥಾನಿಕರಲ್ಲಿ ಹೆಚ್ಚಿನವರು ಮರಾಠರೇ ಆಗಿದ್ದರು. ಮರಾಠಿ ಮತ್ತು ಬ್ರಿಟಿಷ್ ಅಧಿಕಾರಿಗಳು ಆಡಳಿತ ಸೂತ್ರ ಹಿಡಿದಿದ್ದರು. ಹೀಗಾಗಿ ಅವರು ಕನ್ನಡವನ್ನು ಕಡೆಗಣಿಸಿ, ಸರ್ಕಾರದ ವ್ಯವಹಾರಗಳಲ್ಲಿ, ವಿದ್ಯಾಭ್ಯಾಸದಲ್ಲಿ ಮರಾಠಿ ಭಾಷೆಗೆ ಪ್ರೋತ್ಸಾಹ ನೀಡಿದರು. ಜನರೂ ಗತ್ಯಂತರವಿಲ್ಲದೆ ಮರಾಠಿ ಕಲಿಯಬೇಕಾಯಿತು. ಇದರಿಂದ ಉತ್ತರ ಭಾಗದಲ್ಲಿ ಮರಾಠಿಯೂ, ಹಳೆಯ ಮೈಸೂರು ಸಂಸ್ಥಾನದಲ್ಲಿ ಕನ್ನಡ ಭಾಷೆಯೂ ಉಳಿದು ಬೆಳೆಯಲು ಕಾರಣವಾಯಿತು.



ಹೈದರಾಬಾದ್ ಪ್ರಾಂತ್ಯದಲ್ಲಿ ಕನ್ನಡವೂ ಸೇರಿದಂತೆ ಇತರ ಭಾಷೆಗಳು ಕಡೆಗಣಿಸಲ್ಪಟ್ಟು, ಉರ್ದು ರಾಜ್ಯಭಾಷೆಯಾಯಿತು. ಮುಂಬಯಿ ಸರ್ಕಾರಕ್ಕೆ ಸೇರಿದ ಜಿಲ್ಲೆಗಳಲ್ಲಿ ಮರಾಠಿ ಪ್ರಾಬಲ್ಯದ ನಡುವೆಯೂ ಬ್ರಿಟಿಷ್ ಮತ್ತು ಕನ್ನಡದ ಅಧಿಕಾರಿಗಳ ನೆರವಿನಿಂದ ಕನ್ನಡ ಭಾಷೆಯು ಉಳಿದು ಬೆಳೆದು ಬಂದಿತು. ದಕ್ಷಿಣ ಕನ್ನಡ, ಕೊಡಗಿನಲ್ಲಿ ಕನ್ನಡ ಭಾಷೆ ಪ್ರಾಧಾನ್ಯತೆ ಪಡೆಯಿತು. ಕೊಳ್ಳೇಗಾಲ ಪ್ರದೇಶದಲ್ಲಿ ತಮಿಳು ಭಾಷೆ ಸಂಪರ್ಕ ಮತ್ತು ಆಡಳಿತ ಭಾಷೆಯಾಯಿತು.



### ಹರಿದು ಹಂಚಿ ಹೋಗಿದ್ದ ಕರ್ನಾಟಕ

ಬ್ರಿಟಿಷರ ಕಾಲದಲ್ಲಿ ವಸಾಹತು ನೀತಿ ಮತ್ತು ಆಡಳಿತದ ಅನುಕೂಲದ ದೃಷ್ಟಿಯಿಂದ ಉತ್ತರ ಕರ್ನಾಟಕವು ಈ ಕೆಳಗೆ ನಮೂದಿಸಿದಂತೆ, ಸುಮಾರು 20 ಘಟಕಗಳಲ್ಲಿ ಹರಿದು ಹಂಚಿಹೋಗಿತ್ತು. ಈ ಹಂಚಿಕೆಯಲ್ಲಿ ಭಾಷೆಗೆ, ಜನರ ಅಭೀಪ್ಸೆ ಆಕಾಂಕ್ಷೆಗಳಿಗೆ ಯಾವುದೇ ಪ್ರಾಧಾನ್ಯತೆಯೂ ಇರಲಿಲ್ಲ. ಸ್ಥಳೀಯವಾಗಿ ತಮಗೆ ಅನುಕೂಲಕರವಾದ ರೀತಿಯಲ್ಲಿ ನಡೆದುಕೊಂಡು ಕಂಪನಿ ಸರ್ಕಾರಕ್ಕೆ ರಾಜರಿಗೆ, ದೇಸಗತಿಯವರಿಗೆ ಬ್ರಿಟಿಷರು 1) ಮದ್ರಾಸ್ ಪ್ರಾಂತ್ಯ- ದಕ್ಷಿಣ ಕನ್ನಡ, ಬಳ್ಳಾರಿ, ನೀಲಗಿರಿ ಜಿಲ್ಲೆಗಳು, ಕೊಳ್ಳೇಗಾಲ, ಹೊಸೂರು, ಮಡಕಶಿರಾ ತಾಲ್ಲೂಕುಗಳು. 2) ಮುಂಬಯಿ ಪ್ರಾಂತ್ಯ- ಉತ್ತರ ಕನ್ನಡ, ಬೆಳಗಾವಿ, ಧಾರವಾಡ, ಬೆಳಗಾವಿ ಜಿಲ್ಲೆಗಳು. ಸೊಲ್ಲಾಪುರ ಮತ್ತು ಮಂಗಳವೇಡೆ ಪ್ರಾಂತ್ಯಗಳು, 3) ಹೈದರಾಬಾದ್ ಸಂಸ್ಥಾನ- ಗುಲಬರ್ಗಾ, ಬೀದರ್, ರಾಯಚೂರು ಜಿಲ್ಲೆಗಳು. 4) ಕೊಡಗು ಜಿಲ್ಲೆ, 5)ಕೊಲ್ಲಾಪುರ ಸಂಸ್ಥಾನ- ರಾಯ್‌ಭಾಗ್, ಕಡಕೊಳ, ತೋರಗಲ್ಲು, 6)ಸಾಂಗಲಿ ಸಂಸ್ಥಾನ- ತೇರದಾಳ, ಶಹಾಪೂರ, ದೊಡ್ಡವಾಡ, ಶಿರಹಟ್ಟಿ, 7) ದೊಡ್ಡ ಮೀರಜ್ ಸಂಸ್ಥಾನ, ಲಕ್ಷ್ಮೇಶ್ವರ, 8)ಚಿಕ್ಕ ಮೀರಜ್ ಸಂಸ್ಥಾನ- ಬುಧಗಾಂವ್, ಗುಡಗೇರಿ. 9)ಹಿರಿಯ ಕುಂದರವಾಡ ಸಂಸ್ಥಾನ, 10) ಕಿರಿಯ ಕುಂದರವಾಡ ಸಂಸ್ಥಾನ 11) ಜಮಖಂಡಿ ಸಂಸ್ಥಾನ- ಕುಂದಗೋಳ್, ಚಿಪ್ಪಲಕಟ್ಟಿ, 12)ಮುಧೋಳ್ ಸಂಸ್ಥಾನ, 13)ಜತ್ ಸಂಸ್ಥಾನ, 14)ಅಕ್ಕಲಕೋಟೆ ಸಂಸ್ಥಾನ, 15)ಔಂಧ್ ಸಂಸ್ಥಾನ, 16)ರಾಮದುರ್ಗ ಸಂಸ್ಥಾನ, 17)ಸೊಂಡೂರು ಸಂಸ್ಥಾನ, 18)ಸವಣೂರು ನವಾಬರ ಸಂಸ್ಥಾನ 19)ಬೆಂಗಳೂರು ದಂಡು ಪ್ರದೇಶ, 20) ಬೆಳಗಾವಿ ದಂಡು ಪ್ರದೇಶ, 21) ಬಳ್ಳಾರಿ ದಂಡು ಪ್ರದೇಶ

> ಕನ್ನಡಿಗರಲ್ಲಿ ಕರ್ನಾಟಕತ್ವ ಜಾಗೃತವಾಗಲು ಈ ಭಾಗದ ಅನೇಕ ಆಂಗ್ಲ ಮತ್ತು ಕನ್ನಡದ ಅಧಿಕಾರಿಗಳು, ಮಿಷನರಿಗಳು, ಕನ್ನಡ ವಿದ್ವಾಂಸರು, ಕನ್ನಡ ಸಂಘ ಸಂಸ್ಥೆಗಳನ್ನು ಕಟ್ಟಿ ಕಾರಣಕರ್ತರಾದರು. ಕರ್ನಾಟಕದ ಹುಲಿ ಡೆಪ್ಯುಟಿ ಚನ್ನಬಸಪ್ಪನವರು, ಸರ್ ವಾಲ್ಟರ್ ಎಲಿಯಟ್, ರಸೆಲ್, ಹೂಲಿ, ವಿರೂಪಾಕ್ಷಪ್ಪ, ಮೊದಲಾದ ಅಧಿಕಾರಿಗಳ ಪ್ರಯತ್ನದಿಂದ ಉತ್ತರ ಕರ್ನಾಟಕದಲ್ಲಿ ಕನ್ನಡ ಶಾಲೆಗಳು ಆರಂಭವಾದವು.

### ಕರ್ನಾಟಕದ ಏಕೀಕರಣ

ಹರಿದು ಹಂಚಿಹೋಗಿದ್ದ ಕನ್ನಡ ನಾಡು ಒಂದಾಗಿ ಏಕೀಕೃತ ಕರ್ನಾಟಕ ರಾಜ್ಯವಾಗಲು ಹಲವಾರು ಸಂಘ ಸಂಸ್ಥೆಗಳು, ಅವುಗಳನ್ನು ಕಟ್ಟಿದ ನೂರಾರು ಸಾರ್ವಜನಿಕರು ತ್ರಿಕರಣಪೂರ್ವಕವಾಗಿ, ನಾಡು ನುಡಿಯ ಅಭಿಮಾನದಿಂದ ಅಹರ್ನಿಶಿ ಶ್ರಮಿಸಿದ್ದಾರೆ. ಅಂತಹ ಕೆಲವು ಸಂಘಸಂಸ್ಥೆಗಳು ಮತ್ತು ವ್ಯಕ್ತಿಗಳು ನಿರ್ವಹಿಸಿದ ಮಹತ್ ಕಾರ್ಯದ ಸ್ಥೂಲ ಪರಿಚಯವನ್ನು ಈ ಕೆಳಗಿನಂತೆ ಸಂಗ್ರಹವಾಗಿ ಮಾಡಿಕೊಳ್ಳಬಹುದು.

ಸುಮಾರು 1800ರಲ್ಲಿ ಬಳ್ಳಾರಿಯ ಕಲೆಕ್ಟರ್ ಆಗಿದ್ದ ಥಾಮಸ್ ಮನ್ರೋ ಉತ್ತರ ಕರ್ನಾಟಕ ಪ್ರದೇಶವು ಮರಾಠಾ ಪ್ರದೇಶವಲ್ಲ, ಇಲ್ಲಿ ಕನ್ನಡಿಗರೇ ಹೆಚ್ಚಾಗಿದ್ದಾರೆ, ಆದುದರಿಂದ ಈ


ಸೀಮೆಯನ್ನು ಮತ್ತು ಸೊಂಡೂರು ಸೀಮೆಯನ್ನು ಮೈಸೂರು ಸಂಸ್ಥಾನಕ್ಕೆ ಸೇರಿಸುವುದು ಒಳ್ಳೆಯದೆಂದು ಕಂಪನಿ ಸರ್ಕಾರಕ್ಕೆ ವರದಿಯನ್ನು ನೀಡಿದನು. ಆದರೆ 1830ರಲ್ಲಿ ಕಂಪನಿ ಸರ್ಕಾರವು ಈ ಪ್ರದೇಶವನ್ನು ಮುಂಬಯಿ ಪ್ರಾಂತ್ಯಕ್ಕೆ ಸೇರಿಸಿ, ಈ ಭಾಗದ ಆಡಳಿತ ಭಾಷೆ ಕನ್ನಡವೇ ಆಗಿರಬೇಕೆಂದು 1835ರಲ್ಲಿ ಆದೇಶ ಹೊರಡಿಸಿತು. ಆದರೆ ಅಧಿಕಾರಿಗಳು ಮರಾಠಿಗರು ಮತ್ತು ಆಂಗ್ಲರು ಆಗಿದ್ದರಿಂದ ಈ ಆದೇಶ ಸರಿಯಾಗಿ ಜಾರಿಗೆ ಬರಲಿಲ್ಲ.

ಕನ್ನಡಿಗರಲ್ಲಿ ಕರ್ನಾಟಕತ್ವ ಜಾಗೃತವಾಗಲು ಈ ಭಾಗದ ಅನೇಕ ಆಂಗ್ಲ ಮತ್ತು ಕನ್ನಡದ ಅಧಿಕಾರಿಗಳು, ಮಿಷನರಿಗಳು, ಕನ್ನಡ ವಿದ್ವಾಂಸರು, ಕನ್ನಡ ಸಂಘ ಸಂಸ್ಥೆಗಳನ್ನು ಕಟ್ಟಿ ಕಾರಣಕರ್ತರಾದರು. ಕರ್ನಾಟಕದ ಹುಲಿ ಡೆಪ್ಯುಟಿ ಚನ್ನಬಸಪ್ಪನವರು, ಸರ್ ವಾಲ್ಟರ್ ಎಲಿಯಟ್, ರಸೆಲ್, ಹೂಲಿ, ವಿರೂಪಾಕ್ಷಪ್ಪ, ಮೊದಲಾದ ಅಧಿಕಾರಿಗಳ ಪ್ರಯತ್ನದಿಂದ ಉತ್ತರ ಕರ್ನಾಟಕದಲ್ಲಿ ಕನ್ನಡ ಶಾಲೆಗಳು ಆರಂಭವಾದವು. ಇವರ ಪ್ರಯತ್ನದ ಫಲವಾಗಿ ಕನ್ನಡ ಶಿಕ್ಷಕರನ್ನು ತಯಾರು ಮಾಡಲು 1856ರಲ್ಲಿ ಧಾರವಾಡದಲ್ಲಿ ನಾರ್ಮಲ್ ಸ್ಕೂಲ್ ಆರಂಭವಾಯಿತು. ಡೆಪ್ಯುಟಿ ಚನ್ನಬಸಪ್ಪನವರೇ ಈ ಶಾಲೆಯ ಮೊದಲ ಪ್ರಾಂಶುಪಾಲರಾಗಿ ಬಂದು ಶಿಕ್ಷಣಕ್ರಮದಲ್ಲಿ ಕನ್ನಡ ಭಾಷೆಯು ಬೇರೂರಿ ತಲೆಯೆತ್ತಲು ಕಾರಣರಾದರು.

### ಕರ್ಣಾಟಕ ವಿದ್ಯಾವರ್ಧಕ ಸಂಘ

ಕನ್ನಡವು ಶಿಕ್ಷಣ ಮಾಧ್ಯಮವಾಗಿ ಕನ್ನಡಿಗರಲ್ಲಿ ಜಾಗೃತಿ ಮೂಡಲು ಕಾರಣವಾದುದು ಒಂದೆಡೆಯಾದರೆ, ಇನ್ನೊಂದೆಡೆ, ಕರ್ನಾಟಕದ ಇತಿಹಾಸ, ಸಾಹಿತ್ಯ, ಸಂಸ್ಕೃತಿ ಮೊದಲಾದವುಗಳ ಬಗ್ಗೆ ಕನ್ನಡ ಭಾಷಿಕರಲ್ಲಿ ಅಭಿಮಾನ ಮೂಡಿಸಿ, ಕನ್ನಡಿಗರನ್ನು ಒಂದಾಗಿಸುವ ಪ್ರಯತ್ನಗಳ ಫಲವಾಗಿ ಧಾರವಾಡದಲ್ಲಿ "ಕರ್ನಾಟಕ ವಿದ್ಯಾವರ್ಧಕ ಸಂಘ"ವು 20–7–1890ರಂದು ಸ್ಥಾಪನೆಯಾಯಿತು. ಮುಂಬಯಿ ವಿ.ವಿ.ಯಲ್ಲಿ 1884ರಲ್ಲಿ ಕನ್ನಡ ಎಂ.ಎ. ಪದವಿ ಪಡೆದು, ಮುಖ್ಯೋಪಾಧ್ಯಾಯರಾಗಿ, ನಂತರ ಕನ್ನಡ ಜಿಲ್ಲೆಯಲ್ಲಿ ಶಿಕ್ಷಣಾಧಿಕಾರಿಗಳಾಗಿದ್ದ ರಾಮಚಂದ್ರ ಹಣಮಂತ ದೇಶಪಾಂಡೆಯವರು ಈ ಸಂಸ್ಥೆಯು ಪ್ರಾರಂಭವಾಗಲು ಕಾರಣಕರ್ತರು ಹಾಗೂ ಇದರ ಮೊದಲ ಕಾರ್ಯದರ್ಶಿಗಳು. ಕೈಕಿಣಿ ಶ್ಯಾಮರಾವ್ ಅವರು ಇದರ ಮೊದಲ ಅಧ್ಯಕ್ಷರು. ವೆಂಕಟರಂಗೋಕಟ್ಟಿ, ಗುರುಸಿದ್ಧಪ್ಪಾ ಗಿಲಗಂಚಿ, ಫ.ಗು.ಹಳಕಟ್ಟಿ, ಶಾಂತಕವಿ(ಸಕ್ಕರಿ ಬಾಳಾಚಾರ್ಯ), ದೋಂಡೋ ನರಸಿಂಹ ಮುಳಬಾಗಿಲ್, ರಾಮರಾವ್ ದೇಸಾಯಿ, ಶಾಂತವೀರಪ್ಪ ಮೆಣಸಿನಕಾಯಿ, ಮಡಿವಾಳೇಶ್ವರ ತುರಮರಿ, ವಿರೂಪಾಕ್ಷಪ್ಪ ಹೂಲಿ, ಶಿವನಪ್ಪ ದೇಸಾಯಿ, ಗುರಾಚಾರ್ಯ ಮೊರಬ್, ರೊದ್ದ ಶ್ರೀನಿವಾಸರಾಯರು, ಶೇಷಗಿರಿರಾವ್ ಕೊಪ್ಪಿಕರ್, ಇವರುಗಳೆಲ್ಲಾ ಈ ಸಂಸ್ಥೆಯ ವ್ಯವಸ್ಥಾಪಕರಾಗಿದ್ದರು.

ಈ ಸಂಸ್ಥೆಯು 1896ರ ನವೆಂಬರ್ ತಿಂಗಳಲ್ಲಿ "ವಾಗ್ಭೂಷಣ" ಎಂಬ ಮಾಸಪತ್ರಿಕೆಯನ್ನು ಪ್ರಾರಂಭಿಸಿ, ಕನ್ನಡ ಭಾಷೆ, ಸಾಹಿತ್ಯ, ಕರ್ನಾಟಕದ ಇತಿಹಾಸ, ಕರ್ನಾಟಕದ ಏಕೀಕರಣ ಮೊದಲಾದ ವಿಷಯಗಳ ಬಗ್ಗೆ ಲೇಖನಗಳನ್ನು ಪ್ರಕಟಿಸತೊಡಗಿತು. ಈ ಪತ್ರಿಕೆಯಲ್ಲಿ ಕನ್ನಡದ ಕುಲಪುರೋಹಿತರೆನಿಸಿದ ಆಲೂರು ವೆಂಕಟರಾಯರು 1907ರಲ್ಲಿ "ಕರ್ನಾಟಕವು ಒಂದಾಗದೇ ಕರ್ನಾಟಕಸ್ಥರ ಏಳಿಗೆಯು



ಧಾರವಾಡದ ಕರ್ಣಾಟಕ ವಿದ್ಯಾವರ್ಧಕ ಸಂಘ



ಎಂದಿಗೂ ಸಾಧ್ಯವಾಗದು" ಎಂಬ ಧೀರೋದಾತ್ತ ಲೇಖನವನ್ನು ಪ್ರಕಟಿಸಿದರು. ಈ ಲೇಖನವೇ ಮುಂದೆ ಕರ್ನಾಟಕ ಏಕೀಕರಣದ ಬೀಜಮಂತ್ರವಾಯಿತೆಂದು ಹೇಳಬಹುದು. ಈ ಪತ್ರಿಕೆಯು 23 ವರ್ಷಗಳ ಕಾಲ ನಡೆದು ನಿಂತು ಹೋಯಿತು. ಈ ಪತ್ರಿಕೆ ಪ್ರಾರಂಭವಾದ ತಿಂಗಳಲ್ಲೇ 1956ರಲ್ಲಿ ಕರ್ನಾಟಕದ ಏಕೀಕರಣವಾದುದು ಕಾಕತಾಳೀಯ. ಈ ಸಂಸ್ಥೆಯು 1907ರ ಜೂನ್ ತಿಂಗಳಲ್ಲಿ ಧಾರವಾಡದಲ್ಲಿ ಅಖಿಲ ಕರ್ನಾಟಕ ಮಟ್ಟದ ಗ್ರಂಥಕರ್ತರ ಸಮ್ಮೇಳವನ್ನು ನಡೆಸಿ "ಕರ್ನಾಟಕ ಪುಸ್ತಕ ಮಾಲೆ" ಎಂಬ ಹೆಸರಿನಲ್ಲಿ ಕನ್ನಡ ನಾಡು ನುಡಿ ಇತಿಹಾಸದ ಬಗ್ಗೆ ಪ್ರಸಿದ್ಧ ಲೇಖಕರಿಂದ ಕೃತಿಗಳನ್ನು ಬರೆಸಿ ಪ್ರಕಟಿಸಲು ತೀರ್ಮಾನಿಸಿತು. ಅದರಂತೆ ಒಟ್ಟು ಸುಮಾರು 61 ಗ್ರಂಥಗಳು ಈ ಸಂಸ್ಥೆಯಿಂದ ಪ್ರಕಟವಾದವು. 1910ರ ವೇಳೆಗೆ ಆಲೂರು ವೆಂಕಟರಾಯರು "ಕರ್ನಾಟಕದ ಗತ ವೈಭವ" ಎಂಬ ಕೃತಿಯನ್ನು ಪ್ರಕಟಿಸಿದರು. ಇದು ಕನ್ನಡ ಜನತೆಯಲ್ಲಿ ಕರ್ನಾಟಕ ಏಕೀಕರಣದ ಬಗ್ಗೆ ಜಾಗೃತಿಯನ್ನು ಮೂಡಿಸಿತು. ಈ ಗ್ರಂಥಗಳನ್ನು ಸಂಗ್ರಹಿಸಿ ಪುನರ್‌ಮುದ್ರಿಸುವ ಕೆಲಸವನ್ನು ಸರ್ಕಾರ ಮತ್ತು ಸಾಹಿತ್ಯ ಪರಿಷತ್ತು ಮಾಡಬೇಕಾಗಿದೆ. ಕರ್ನಾಟಕ ವಿದ್ಯಾವರ್ಧಕ ಸಂಘಕ್ಕೆ ಮೈಸೂರು ಸಂಸ್ಥಾನದಿಂದಲೂ ಪ್ರೋತ್ಸಾಹ ದೊರೆಯಿತು. ಮೈಸೂರು ಮಹಾರಾಜ ಚಾಮರಾಜ ಒಡೆಯರ್ ಅವರು ಈ ಸಂಸ್ಥೆಯ ಕಟ್ಟಡಕ್ಕೆ 6000 ರೂ.ಗಳ ಧನಸಹಾಯ ಮಾಡಿದರು. ಕರ್ನಾಟಕ ವಿದ್ಯಾವರ್ಧಕ ಸಂಘದ ಕಟ್ಟಡಕ್ಕೆ ಶ್ರೀ ಜಯಚಾಮರಾಜ ಮಂದಿರ ಎಂಬ ಹೆಸರನ್ನು ಇಡಲಾಗಿದೆ. ಈ ಸಂಘವು ಕನ್ನಡ ನಾಡಿನ ಇತಿಹಾಸದಲ್ಲಿ ಶಾಶ್ವತವಾದ ಸ್ಥಾನವನ್ನು ಪಡೆದಿದೆ.





ಕನ್ನಡ ಸಾಹಿತ್ಯ ಪರಿಷತ್ತು

"ಕರ್ಣಾಟಕ ಭಾಷೆಯಲಿ ವಿವಿಧ ಗ್ರಂಥಗಳನ್ನು ರಚಿಸುವವರ ಪ್ರೋತ್ಸಾಹಕ್ಕಾಗಿ ಸ್ವತಂತ್ರಾಧಿಕಾರವುಳ್ಳ ಪರಿಷತ್ತೊಂದು ಇರಬೇಕು ಮತ್ತು ಸರ್ಕಾರದವರು ಆ ಪರಿಷತ್ತನ್ನು ಅಂಗೀಕರಿಸಿ ಅದಕ್ಕೆ ವಿಶೇಷ ಸಹಾಯ ಮಾಡುವುದು ಉಚಿತವೆಂದು ಸಂಪದಭ್ಯುದಯ ಸಮಾಜವು ಸರ್ಕಾರಕ್ಕೆ ಶಿಫಾರಸ್ಸು ಮಾಡಬೇಕು"

### ಕರ್ಣಾಟಕ (ಕನ್ನಡ) ಸಾಹಿತ್ಯ ಪರಿಷತ್ತು

ಉತ್ತರ ಕರ್ನಾಟಕದಲ್ಲಿ ಪ್ರಖ್ಯಾತವಾಗಿದ್ದ ಕರ್ಣಾಟಕ ವಿದ್ಯಾವರ್ಧಕ ಸಂಘದಂತಹ ಒಂದು ಸಂಸ್ಥೆಯು ಮೈಸೂರು ಸಂಸ್ಥಾನದಲ್ಲಿಯೂ ಇರಬೇಕೆಂಬುದು ಇಲ್ಲಿನ ವಿದ್ವಾಂಸರ, ಜನರ ಅಪೇಕ್ಷೆಯಾಗಿತ್ತು. 1915ರಲ್ಲಿ ಕರ್ನಾಟಕದ ಸಾಹಿತಿಗಳ ಮೊದಲ ಸಭೆಯು ಹಾಸನದಲ್ಲಿ ನಡೆದು ಅಖಿಲ ಕರ್ನಾಟಕ ಸಾಹಿತ್ಯ ಪರಿಷತ್ತು ಎಂಬ ಸಂಸ್ಥೆಯನ್ನು ಬೆಂಗಳೂರಿನಲ್ಲಿ ಸ್ಥಾಪಿಸಬೇಕೆಂದು ನಿರ್ಣಯಿಸಿತು.

ನಾಲ್ವಡಿ ಕೃಷ್ಣರಾಜ ಒಡೆಯರ ಆಡಳಿತದಲ್ಲಿ ಸರ್.ಎಮ್.ವಿಶ್ವೇಶ್ವರಯ್ಯನವರು ದಿವಾನರಾಗಿದ್ದಾಗ ಮೈಸೂರು ಸಂಸ್ಥಾನದ ಸಂಪದಭ್ಯುದಯ ಸಮಾಜದ 1914ನೇ ಇಸವಿಯ ವಾರ್ಷಿಕ ಸಮ್ಮೇಳನದಲ್ಲಿ ಇಂತಹ ಒಂದು ಸಂಸ್ಥೆಯ ಸ್ಥಾಪನೆಯ ಬಗ್ಗೆ "ಕರ್ಣಾಟಕ ಭಾಷೆಯಲಿ ವಿವಿಧ ಗ್ರಂಥಗಳನ್ನು ರಚಿಸುವವರ ಪ್ರೋತ್ಸಾಹಕ್ಕಾಗಿ ಸ್ವತಂತ್ರಾಧಿಕಾರವುಳ್ಳ ಪರಿಷತ್ತೊಂದು ಇರಬೇಕು ಮತ್ತು ಸರ್ಕಾರದವರು ಆ ಪರಿಷತ್ತನ್ನು ಅಂಗೀಕರಿಸಿ ಅದಕ್ಕೆ ವಿಶೇಷ ಸಹಾಯ ಮಾಡುವುದು ಉಚಿತವೆಂದು ಸಂಪದಭ್ಯುದಯ ಸಮಾಜವು ಸರ್ಕಾರಕ್ಕೆ ಶಿಫಾರಸ್ಸು ಮಾಡಬೇಕು" ಎಂಬ ನಿರ್ಣಯವನ್ನು ಕೈಗೊಳ್ಳಲಾಯಿತು.

ಈ ನಿರ್ಣಯವನ್ನು ಅನುಸರಿಸಿ ಬೆಂಗಳೂರಿನ ಗೌರ್ನಮೆಂಟ್ ಹೈಸ್ಕೂಲಿನಲ್ಲಿ 1915ನೇ ಇಸವಿ ಮೇ 5 ರಂದು ಒಂದು ಸಭೆಯು ಸೇರಿತು. ಈ ಸಭೆಗೆ ಮೈಸೂರು ಸಂಸ್ಥಾನದ ಜೊತೆಗೆ ಕನ್ನಡ ನಾಡಿನ ಇತರ ಭಾಗಗಳಾದ, ಬೆಳಗಾವಿ, ಕಾರವಾರ, ಬೊಂಬಾಯಿ, ಮದ್ರಾಸು, ಧಾರವಾಡ, ಬಳ್ಳಾರಿ, ದಕ್ಷಿಣ ಕನ್ನಡ ಜಿಲ್ಲೆ, ಕೊಡಗು ಮೊದಲಾದ ಎಲ್ಲ ಕಡೆಗಳಿಂದಲೂ ಜನರು ವಿದ್ವಾಂಸರು ಬಂದಿದ್ದರು. ನಿರ್ಣಯದಲ್ಲಿ ಕರ್ಣಾಟಕ ಮತ್ತು ಪರಿಷತ್ತು ಎಂಬ ಎರಡು ಪದಗಳ ಮಧ್ಯೆ ಸಾಹಿತ್ಯ ಎಂಬ ಒಂದು ಪದವನ್ನು ಸೇರಿಸಿ 'ಕರ್ಣಾಟಕ ಸಾಹಿತ್ಯ ಪರಿಷತ್ತು' ಎಂಬ ಸಂಸ್ಥೆಯನ್ನು ಸ್ಥಾಪಿಸಲು ಸರ್ವಾನುಮತದಿಂದ ತೀರ್ಮಾನಿಸಲಾಯಿತು. ಅದರಿಂದಾಗಿ ಈ ಸಂಸ್ಥೆಗೆ ಅಖಿಲ ಕರ್ಣಾಟಕದ ಸ್ವರೂಪ ಬಂದಿತು.

ಈ ಸಂಸ್ಥೆಯ ಸ್ಥಾಪನೆಗೆ ಸಹಾಯ ಮಾಡಿದ ಮಹನೀಯರೆಂದರೆ, ಸರ್ದಾರ್ ಕಾಂತರಾಜ ಅರಸ್, ಎಚ್.ವಿ.ನಂಜುಂಡಯ್ಯ, ಎಂ. ಶಾಮರಾವ್, ಎಂ.ಎಸ್.ಪುಟ್ಟಣ್ಣ, ಕೆ.ಪಿ.ಪುಟ್ಟಣ್ಣ ಶೆಟ್ಟರು, ಹೆಚ್. ಲಿಂಗರಾಜ ಅರಸ್, ಕರ್ಪೂರ ಶ್ರೀನಿವಾಸರಾವ್, ಬಿ.ಕೃಷ್ಣಪ್ಪ, ಸೋಸಲೆ ಅಯ್ಯಾಶಾಸ್ತ್ರಿ, ಮುದವೀಡು ಕೃಷ್ಣರಾವ್ ಕೆರೂರು ವಾಸುದೇವಾಚಾರ್ಯ, ಚ. ವಾಸುದೇವಯ್ಯ, ಆಲೂರು ವೆಂಕಟರಾಯರು ಮೊದಲಾದವರು. ಕರ್ಣಾಟಕ ಸಾಹಿತ್ಯ ಪರಿಷತ್ತು, ಮೈಸೂರು ಸಂಸ್ಥಾನದಿಂದ ಹೊರಗೆ ಬೀದರ್, ಗುಲಬರ್ಗಾ, ಬೆಳಗಾವಿ, ಧಾರವಾಡ, ರಾಯಚೂರು, ಬಳ್ಳಾರಿ, ಆದವಾನಿ, ಸೊಲ್ಲಾಪುರ, ರಬಕವಿ, ಮದ್ರಾಸ್, ಕಾಸರಗೋಡು ಮೊದಲಾದ ಕಡೆ ವಾರ್ಷಿಕ ಸಾಹಿತ್ಯ ಸಮ್ಮೇಳನಗಳನ್ನು ನಡೆಸಿ ಕನ್ನಡ ಜನರನ್ನು ಒಂದುಗೂಡಿಸಿ ಕರ್ನಾಟಕ ಏಕೀಕರಣಕ್ಕಾಗಿ ಒತ್ತಾಯಿಸಿ ನಿರ್ಣಯಗಳನ್ನು

ಕೈಗೊಳ್ಳುತ್ತಾ ಬಂದಿತು. "ಕನ್ನಡ ನುಡಿ" ಎಂಬ ಮಾಸಪತ್ರಿಕೆಯನ್ನು ಪ್ರಾರಂಭಿಸಿ, ಕರ್ನಾಟಕ ಏಕೀಕರಣಕ್ಕೆ ಸಂಬಂಧಿಸಿದಂತೆ ಅನೇಕ ಲೇಖನಗಳನ್ನು ಪ್ರಕಟಿಸಿತು.

**ಕರ್ನಾಟಕ ಪ್ರದೇಶ ಕಾಂಗ್ರೆಸ್ ಹಾಗೂ ಇತರ ಕೆಲವು ಸಂಸ್ಥೆಗಳು**

1905ರಲ್ಲಿ ಸ್ವದೇಶಿ ಚಳವಳಿ ಪ್ರಾರಂಭವಾದಾಗ, ಅಖಿಲ ಭಾರತ ಕಾಂಗ್ರೆಸ್ ಸಮಿತಿಯಲ್ಲಿ ಕರ್ನಾಟಕಕ್ಕೆ ವಿಶೇಷ ಸ್ಥಾನಮಾನ ದೊರೆಯಬೇಕೆಂಬ ಹೋರಾಟ ಪ್ರಾರಂಭವಾಯಿತು. ಸಾಹಿತ್ಯ ಮತ್ತು ಸಂಸ್ಕೃತಿ ದೃಷ್ಟಿಯಿಂದ ಅನೇಕ ಸಂಸ್ಥೆಗಳು ಕರ್ನಾಟಕ ಏಕೀಕರಣಕ್ಕೆ ದುಡಿದರೆ, ಕರ್ನಾಟಕ ಪ್ರದೇಶ ಕಾಂಗ್ರೆಸ್ ಕರ್ನಾಟಕದ ಏಕೀಕರಣಕ್ಕೆ ರಾಜಕೀಯ ಹಿನ್ನೆಲೆಯನ್ನು ರೂಪಿಸುವುದರಲ್ಲಿ ಯಶಸ್ವಿಯಾಯಿತು.

1916ರಲ್ಲಿ ಗದಿಗೆಯ್ಯ ಹೊನ್ನಾಪುರಮಠ, ಆಲೂರು ವೆಂಕಟರಾಯರು, ಕಡಪಾ ರಾಘವೇಂದ್ರರಾಯರು, ನರಗುಂದಕರ್ ಅವರ ನೇತೃತ್ವದಲ್ಲಿ ಸಾಹಿತಿಗಳು ಮತ್ತು ಕನ್ನಡ ಅಭಿಮಾನಿಗಳಿಂದ ಕೂಡಿದ್ದ, 'ಕರ್ನಾಟಕ ಸಭೆ'ಯು ಸ್ಥಾಪನೆಯಾಗಿ ಕರ್ನಾಟಕ ಏಕೀಕರಣದ ವಿಷಯವನ್ನು ಪ್ರಧಾನವಾಗಿ ತೆಗೆದುಕೊಂಡಿತು. 1918ರಲ್ಲಿ ಧಾರವಾಡದಲ್ಲಿ ಅಖಿಲ ಕರ್ನಾಟಕ ರಾಜಕೀಯ ಪರಿಷತ್ತು ಸ್ಥಾಪನೆಯಾಯಿತು. 1920ರಲ್ಲಿ ಈ ಪರಿಷತ್ತಿನ ಮೊದಲ ಸಮ್ಮೇಳನ ಧಾರವಾಡದಲ್ಲಿ ನಡೆಯಿತು. ಮೈಸೂರು ನಿವೃತ್ತ ದಿವಾನ್ ವಿ.ಪಿ.ಮಾಧವರಾಯರು ಇದರ ಅಧ್ಯಕ್ಷತೆ ವಹಿಸಿದ್ದರು. ಈ ಅಧಿವೇಶನದಲ್ಲಿ "ಕಾಂಗ್ರೆಸ್ ಸಂಸ್ಥೆಯು ಕನ್ನಡ ಮಾತನಾಡುವ ಪ್ರದೇಶವನ್ನೆಲ್ಲಾ ಸೇರಿಸಿ ಒಂದು ಸ್ವತಂತ್ರ ಪ್ರಾಂತವನ್ನಾಗಿಸಬೇಕು" ಎಂಬ ನಿರ್ಣಯವನ್ನು ಕೈಗೊಂಡಿತು.

1924ರಲ್ಲಿ ಮಹಾತ್ಮಾ ಗಾಂಧೀಜಿಯವರ ಆಧ್ಯಕ್ಷತೆಯಲ್ಲಿ ನಡೆದ ಬೆಳಗಾವಿಯಲ್ಲಿ ನಡೆದ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನದಲ್ಲಿ ಕರ್ನಾಟಕ ಏಕೀಕರಣವನ್ನು ಸಮರ್ಥಿಸುವ "ಕರ್ನಾಟಕ ಕೈಪಿಡಿ" ಎಂಬ ಕೃತಿ ಪ್ರಕಟವಾಯಿತು. ಅಧಿವೇಶನದ ಜೊತೆಗೆ ಕರ್ನಾಟಕ ಏಕೀಕರಣ ಪರಿಷತ್ತಿನ ಸಮ್ಮೇಳನವೂ ನಡೆಯಿತು.



ಬೆಳಗಾವಿಯಲ್ಲಿ ನಡೆದ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನದಲ್ಲಿ ಮಹಾತ್ಮ ಗಾಂಧೀಜಿ

ಕಾಂಗ್ರೆಸ್ ಪಕ್ಷ ಏಕೀಕರಣ ಪರಿಷತ್ತಿಗೆ ತನ್ನ ಬೆಂಬಲ ಸೂಚಿಸಿತು. ಕರ್ನಾಟಕ ಸಭೆಯು ಪರಿಷತ್ತಿನಲ್ಲಿ ವಿಲೀನವಾಯಿತು. ನಾಗಪುರದಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದಲ್ಲಿ, ಕಾಂಗ್ರೆಸ್ ಪಕ್ಷವು, ಕರ್ನಾಟಕ ರಾಜಕೀಯ ಪರಿಷತ್ತಿಗೆ ಮತ್ತು ಏಕೀಕರಣದ ಚಟುವಟಿಕೆಗೆ ತನ್ನ ಬೆಂಬಲವನ್ನು ನೀಡಿತು. ಇದರಿಂದ ಕರ್ನಾಟಕ ರಾಜಕೀಯ ಪರಿಷತ್ತು ಕಾಂಗ್ರೆಸ್ ಪಕ್ಷದ ಅಡಿಯಲ್ಲಿಯೇ 1949 ರವರೆಗೂ ಹನ್ನೆರಡಕ್ಕೂ ಹೆಚ್ಚು ಸಮ್ಮೇಳನಗಳನ್ನು ನಡೆಸಿಕೊಂಡು ಬಂದು ಕರ್ನಾಟಕ ಏಕೀಕರಣಕ್ಕೆ ಒತ್ತಾಯ ಮಾಡುತ್ತಿತ್ತು. ಆದರೆ ಕಾಂಗ್ರೆಸ್‌ನಿಂದ ಏಕೀಕರಣದ ಬಗ್ಗೆ ಸ್ಪಷ್ಟ ಭರವಸೆ ದೊರೆಯದ ಕಾರಣ 1955ರಲ್ಲಿ ಕಾಂಗ್ರೆಸ್‌ನಿಂದ ಹೊರಬಂದು ರಾಜಕೀಯೇತರ ಸಂಸ್ಥೆಯಾಗಿ ಹಾವೇರಿಯಲ್ಲಿ ಸಮ್ಮೇಳನವನ್ನು ನಡೆಸಿ ಕರ್ನಾಟಕ ಏಕೀಕರಣಕ್ಕೆ ನಿರ್ಣಯವನ್ನು ಸ್ವೀಕರಿಸಿತು.

1920 ರಲ್ಲಿ ನಾಗಪುರದಲ್ಲಿ ನಡೆದ ಕಾಂಗ್ರೆಸ್ ಅಧಿವೇಶನಕ್ಕೆ ಕರ್ನಾಟಕದಿಂದ ಸುಮಾರು 800 ಮಂದಿ ಪ್ರತಿನಿಧಿಗಳಾಗಿ ಹೋಗಿದ್ದರು. ಕರ್ನಾಟಕಕ್ಕೆ ಪ್ರತ್ಯೇಕ ಕಾಂಗ್ರೆಸ್ ಸಮಿತಿ ಬೇಕೆಂಬ ಈ ಪ್ರತಿನಿಧಿಗಳ ಬೇಡಿಕೆಗೆ ಕಾಂಗ್ರೆಸ್ ಪಕ್ಷ ಒಪ್ಪಿಗೆ ಸೂಚಿಸಿತು. ಇದರಿಂದ ಮುಂಬಯಿ ಕರ್ನಾಟಕದ ನಾಲ್ಕೂ ಜಿಲ್ಲೆಗಳು ಮುಂಬಯಿ ಪ್ರಾಂತ್ಯ ಕಾಂಗ್ರೆಸ್ ಸಮಿತಿಯಿಂದ ಪ್ರತ್ಯೇಕಗೊಂಡು, ಕರ್ನಾಟಕ ಪ್ರಾಂತ(ಪ್ರದೇಶ) ಕಾಂಗ್ರೆಸ್ ಸಮಿತಿ ಸ್ಥಾಪನೆ ಆಯಿತು. ನಾಗಪುರ ಅಧಿವೇಶನದಲ್ಲಿ ಅಖಿಲ ಭಾರತ ಕಾಂಗ್ರೆಸ್ ಪಕ್ಷವು ಭಾಷಾವಾರು ಪ್ರಾಂತ್ಯ ರಚನೆಗೆ ತನ್ನ ಬೆಂಬಲವನ್ನು ಸೂಚಿಸಿತು. ಕರ್ನಾಟಕ ಪ್ರಾಂತ್ಯ ಕಾಂಗ್ರೆಸ್ ಸಮಿತಿ ರಚನೆಯಿಂದ ಕರ್ನಾಟಕ ಏಕೀಕರಣಕ್ಕೆ ರಾಜಕೀಯ ಸ್ವರೂಪ ದೊರಕಿತು.

1924ರಲ್ಲಿ ಮಹಾತ್ಮಾ ಗಾಂಧೀಜಿಯವರ ಆಧ್ಯಕ್ಷತೆಯಲ್ಲಿ ನಡೆದ ಬೆಳಗಾವಿಯಲ್ಲಿ ನಡೆದ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನದಲ್ಲಿ ಕರ್ನಾಟಕ ಏಕೀಕರಣವನ್ನು ಸಮರ್ಥಿಸುವ "ಕರ್ನಾಟಕ ಕೈಪಿಡಿ" ಎಂಬ ಕೃತಿ ಪ್ರಕಟವಾಯಿತು. ಅಧಿವೇಶನದ ಜೊತೆಗೆ ಕರ್ನಾಟಕ ಏಕೀಕರಣ ಪರಿಷತ್ತಿನ ಸಮ್ಮೇಳನವೂ ನಡೆಯಿತು. ಕರ್ನಾಟಕ ಏಕೀಕರಣಕ್ಕೆ ಕಾಂಗ್ರೆಸ್ ಬೆಂಬಲವನ್ನು ನೀಡಿತು. 1928ರಲಿ ನೇಮಕಗೊಂಡ ನೆಹರೂ ಸಮಿತಿಯೂ ಕರ್ನಾಟಕ ಪ್ರಾಂತ್ಯ ರಚನೆಯೂ ಸೇರಿದಂತೆ ಭಾಷಾವಾರು ಪ್ರಾಂತ್ಯಗಳ ರಚನೆ ಅವಶ್ಯಕವೆಂದು ವರದಿ ನೀಡಿತು. 21–9–1937ರಲ್ಲಿ ಭಾಷಾವಾರು ಪ್ರಾಂತ್ಯ ಹೋರಾಟಕ್ಕೆ ಮಹಾತ್ಮಾ ಗಾಂಧೀಜಿಯವರಿಂದ ಮನ್ನಣೆ ದೊರೆಯಿತು. 1947ರಲ್ಲಿ ಮುಂಬಯಿ ಮತ್ತು ಮದ್ರಾಸ್ ವಿಧಾನ ಮಂಡಲಗಳು ಭಾಷಾವಾರು ಪ್ರಾಂತ್ಯ ರಚನೆಗೆ ನಿರ್ಣಯ ತೆಗೆದುಕೊಂಡವು. ಮಹಾತ್ಮಾ ಗಾಂಧೀಜಿಯವರು 25–1–1948ರಂದು ಕರ್ನಾಟಕ ಪ್ರಾಂತ್ಯ ರಚನೆಯ ವಿಚಾರವನ್ನು ತಾವು ಮನಸಾ ಒಪ್ಪಿರುವುದಾಗಿ ಘೋಷಿಸಿದರು. ಈ ಮಧ್ಯೆ ವೀರಶೈವ ಮಹಾಸಭೆಯು ತಾನು ನಡೆಸಿದ ಅನೇಕ ಸಮ್ಮೇಳನಗಳಲ್ಲಿ ಕರ್ನಾಟಕದ ಏಕೀಕರಣದ ಬಗ್ಗೆ ನಿರ್ಣಯವನ್ನು ಕೈಗೊಂಡು, ಕರ್ನಾಟಕ ಏಕೀಕರಣದ ಬಗ್ಗೆ ಜನಸಾಮಾನ್ಯರೂ ಇದ್ದಾರೆ ಎಂಬುದನ್ನು ತೋರಿಸಿತು.

**ರಾಜ್ಯ ಪುನರ್ ವಿಂಗಡಣಾ ಆಯೋಗ**

1946ರಲ್ಲಿ ಸೊಂಡೂರು ಸಂಸ್ಥಾನದವರು ಕರ್ನಾಟಕ ಏಕೀಕರಣಕ್ಕೆ ತಮ್ಮ ಬೆಂಬಲ ಸೂಚಿಸಿದರು. ಭಾಷಾವಾರು ಪ್ರಾಂತ್ಯ ರಚನೆಯ ಬಗ್ಗೆ 1948ರಲ್ಲಿ ಅಖಿಲ ಭಾರತ ಕಾಂಗ್ರೆಸ್ ಸಮಿತಿಯಿಂದ ಧಾರ್ ಸಮಿತಿ ರೂಪುಗೊಂಡಿತು. ಆದರೆ ಈ ಸಮಿತಿಯಿಂದ ಹೆಚ್ಚಿನ ಪ್ರಯೋಜನವಾಗಲಿಲ್ಲ. ಇದಾದ ನಂತರ ನೆಹರೂ,ವಲ್ಲಭಾಯಿ ಪಟೇಲ್ ಮತ್ತು ಪಟ್ಟಾಭಿರಾಮಯ್ಯ ನೇತೃತ್ವದಲ್ಲಿ ರಾಜ್ಯ ಪುನರ್ ವಿಂಗಡಣೆಗೆ ಸಂಬಂಧಿಸಿದಂತೆ ತ್ರಿಮೂರ್ತಿ ಸಮಿತಿ ನೇಮಕವಾಯಿತು. ಭಾಷಾವಾರು ಪ್ರಾಂತ್ಯ ರಚನೆ ಅಗತ್ಯ ಆದರೆ ಈಗ ಅದು ಸಾಧ್ಯವಿಲ್ಲ ಎಂಬ ವರದಿಯನ್ನು ಈ ಸಮಿತಿ ನೀಡಿತು. 1952ರಲ್ಲಿ ಪೊಟ್ಟಿ ಶ್ರೀರಾಮುಲು ಅವರು ಆಂಧ್ರಪ್ರಾಂತ್ಯ ರಚನೆಗಾಗಿ ಅಮರಣಾಂತ ಉಪವಾಸ ಕೈಗೊಂಡು 58 ದಿನಗಳ ಉಪಾಸದ ನಂತರ 15–12 1952ರಲ್ಲಿ ನಿಧನರಾದರು. 19–12–52 ರಂದು ಲೋಕಸಭೆಯಲ್ಲಿ ಈ ವಿಷಯ ಪ್ರಸ್ತಾಪವಾಗಿ ಆಂಧ್ರಪ್ರಾಂತ್ಯ ರಚನೆಗೆ ಕೆಂದ್ರ ಸರ್ಕಾರ ಒಪ್ಪಿಗೆ ನೀಡಿತು. 1953ರ ಜನವರಿ ತಿಂಗಳಿನಲ್ಲಿ ಎ.ಐ.ಸಿಸಿ. ಅಧಿವೇಶನವು ಹೈದರಾಬಾದ್‌ನಲ್ಲಿ ನಡೆಯಿತು. ಮೈಸೂರು ರಾಜ್ಯದ ಮುಖ್ಯಮಂತ್ರಿಯವರಾಗಿದ್ದ ಕೆಂಗಲ್ ಹನುಮಂತಯ್ಯನವರು ಈ ಅಧಿವೇಶನದಲ್ಲಿ ಭಾಗವಹಿಸಿ, ಭಾಷಾವಾರು ಪ್ರಾಂತ್ಯ ರಚನೆ ಅನಿವಾರ್ಯ, ಮೈಸೂರು ರಾಜ್ಯದ ಜೊತೆಗೆ ಕನ್ನಡ ಪ್ರದೇಶಗಳನ್ನು ಸೇರಿಸಿ ಏಕೀಕೃತ ಕರ್ನಾಟಕವನ್ನು ಸ್ಥಾಪಿಸಬೇಕೆಂದು ತಮ್ಮ ಧೀರೋದಾತ್ತ ನಿಲುವನ್ನು ಪ್ರಕಟಿಸಿದರು.

ಈ ಮಧ್ಯೆ ಬಳ್ಳಾರಿ ವಿಷಯದಲ್ಲಿ ಕೇಳ್ಕರ್ ಸಮಿತಿ, ಎನ್.ಕೆ. ವಾಂಛೂ ಸಮಿತಿಗಳು ವರದಿಗಳು ಬಂದವು. ಆದರೆ ಇವುಗಳಿಂದ ಕರ್ನಾಟಕದ ಏಕೀಕರಣ ವಿಚಾರ ಇನ್ನಷ್ಟು ಕಗ್ಗಂಟಾಯಿತು. ಆಂಧ್ರ ಪ್ರಾಂತ್ಯ ರಚನೆಗೆ ಸಂಬಂಧಿಸಿದಂತೆ ನ್ಯಾ. ಎಲ್.ಎಸ್. ಮಿಶ್ರಾ ಸಮಿತಿ ವರದಿಯು ಪ್ರಕಟವಾಗಿ ಅಂಗೀಕಾರವಾಯಿತು. 1953 ಆಗಸ್ಟ್ ತಿಂಗಳಲ್ಲಿ ಲೋಕಸಭೆಯಲ್ಲಿ ಆಂಧ್ರಪ್ರದೇಶ ಮಸೂದೆ ಅಂಗೀಕಾರವಾಯಿತು. ಇದರ ಫಲವಾಗಿ 2–10–53 ರಂದು ಕರ್ನಾಟಕ ಏಕೀಕರಣದ ಮೊದಲ ಹಂತವಾಗಿ ಬಳ್ಳಾರಿ ಜಿಲ್ಲೆಯ ಏಳು ತಾಲ್ಲೂಕುಗಳು ಮೈಸೂರು ರಾಜ್ಯದೊಂದಿಗೆ ವಿಲೀನಗೊಂಡವು. ಈ ಸಮಾರಂಭದಲ್ಲಿ ಮೈಸೂರು ರಾಜ್ಯದ ಮುಖ್ಯಮಂತ್ರಿ ಕೆಂಗಲ್ ಹನುಮಂತಯ್ಯನವರು ಭಾಗವಹಿಸಿ ನನ್ನನ್ನು ನಿಮ್ಮ ಸೇವೆಗೆ ಅರ್ಪಿಸಿಕೊಂಡಿದ್ದೇನೆ ಎಂದರು. ಈ ಸನ್ನಿವೇಶದಲ್ಲಿ ಕನ್ನಡಪರ ಹೋರಾಟಗಾರ ರಮ್‌ಜಾನ್‌ಸಾಹೇಬ್ ಎಂಬುವವರನ್ನು ಬಳ್ಳಾರಿ ವಿಲೀನ ವಿರೋಧಿಗಳು ಕೊಲೆ ಮಾಡಿದ ಆಘಾತಕಾರಿ ಸನ್ನಿವೇಶ ನಡೆಯಿತು.

ಮಿಶ್ರಾ ಸಮಿತಿ ನೇಮಕದ ವಿರುದ್ಧ ಕಾಂಗ್ರೆಸ್ ಸದಸ್ಯರೇ ಆದ ಅದರಗುಂಚಿ ಶಂಕರಗೌಡರು 28–3–53ರಿಂದ ಅಮರಣಾಂತ ಉಪವಾಸ ಕೈಗೊಂಡರು. 19–4–53ರಂದು ಹುಬ್ಬಳ್ಳಿಯಲ್ಲಿ ಕರ್ನಾಟಕ ಪ್ರದೇಶ ಕಾಂಗ್ರೆಸ್‌ನ ವಿಶೇಷ ಕಾರ್ಯಕಾರಿ ಸಮಿತಿ ಸಭೆ ಸೇರಿ ಕರ್ನಾಟಕ ಏಕೀಕರಣದ ಬಗ್ಗೆ ಚರ್ಚೆ ನಡೆಸಲು ಏರ್ಪಾಡಾಗಿತ್ತು. ಅಂದು ಹುಬ್ಬಳ್ಳಿಯ ನೆಹರೂ ಮೈದಾನದಲ್ಲಿ ಸುಮಾರು 25000ಕ್ಕೂ ಹೆಚ್ಚು ಜನರು ಸಭೆ ನಡೆಯುವ ಜಾಗಕ್ಕೆ ನುಗ್ಗಿದರು. ಲಾಠೀಚಾರ್ಜ್ ಆಯಿತು. ಈ



ಎಲ್ಲಾದರು ಇರು
ಎಂತಾದರು ಇರು
ಎಂದೆಂದಿಗೂ ನೀ ಕನ್ನಡವಾಗಿರು

– ಕುವೆಂಪು

ಗೊಂದಲದ ನಡುವೆಯೇ ಕೆ.ಪಿ.ಸಿ.ಸಿ.ಯು ಕರ್ನಾಟಕ ಏಕೀಕರಣವಾಗಲೇ ಬೇಕೆಂದು ನಿರ್ಣಯವನ್ನು ಅಂಗೀಕರಿಸಿತು. ಮೈಸೂರು ಕಾಂಗ್ರೆಸ್ ಮುಖಂಡರುಗಳು ಎಸ್. ನಿಜಲಿಂಗಪ್ಪನವರ ನೇತೃತ್ವದಲ್ಲಿ 14–9–53ರಂದು ಪ್ರಧಾನಮಂತ್ರಿ ನೆಹರೂ ಅವರನ್ನು ಭೇಟಿಯಾಗಿ ಕರ್ನಾಟಕದ ಘಟನೆಗಳನ್ನು ಪೂರ್ಣವಾಗಿ ವಿವರಿಸಿ, ಕರ್ನಾಟಕ ಏಕೀಕರಣವಾಗಲೇ ಬೇಕೆಂದು ಮನದಟ್ಟು ಮಾಡಿಕೊಟ್ಟರು. ನೆಹರೂ ಅವರು ನಾನು ಕರ್ನಾಟಕದ ಬೇಡಿಕೆಯನ್ನು ಸಂಪೂರ್ಣವಾಗಿ ಒಪ್ಪಿಕೊಂಡಿದ್ದೇನೆಂದು ಹೇಳಿದರು. ಮೈಸೂರು ಸಂಸ್ಥಾನ ಹಾಗೂ ಕರ್ನಾಟದ ಇತರ ಭಾಗಗಳಲ್ಲಿ ಎರಡು ಕರ್ನಾಟಕ, ಮೂರು ಕರ್ನಾಟಕ, ನಾಲ್ಕು ಕರ್ನಾಟಕ ರಾಜ್ಯಗಳ ಸ್ಥಾಪನೆಯ ವಿಚಾರವೂ ಕೆಲವರಿಂದ ಬಂದು ಅದಕ್ಕೆ ಬೆಂಬಲ ದೊರೆಯಲಿಲ್ಲ.

**ರಾಜ್ಯ ಪುನರ್ ವಿಂಗಡಣಾ ಆಯೋಗ**

ಈ ಎಲ್ಲ ಹೋರಾಟಗಳ ಫಲವಾಗಿ ಪ್ರಧಾನ ಮಂತ್ರಿ ನೆಹರೂ ಅವರು 22–12–1953 ರಂದು ಲೋಕಸಭೆಯಲ್ಲಿ ರಾಜ್ಯಗಳ ಪುನರ್ ವಿಂಗಡಣೆಗೆ ಫಜಲ್ ಅಲಿಯವರ ನೇತೃತ್ವದಲ್ಲಿ ರಾಜ್ಯ ಪುನರ್ ವಿಂಗಡಣಾ ಆಯೋಗವನ್ನು ರಚಿಸಿರುವುದಾಗಿ ಲೋಕಸಭೆಯಲ್ಲಿ ಘೋಷಿಸಿದರು. 29–12–1953 ರಂದು ಆಯೋಗ ರಚನೆ ಆಯಿತು. ಹೃದಯನಾಥ್ ಕುಂಜ್ರೂ ಮತ್ತು ಕೆ.ಎಮ್.ಫಣಿಕ್ಕರ್ ಅವರು ಈ ಆಯೋಗದ ಸದಸ್ಯರಾಗಿದ್ದರು. 1954ರ ಜೂನ್ ತಿಂಗಳಿನಿಂದ ರಾಜ್ಯ ಪುನರ್ ವಿಂಗಡಣಾ ಆಯೋಗವು ನಾಡಿನಲ್ಲಿ ಸಂಚರಿಸಿ ಸಾರ್ವಜನಿಕ ಅಭಿಪ್ರಾಯ ಸಂಗ್ರಹಣೆಗೆ ತೊಡಗಿತು. ಕೆ.ಪಿ.ಸಿ.ಸಿ, ಮೈಸೂರು ಪ್ರದೇಶ ಕಾಂಗ್ರೆಸ್, ಮೈಸೂರು ಸರ್ಕಾರ, ಅನೇಕ ಸಂಘಸಂಸ್ಥೆಗಳು, ಸಾರ್ವಜನಿಕರು ಆಯೋಗಕ್ಕೆ ತಮ್ಮ ಮನವಿಗಳನ್ನು ಸಲ್ಲಿಸಿದರು. 10–10–1955 ರಂದು ಆಯೋಗವು ತನ್ನ ವರದಿಯನ್ನು ಭಾರತ ಸರ್ಕಾರಕ್ಕೆ ಸಲ್ಲಿಸಿತು. ಆದರೆ ಈ ವರದಿಯಲ್ಲಿ ಈಗಾಗಲೇ ಮೈಸೂರಿಗೆ ಸೇರಿದ್ದ ಬಳ್ಳಾರಿ ಜಿಲ್ಲೆಯ ಬಳ್ಳಾರಿ, ಸಿರಗುಪ್ಪ, ಹೊಸಪೇಟೆ ತಾಲ್ಲೂಕುಗಳು ಇರಲಿಲ್ಲ. ಬೀದರ್ ಜಿಲ್ಲೆಯೂ ಇರಲಿಲ್ಲ. ಕಾಸರಗೋಡನ್ನು ಕೈಬಿಡಲಾಗಿತ್ತು. ಹೊಸೂರು, ಧರ್ಮಪುರಿ, ಅಕ್ಕಲಕೋಟೆ, ಜತ್, ಸೊಲ್ಲಾಪುರ, ಮಡಕಶಿರಾ ಈ ಕನ್ನಡ ಪ್ರದೇಶಗಳೂ ಸೇರಿರಲಿಲ್ಲ. ಇದರಿಂದ ಅಸಂತುಷ್ಟರಾದ ಕನ್ನಡಿಗರೂ ಮತ್ತೆ ಹೋರಾಟ ಪ್ರಾರಂಭಿಸಿದರು. ಪುನರ್ ವಿಂಗಡಣಾ ಆಯೋಗದ ವರದಿಯನ್ನು ಪರಿಶೀಲಿಸಲು ಕಾಂಗ್ರೆಸ್ ಪಕ್ಷವು ನೆಹರೂ ಅವರ ನೇತೃತ್ವದಲ್ಲಿ ಉಪಸಮಿತಿಯನ್ನು ನೇಮಿಸಿತು. 1956ರ ಜನವರಿ ತಿಂಗಳಲ್ಲಿ ಉಪ ಸಮಿತಿಯ ವರದಿಯ ಮೇರೆಗೆ ಬಳ್ಳಾರಿ ಜಿಲ್ಲೆ, ಕಾಸರಗೋಡಿನ ಚಂದ್ರಗಿರಿ ನದಿಯ ಮೇಲಿನ ಭಾಗ, ಬೀದರ್ ಜಿಲ್ಲೆಗಳನ್ನು ಕರ್ನಾಟಕಕ್ಕೆ ಸೇರಿಸಲು ಕೇಂದ್ರ ಸರ್ಕಾರವು ತೀರ್ಮಾನಿಸಿತು. 16–1–56ರಂದು ರಾಜ್ಯ ಪುನರ್ ವಿಂಗಡಣೆಯ ಬಗ್ಗೆ ಕೇಂದ್ರ ಸರ್ಕಾರವು ಪ್ರಕಟಣೆಯನ್ನು ಹೊರಡಿಸಿ ಮೈಸೂರು ರಾಜ್ಯವನ್ನು ರಚಿಸಲು ತೀರ್ಮಾನಿಸಿತು.

- ಮೈಸೂರು ಸಂಸ್ಥಾನ ಇಡಿಯಾಗಿ
- ಮುಂಬಯಿ ರಾಜ್ಯದ ಬಿಜಾಪುರ, ಧಾರವಾಡ, ಉತ್ತರ ಕನ್ನಡ ಮತ್ತು ಬೆಳಗಾವಿ (ಚಾಂದಗಡ ತಾಲ್ಲೂಕನ್ನು ಬಿಟ್ಟು) ಜಿಲ್ಲೆಗಳು
- ಹೈದರಾಬಾದ್ ರಾಜ್ಯದ ಗುಲಬರ್ಗಾ ಜಿಲ್ಲೆ (ಕೊಡಂಗಲ್ ಮತ್ತು ತಾಂಡೂರು ತಾಲ್ಲೂಕುಗಳನ್ನು ಹೊರತುಪಡಿಸಿ) ರಾಯಚೂರು ಜಿಲ್ಲೆ (ಆಲಂಪುರ ತಾಲ್ಲೂಕನ್ನು ಹೊರತುಪಡಿಸಿ), ಬೀದರ್ ಜಿಲ್ಲೆ (ಬೀದರ್, ಭಾಲ್ಕಿ, ಔರಾದ್ ಮತ್ತು ಹುಮ್ನಾಬಾದ್ ತಾಲ್ಲೂಕುಗಳು) ಬಸವಕಲ್ಯಾಣವನ್ನು ಹೊರತುಪಡಿಸಿ
- ಮದ್ರಾಸ್ ರಾಜ್ಯದ ದಕ್ಷಿಣ ಕನ್ನಡ ಜಿಲ್ಲೆ (ಕಾಸರಗೋಡು ತಾಲ್ಲೂಕು ಮತ್ತು ಅಮೀನ್ ದ್ವೀಪಗಳನ್ನು ಹೊರತುಪಡಿಸಿ), ಕೊಯಮತ್ತೂರು ಜಿಲ್ಲೆಯ ಕೊಳ್ಳೇಗಾಲ ತಾಲ್ಲೂಕು
- ಕೊಡಗು



ಏಕೀಕರಣಕ್ಕೆ ಮುನ್ನುಡಿ ಬರೆದ ಸಂದರ್ಭ. ಅಂದಿನ ರಾಷ್ಟ್ರಪತಿ ಶ್ರೀ ಬಾಬು ರಾಜೇಂದ್ರ ಪ್ರಸಾದ್, ರಾಜ್ಯಪಾಲ ಶ್ರೀ ಜಯಚಾಮರಾಜೇಂದ್ರ ಒಡೆಯರ್ ಮತ್ತು ಮುಖ್ಯಮಂತ್ರಿ ಶ್ರೀ ಕೆಂಗಲ್ ಹನುಮಂತಯ್ಯ

ಈ ಪ್ರಕಟಣೆಯಲ್ಲೂ ಬಸವಕಲ್ಯಾಣ ತಾಲ್ಲೂಕು ಸೇರಿರಲಿಲ್ಲ. ಆನಂತರ ಮಹಾರಾಷ್ಟ್ರ, ಕರ್ನಾಟಕ, ಆಂಧ್ರ ಮುಖಂಡರು ಸಭೆ ಸೇರಿ ಬಸವಕಲ್ಯಾಣವನ್ನು ಮೈಸೂರಿಗೆ, ಗದ್ವಾಲನ್ನು ಆಂಧ್ರ ರಾಜ್ಯಕ್ಕೆ ಬಿಡಲು ಒಪ್ಪಿದರು. ಈ ಒಪ್ಪಂದವನ್ನು ರಾಜ್ಯ ಪುನರ್‌ವಿಂಗಡಣಾ ಮಸೂದೆಯಲ್ಲಿ ಸೇರಿಸಲಾಯಿತು.

ಈ ಬಗ್ಗೆ ಕೇಂದ್ರವು ವಿಧೇಯಕವನ್ನು ರಚಿಸಿ, ರಾಜ್ಯ ವಿಧಾನ ಮಂಡಲಗಳ ಒಪ್ಪಿಗೆಗಾಗಿ ಕಳುಹಿಸಿತು. ರಾಜ್ಯ ವಿಧಾನ ಮಂಡಲಗಳ ಒಪ್ಪಿಗೆ ಬಂದ ನಂತರ 18–4–1956ರಂದು ಲೋಕಸಭೆಯಲ್ಲಿ ವಿಧೇಯಕವನ್ನು ಮಂಡಿಸಲಾಯಿತು. ಚರ್ಚೆಯ ನಂತರ ವಿಧೇಯಕವನ್ನು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಕಳುಹಿಸಲಾಯಿತು. ಈ ಸಮಿತಿಯು 16–7–56ರಂದು ತನ್ನ ವರದಿಯನ್ನು ನೀಡಿ, ಮೈಸೂರಿನ ಬದಲು ಕರ್ನಾಟಕ ಎಂಬ ಹೆಸರನ್ನಿಡುವಂತೆ ಶಿಫಾರಸ್ಸು ಮಾಡಿತು. ಉಪಸಮಿತಿಯ ಶಿಫಾರಸ್ಸಿನ ನಂತರ ಮತ್ತೆ ವಿಧೇಯಕವು 26–7–1956ರಂದು ಲೋಕಸಭೆಯಲ್ಲಿ ಚರ್ಚೆಗೆ ಮಂಡಿತವಾಗಿ 10–8–56 ರಂದು ಅಂಗೀಕಾರವಾಯಿತು.

16–8–56 ರಿಂದ 23–8–56ರವರೆಗೆ ಈ ವಿಧೇಯಕವು ಮೈಸೂರು ಶಾಸನ ಸಭೆಯಲ್ಲಿ ಚರ್ಚೆಯಾಯಿತು. ಸೊಲ್ಲಾಪುರ ಜಿಲ್ಲೆ, ಕಾಸರಗೋಡು ಮೈಸೂರಿಗೆ ಸೇರಬೇಕೆಂದು, ರಾಜ್ಯಕ್ಕೆ ಕರ್ನಾಟಕವೆಂಬ ಹೆಸರೇ ಇರಬೇಕೆಂದು ಎಲ್ಲ ಸದಸ್ಯರು ಪ್ರತಿಪಾದಿಸಿದರು. 31–8–1956 ವಿಧೇಯಕಕ್ಕೆ ರಾಷ್ಟ್ರಪತಿಗಳ ಅಂಗೀಕಾರ ದೊರೆಯಿತು. ಆದರೆ ಮೈಸೂರು ರಾಜ್ಯ ಎಂಬ ಹೆಸರೇ ಉಳಿಯಿತು. ಸೊಲ್ಲಾಪುರ ಜಿಲ್ಲೆ, ಕಾಸರಗೋಡು ಕರ್ನಾಟಕಕ್ಕೆ ಸೇರಿಲಿಲ್ಲ. 1956 ನವೆಂಬರ್ 1 ರಂದು ಹೊಸ ಮೈಸೂರು ರಾಜ್ಯ ಉದಯವಾಯಿತು. ಹೊಸ ಮೈಸೂರು ರಾಜ್ಯದ ರಾಜ್ಯಪಾಲರಾಗಿ ರಾಜಪ್ರಮುಖರಾಗಿದ್ದ ಜಯಚಾಮರಾಜ ಒಡೆಯರ್ ನೇಮಕವಾದರು. 21–10–1956 ರಂದು ನಿಜಲಿಂಗಪ್ಪನವರು ಕರ್ನಾಟಕ ಶಾಸಕಾಂಗ ಪಕ್ಷದ ನಾಯಕರಾಗಿ ಆಯ್ಕೆಯಾದರು. 1956 ನವೆಂಬರ್ 1 ರಂದು ರಾಷ್ಟ್ರಪತಿ ಬಾಬೂ ರಾಜೇಂದ್ರ ಪ್ರಸಾದ್‌ರವರು ಬೆಂಗಳೂರಿನಲ್ಲಿ ವಿಶಾಲ ಮೈಸೂರು ರಾಜ್ಯವನ್ನು ಉದ್ಘಾಟಿಸಿದರು. 1–11–56 ರಂದು ಜಯಚಾಮರಾಜ ಒಡೆಯರ್ ಅವರು ರಾಜ್ಯಪಾಲರಾಗಿ, ನಿಜಲಿಂಗಪ್ಪನವರು ಮುಖ್ಯಮಂತ್ರಿಗಳಾಗಿ ಅಧಿಕಾರ ಸ್ವೀಕರಿಸಿದರು.



# ಏಕೀಕರಣ ಮತ್ತು ಅಭಿವೃದ್ಧಿಯ ಹಾದಿ

‘ಕಾವೇರಿಯಿಂದಮಾ ಗೋದಾವರಿವರೆಗಿರ್ದ ನಾಡದಾ ಕನ್ನಡದೊಳ್, ಭಾವಿಸಿದ ಜನಪದಂ ವಸುಧಾ ವಲಯ ವಿಲೀನ ವಿಶದ ವಿಷಯ ವಿಶೇಷಂ..’(ಕನ್ನಡದಲ್ಲಿ ಖ್ಯಾತ ಹೆಸರನ್ನು ತಳೆದ ನಾಡು ಭೂಮಂಡಲದ ಮೇಲಿನ ಪ್ರಸಿದ್ಧ ದೇಶಗಳಲ್ಲಿ ಒಂದೆನಿಸಿ, ಕಾವೇರಿಯಿಂದ ಗೋದಾವರಿವರೆಗೂ ಇದ್ದಿತು). ಅದರಲ್ಲಿಯೂ ಕಿಸುವೊಳಲು, ಪ್ರಸಿದ್ಧವಾಗಿರುವ ಕೊಪಣ ಎಂಬ ನಗರ (ಇಂದಿನ ಕೊಪ್ಪಳ), ಪುಲಿಗೆರೆ (ಇಂದಿನ ಲಕ್ಷ್ಮೇಶ್ವರ), ಸನ್ನುತವಾದ ಒಕ್ಕುಂದ ಇವುಗಳ ನಡುವಣ ಪ್ರದೇಶವೇ ನಿಜವಾಗಿಯೂ ಕನ್ನಡನಾಡಿನ ತಿರುಳು. ಈ ನಾಲ್ಕು ಪಟ್ಟಣಗಳ ನಡುವಣ ನಾಡೇ ಸಂಪೂರ್ಣವಾಗಿ ಅಚ್ಚಕನ್ನಡ ಮಾತನಾಡುವ ಪ್ರದೇಶವಾಗಿತ್ತು..

– ಇದು ಒಂಬತ್ತನೆಯ ಶತಮಾನದ ಮಧ್ಯಭಾಗದಲ್ಲಿ ರಚನೆಯಾದ ಕವಿರಾಜಮಾರ್ಗ ಲಕ್ಷಣ ಗ್ರಂಥದಲ್ಲಿ ಪ್ರಸ್ತಾಪವಾಗಿರುವ ಕನ್ನಡ ನಾಡಿನ ಸೀಮೆಯ ವಿವರ. ದಕ್ಷಿಣಕ್ಕೆ ಕಾವೇರಿ, ಉತ್ತರಕ್ಕೆ ಗೋದಾವರಿಯವರೆಗೂ ಹಬ್ಬಿದ್ದ ನಾಡು ಎಂಬ ಆಗಿನ ಉಲ್ಲೇಖದಂತೆ ಕನ್ನಡದ ಪ್ರದೇಶ ಈಗಿನ ಕರ್ನಾಟಕದಿಂದ ಮಹಾರಾಷ್ಟ್ರದ ಉತ್ತರ ಗಡಿಯನ್ನೂ ದಾಟಿ ಗುಜರಾತಿನವರೆಗೂ ವಿಸ್ತರಿಸುತ್ತದೆ.

ಮುಂದಿನ ಎಂಟು ನೂರು ವರ್ಷಗಳಲ್ಲಿ, ಅಂದರೆ, 1799ರ ನಾಲ್ಕನೇ ಮೈಸೂರು ಯುದ್ಧ ಮತ್ತು 1817ರ ಮೂರನೆಯ ಮರಾಠ ಯುದ್ಧಗಳ ಮೂಲಕ ದಕ್ಷಿಣ ಭಾರತವು ಇಡಿಯಾಗಿ ಬ್ರಿಟಿಷರ ಹತೋಟಿಗೆ ಒಳಪಟ್ಟ ನಂತರ ಎಲ್ಲ ಕನ್ನಡ ಭಾಷಾ ಪ್ರದೇಶಗಳು ನಾನಾ ರಾಜಕೀಯ ಕಾರಣಗಳ ಫಲವಾಗಿ 19 ರಾಜಕೀಯ ಆಡಳಿತ ಘಟಕಗಳಲ್ಲಿ ಹರಿದು ಹಂಚಿ ಹೋದವು. ಅದಕ್ಕೂ ಮುಂಚೆ ಕನ್ನಡ ಭಾಷಿಕ ಜನರೆಲ್ಲ ಒಂದೇ ರಾಜಕೀಯ ಆಡಳಿತಕ್ಕೆ ಒಳಪಟ್ಟಿದ್ದು ಅಪರೂಪ.

ಲಕ್ಷ್ಮಣ ಕೊಡಸೆ

ಇಪ್ಪತ್ತನೆಯ ಶತಮಾನದಲ್ಲಿ ಕರ್ನಾಟಕ ಕಂಡ ಎರಡು ಮುಖ್ಯ ಐತಿಹಾಸಿಕ ಘಟನೆಗಳು, ಸ್ವಾತಂತ್ರ್ಯ ಸಂಗ್ರಾಮ ಮತ್ತು ರಾಜ್ಯದ ಏಕೀಕರಣ. ಸ್ವಾತಂತ್ರ್ಯ ಸಂಗ್ರಾಮ ಇಡೀ ಭಾರತಕ್ಕೆ ಸಂಬಂಧಿಸಿದ್ದರೆ, ಏಕೀಕರಣ ಕನ್ನಡ ಭಾಷಿಕರ ಪ್ರದೇಶಗಳಿಗೆ ಸೀಮಿತವಾಗಿತ್ತು. ಆದರೆ ರಾಜ್ಯದಲ್ಲಿ ಈ ಎರಡೂ ಚಳವಳಿಗಳು ಒಟ್ಟಾಗಿಯೇ ನಡೆದವು. ಭಾರತದ ಉಳಿದ ಪ್ರದೇಶಗಳಂತೆ ಕನ್ನಡ ಪ್ರಾಂತ್ಯಗಳೂ ಬ್ರಿಟಿಷರ ಆಳ್ವಿಕೆಗೆ ಒಳಪಟ್ಟಿದ್ದವು. ಕನ್ನಡಿಗರು ವಿಭಿನ್ನ ಆಡಳಿತ ಘಟಕಗಳಲ್ಲಿ ಹರಿದು ಹಂಚಿಹೋಗಿದ್ದರು. ಅಲ್ಲೆಲ್ಲ ಕನ್ನಡಿಗರ ಬದುಕು ತೀರಾ ದುಸ್ಥಿತಿಯಲ್ಲಿತ್ತು. ಮೈಸೂರನ್ನು ಹೊರತುಪಡಿಸಿ, ಅವರು ನೆರೆಯ ಭಾಷಿಕರ ನಡುವೆ ಅಲ್ಪಸಂಖ್ಯಾತರಂತೆ ಬದುಕುವ ಅನಿವಾರ್ಯತೆ ಇತ್ತು.

ಚರಿತ್ರೆಯಲ್ಲಿ ಕನ್ನಡ ಪ್ರಾಂತಗಳನ್ನು ಕೆಲವು ನೆರೆಯ ಪ್ರಾಂತಗಳೊಂದಿಗೆ ಒಂದು ರಾಜ್ಯವಾಗಿ, ಒಂದು ಮಾರುಕಟ್ಟೆಯಾಗಿ, ವ್ಯವಸ್ಥಿತ ಆಡಳಿತವಾಗಿ, ಬೆಸೆಯುವ ಪ್ರಯತ್ನ ನಡೆದಿದ್ದು ಟಿಪ್ಪುಸುಲ್ತಾನನ ಕಾಲದಲ್ಲಿ. ಆದರೆ ಬ್ರಿಟಿಷ್ ಆಡಳಿತಗಾರರು ಟಿಪ್ಪುವನ್ನು ಪರಾಭವಗೊಳಿಸಿ ಅದನ್ನು ಭಂಗಗೊಳಿಸಿದರು. ಒಂದು ಸಂಘಟಿತ ಅರಸೊತ್ತಿಗೆಯಾಗಿ ರೂಪುಗೊಳ್ಳುತ್ತಿದ್ದ ಟಿಪ್ಪುವಿನ ಮೈಸೂರನ್ನು ಚಿಂದಿ ಮಾಡಿ ಹಂಚಿಕೊಂಡರು.

ಸಾವಿರಾರು ವರ್ಷಗಳ ಭಾಷಿಕ ಸಾಂಸ್ಕೃತಿಕ ಹಿನ್ನೆಲೆಯಿದ್ದ ಕನ್ನಡ ಪ್ರದೇಶಗಳು 1799ರ ನಂತರ ಛಿದ್ರಗೊಂಡು ಪರಕೀಯ ಪ್ರಭುತ್ವದ ಕಪಿಮುಷ್ಟಿಗೆ ಸಿಕ್ಕಿದ್ದವು. ಬ್ರಿಟಿಷರು ದೇಶೀಸಂಸ್ಥಾನದ ರಾಜರುಗಳನ್ನು ನಂಬುತ್ತಿರಲಿಲ್ಲ. ಇಲ್ಲಿಯ ಯಾವ ದೇಶೀಸಂಸ್ಥಾನಕ್ಕೂ ಕಡಲ ತೀರಕ್ಕೆ ಪ್ರವೇಶವಿರಲಿಲ್ಲ. ಸುತ್ತಲೂ ಭೂ ಆವೃತವಾದ ಈ ಸಂಸ್ಥಾನಗಳ ವ್ಯಾಪಾರ ವಾಣಿಜ್ಯವೆಲ್ಲಾ ವಸಾಹತುವಾದಿಗಳ ಅನುಮತಿ ಇಲ್ಲದೇ ನಡೆಯುವಂತಿರಲಿಲ್ಲ. ಆದ್ದರಿಂದ ಆರ್ಥಿಕವಾಗಿ ಕನ್ನಡಿಗ–ಕರ್ನಾಟಕಕ್ಕೆ ಹಾನಿಯಾಯಿತು. ಈ ಪ್ರಕ್ರಿಯೆಯಲ್ಲಿ ಹಲವಾರು ಭೂಭಾಗಗಳನ್ನು 1799ರ ನಂತರವೂ ಬ್ರಿಟಿಷ್ ಆಡಳಿತ ತನ್ನ ನೇರ ಆಳ್ವಿಕೆಗೆ ಒಳಪಡಿಸಿಕೊಂಡಿತು. ಹೀಗೆ ಆಕ್ರಮಿಸಲಾದ ಪ್ರದೇಶಗಳನ್ನು ಮುಖ್ಯವಾಗಿ ಮೈಸೂರು ಸಂಸ್ಥಾನ, ಹೈದರಾಬಾದ್ ಸಂಸ್ಥಾನ, ಕೊಡಗು, ಬಾಂಬೆ ಕರ್ನಾಟಕ ಮತ್ತು ಮದರಾಸು ಕರ್ನಾಟಕ ಎಂದು ಹೀಗೆ ಐದು ಭಾಗಗಳಲ್ಲಿ ಸೇರಿಸಲಾಯಿತು.

ಮುಂಬೈಪ್ರಾಂತ್ಯದ ಕನ್ನಡಿಗರು ಅಲ್ಲಿ ಪ್ರಬಲರಾಗಿದ್ದ ಮರಾಠಿಗರು ಮತ್ತು ಮರಾಠಿ ಭಾಷೆಯ ಒತ್ತಡಗಳಿಗೆ ಈಡಾದರು. ಪರಕೀಯ ಇಂಗ್ಲಿಷ್ ಭಾಷೆ ಮತ್ತು ಇಂಗ್ಲಿಷರ ಆಡಳಿತದ ಪ್ರಭಾವದಿಂದ ಒಂದು ಕಡೆ ಸಂಕಷ್ಟಕ್ಕೆ ಈಡಾದರೆ, ಶಾಲೆ, ಕಾಲೇಜು ಮತ್ತು ಆಡಳಿತ ಕಚೇರಿಗಳಲ್ಲಿ ಮರಾಠಿ ಭಾಷೆಯ ಹೇರಿಕೆಯಿಂದ ಇನ್ನೊಂದು ಕಡೆ ಬಳಲಿದರು. ಆಗ ಕನ್ನಡ ಪ್ರದೇಶ ‘ದಕ್ಷಿಣ ಮರಾಠ ದೇಶ’ ವೆಂದು ಕರೆಯಲಾಯಿತು. ಹೈದರಾಬಾದ್ ಕರ್ನಾಟಕವಂತೂ ನಿಜಾಮನ ಸರ್ವಾಧಿಕಾರದಿಂದ ನಲುಗಿ ಹೋಗುತ್ತಿತ್ತು. 1940ರ ತನಕ ಈ ಪ್ರದೇಶಗಳಲ್ಲಿ ರಾಜಕೀಯ ಚಟುವಟಿಕೆಯ ಮಾತಿರಲಿ, ಯಾವುದೇ ಬಗೆಯ ಸಾಮಾಜಿಕ ಸಾಂಸ್ಕೃತಿಕ ಕಾರ್ಯಕ್ರಮಗಳಿಗೂ ಆಸ್ಪದವಿರಲಿಲ್ಲ. ಮದರಾಸು ಪ್ರಾಂತ್ಯದಲ್ಲಿ ಕನ್ನಡಿಗರು ತಮಿಳರು, ತೆಲುಗರು ಮತ್ತು ಮಲೆಯಾಳಿಗಳ ನಡುವೆ ಕಾಲ ಹಾಕುತ್ತಿದ್ದರು. ಆದರೆ ಕನ್ನಡ ಮತ್ತು ಕರ್ನಾಟಕಗಳಿಗೆ ಒಂದು ರೀತಿಯ ಸಾಹಿತ್ಯಕ, ಸಾಂಸ್ಕೃತಿಕ ಅನನ್ಯತೆ ಇತ್ತು. ಈ ಅನನ್ಯತೆಗಳನ್ನು ಹೆಕ್ಕಿ ತೆಗೆಯುವ ಅವನ್ನು ಜೋಡಿಸಿ ಕಟ್ಟುವ ಮತ್ತು ಪೋಷಿಸುವ ಮುನ್ನಡೆಸುವ ಕೆಲಸವೂ ಹಲವಾರು ಏಳು ಬೀಳುಗಳೊಂದಿಗೆ ನಡೆದು ಬಂದಿತು.

ಹತ್ತೊಂಬತ್ತನೇ ಶತಮಾನದ ನಡುವಿನ ಹೊತ್ತಿಗೆ ಕನ್ನಡಿಗರಲ್ಲಿ ಪ್ರಜ್ಞಾವಂತರಾದವರು ತಮಗಾಗಿರುವ ಹಾನಿಯ ಪ್ರಮಾಣವನ್ನು ಅರಿಯತೊಡಗಿದರು. ಈ ಅರಿವು ತಮ್ಮ ಭಾಷೆ ಮತ್ತು ಸಾಹಿತ್ಯ ಸಂಸ್ಕೃತಿಗಳ ಅನನ್ಯತೆಯನ್ನು ಗುರ್ತಿಸಿ, ಪೋಷಿಸುವಂಥ ವೈಯಕ್ತಿಕ ಪ್ರಯತ್ನಗಳ ಮೂಲಕ ಪ್ರಕಟವಾಗತೊಡಗಿತು. ಹಾಗೆ ನೋಡಿದರೆ ಈ ಸಾಂಸ್ಕೃತಿಕ ಅನನ್ಯತೆಗಳ ಬಗ್ಗೆ ಅರಿವು ಮೂಡತೊಡಗಿದ್ದು ತಾವು ಏನನ್ನೋ ಕಳೆದುಕೊಳ್ಳುತ್ತಿದ್ದೇವೆ ಎಂಬ ಭಾವನೆಯಿಂದ. ಈ ಭಾವನೆಗೆ ಪರೋಕ್ಷವಾಗಿ ಒತ್ತಾಸೆಯಾದದ್ದು ಪರಕೀಯ ಆಂಗ್ಲರ ಆಡಳಿತವಾದರೆ, ಪ್ರತ್ಯಕ್ಷವಾಗಿ ದೇಶೀಯರಲ್ಲಿ ಹುಟ್ಟಿದ ಅತಂತ್ರ ಪ್ರಜ್ಞೆ. ಅದೇ ಶತಮಾನದಲ್ಲಿ ಹಲವಾರು ಭಾರತೀಯರು

ಏಕೀಕರಣ ಪ್ರಯತ್ನಗಳಲ್ಲಿ ಮೊದಲ ನಿರ್ಣಾಯಕವಾದ ಹೆಜ್ಜೆಯೆಂದರೆ ಧಾರವಾಡದಲ್ಲಿ ರಾ.ಹ.ದೇಶಪಾಂಡೆ ಮತ್ತು ಸಂಗಡಿಗರಿಂದ 1890ರಲ್ಲಿ ‘ಕರ್ನಾಟಕ ವಿದ್ಯಾವರ್ಧಕ ಸಂಘ’ದ ಸ್ಥಾಪನೆ. ಈ ಸಂಘದ ಮುಖವಾಣಿಯಾಗಿ 1896ರಲ್ಲಿ ಪ್ರಾರಂಭವಾದ ಪತ್ರಿಕೆ ‘ವಾಗ್ಭೂಷಣ’. ಹಾಗೆ ನೋಡಿದರೆ ಸಮಸ್ತ ಭಾರತದಲ್ಲಿ ಭಾಷೆ, ಸಾಹಿತ್ಯಗಳ ಉನ್ನತಿಯ ಉದ್ದೇಶದಿಂದ ಮೊದಲ ಸಂಘ ಸಂಸ್ಥೆಗಳು ಪ್ರಾರಂಭವಾದದ್ದು ಕನ್ನಡಿಗರಿಂದ.

ಪಾಶ್ಚಾತ್ಯ ಉದಾರವಾದದಿಂದ, ಮಾನವತಾವಾದದಿಂದ ಪ್ರಭಾವಿತರಾಗಿದ್ದರು. ಈ ಪರಿಕಲ್ಪನೆಗಳು ದೇಶೀಯರಲ್ಲಿ ‘ತಮ್ಮತನ’ ಜಾಗೃತಗೊಳ್ಳಲು ಸಹಾಯಕವಾಯಿತು. ಈ ‘ತಮ್ಮತನ’ ‘ಅನನ್ಯತೆ’ಗಳು. ಟಿಸಿಲೊಡೆದು ಬೆಳೆವ ಪ್ರಕ್ರಿಯೆಯಲ್ಲಿ ಮೂಡಿಬಂದದ್ದೇ ರಾಷ್ಟ್ರೀಯತೆ.

1857 ಆಧುನಿಕ ಭಾರತದ ಚರಿತ್ರೆಯಲ್ಲಿ ಒಂದು ನಿರ್ಣಾಯಕ ಘಟ್ಟ. ಭಾರತದ ಮೊದಲ ಸ್ವಾತಂತ್ರ ಸಂಗ್ರಾಮವೆಂದು ಕರೆಯಲ್ಪಡುವ ಮಹಾನ್ ಘಟನೆ ನಡೆದದ್ದು 1857–58ರಲ್ಲಿ. ತದನಂತರ ಭಾರತ ವ್ಯಾಪಾರಿ ಸಂಸ್ಥೆಯಾದ ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿಯ ಆಳ್ವಿಕೆಯಿಂದ ಬ್ರಿಟಿಷ್ ಸಾಮ್ರಾಜ್ಯದ ನೇರ ಆಡಳಿತಕ್ಕೆ ಒಳಪಟ್ಟಿತ್ತು. ಈ ಸಂದರ್ಭದಲ್ಲೇ ಬ್ರಿಟಿಷ್ ಸಂಸತ್ತು ಭಾರತದ ಬಗ್ಗೆ ವ್ಯಾಪಕ ಚರ್ಚೆ ನಡೆಸಿತು. ಈ ಚರ್ಚೆಯಲ್ಲಿ ಪ್ರಾಸಂಗಿಕವಾಗಿ ಭಾಷಾವಾರು ಪ್ರಾಂತ್ಯರಚನೆಯ ಬಗ್ಗೆ ಪ್ರಸ್ತಾಪ ಮಾಡಿದ ವ್ಯಕ್ತಿ ಜಾನ್‌ಬ್ರೈಟ್. ಹಾಗೆ ನೋಡಿದರೆ 1858ರ ನಂತರ ಪ್ರದೇಶಗಳ ಮರುವಿಂಗಡನೆ ಪ್ರಾರಂಭಿಸಿದ್ದು ಬ್ರಿಟಿಷ್ ಸರ್ಕಾರ. ಆದರೆ ಅದು ಭಾರತೀಯರ ಅಪೇಕ್ಷೆಯಂತಲ್ಲ. 1862ರಲ್ಲಿ ಉತ್ತರ ಕನ್ನಡ ಜಿಲ್ಲೆಯನ್ನು ಮುಂಬೈನಿಂದ ಬಾಂಬೆ ಪ್ರಾಂತಕ್ಕೆ ಸೇರಿಸಿದ್ದು ವ್ಯಾಪಾರದ ದೃಷ್ಟಿಯಿಂದಷ್ಟೆ.

ಕರ್ನಾಟಕ ಮತ್ತಿತರ ದಕ್ಷಿಣದವರು ಹಲವಾರು ಹೊರಗಿನ ಮತ್ತು ಒಳಗಿನ ರಾಜಕೀಯ, ಸಾಂಸ್ಕೃತಿಕ ಬೆಳವಣಿಗೆಗಳಿಂದ ಒತ್ತಡಕ್ಕೆ ಸಿಲುಕಿದರು. ಮುಂಬೈ ಕರ್ನಾಟಕದಲ್ಲಿ ಕನ್ನಡ ಭಾಷಾ ಶಾಲೆಗಳನ್ನು ಪ್ರಾರಂಭಿಸಬೇಕೆಂಬ ಪ್ರಯತ್ನಗಳಿಂದ ಈ ಪ್ರಕ್ರಿಯೆಗೆ ಚಾಲನೆ ಸಿಕ್ಕಿತು. ಕ್ರಮೇಣ 1890ರ ವೇಳೆಗೆ ಸಂಘಟಿತ

**ಕನ್ನಡಿಗರಿಗೆ ಕನ್ನಡವೇ ಗತಿ, ಅನ್ಯಥಾ ಶರಣಂ ನಾಸ್ತಿ**
**ಸಂಸ್ಕೃತವಲ್ಲ, ಇಂಗ್ಲಿಷಲ್ಲ, ಹಿಂದಿಯಲ್ಲ, ಕನ್ನಡ.**

–ಬಿ. ಎಂ. ಶ್ರೀಕಂಠಯ್ಯ



**ಹೆಸರಾಯಿತು ಕರ್ನಾಟಕ;** ಕರ್ನಾಟಕ ಹೆಸರನ್ನು ಅನಾವರಣಗೊಳಿಸುತ್ತಿರುವ ಮುಖ್ಯಮಂತ್ರಿ ಡಿ. ದೇವರಾಜ ಅರಸು

ಪ್ರಯತ್ನಗಳು ಕಂಡುಬಂದವು. ಆ ಹೊತ್ತಿಗೆ ಕನ್ನಡ ಪತ್ರಿಕೆಗಳು, ನಿಯತಕಾಲಿಕೆಗಳು ಪ್ರಕಟವಾಗುತ್ತಿದ್ದವು. 'ಕರ್ನಾಟಕ'ವೆಂಬ ಪದವೂ ಚಾಲ್ತಿಗೆ ಬಂದಿತ್ತು. ಮೈಸೂರು ಪ್ರಾಂತ್ಯದಲ್ಲಿ ಮಹಾರಾಜರ ಸಹಾನುಭೂತಿಯೊಂದಿಗೇ 'ಕರ್ನಾಟಕ ಭಾಷೋಜ್ಜೀವಿನಿ ಸಭಾ' ಎಂಬ ಸಂಸ್ಥೆ 1887ರಲ್ಲಿ ಅಸ್ತಿತ್ವ ಪಡೆದುಕೊಂಡಿತು. ಈ ಸಭೆ ಕನ್ನಡ ಭಾಷೆ, ಸಾಹಿತ್ಯ ಕ್ಷೇತ್ರಗಳಿಗೆ ತನ್ನ ಕೆಲಸವನ್ನು ಸೀಮಿತಗೊಳಿಸಿಕೊಂಡಿತ್ತು.

ಏಕೀಕರಣ ಪ್ರಯತ್ನಗಳಲ್ಲಿ ಮೊದಲ ನಿರ್ಣಾಯಕವಾದ ಹೆಜ್ಜೆಯೆಂದರೆ ಧಾರವಾಡದಲ್ಲಿ ರಾ.ಹ.ದೇಶಪಾಂಡೆ ಮತ್ತು ಸಂಗಡಿಗರಿಂದ 1890ರಲ್ಲಿ 'ಕರ್ನಾಟಕ ವಿದ್ಯಾವರ್ಧಕ ಸಂಘ'ದ ಸ್ಥಾಪನೆ. ಈ ಸಂಘದ ಮುಖವಾಣಿಯಾಗಿ 1896ರಲ್ಲಿ ಪ್ರಾರಂಭವಾದ ಪತ್ರಿಕೆ 'ವಾಗ್ಭೂಷಣ'. ಹಾಗೆ ನೋಡಿದರೆ ಸಮಸ್ತ ಭಾರತದಲ್ಲಿ ಭಾಷೆ, ಸಾಹಿತ್ಯಗಳ ಉನ್ನತಿಯ ಉದ್ದೇಶದಿಂದ ಮೊದಲ ಸಂಘ ಸಂಸ್ಥೆಗಳು ಪ್ರಾರಂಭವಾದದ್ದು ಕನ್ನಡಿಗರಿಂದ. ಏಕೆಂದರೆ ಈ ದಿಸೆಯಲ್ಲಿ ಅಪಾರ ಕ್ರಿಯಾಶೀಲತೆಯಿಂದ ಅದ್ಭುತವಾದದ್ದನ್ನು ಸಾಧಿಸಿದ ಬಂಗಾಳಿ, ಮರಾಠಿ ಮತ್ತು ತೆಲುಗು ಪ್ರಾಂತ್ಯಗಳಲ್ಲೂ ಈ ಉದ್ದೇಶದಿಂದ ಸಂಘಸಂಸ್ಥೆಗಳು ಪ್ರಾರಂಭವಾದದ್ದು ಕರ್ನಾಟಕದ ತರುವಾಯ. ಹಾಗೆಯೇ ಭಾಷಾವಾರು ಪ್ರಾಂತ್ಯಗಳ ರಚನೆಯ ಹೋರಾಟಗಳಲ್ಲಿ ಮುಂಚೂಣಿಯಲ್ಲಿದ್ದ, ಬಿಹಾರ, ಆಂಧ್ರ, ಒರಿಸ್ಸಾ, ಕೇರಳದವರೂ ಸಂಘಟಿತ ಪ್ರಯತ್ನಕ್ಕೆ ತೊಡಗಿದ್ದು ಕರ್ನಾಟಕದವರಿಗಿಂತ ತಡವಾಗಿ. 'ಬಂಗಾಳಿ ಸಾಹಿತ್ಯ ಪರಿಷತ್' 1895 ಮತ್ತು 'ಉತ್ಕಲ ಏಕೀಕರಣ ಪರಿಷತ್ 1903'ರಲ್ಲಿ ಅಸ್ತಿತ್ವಕ್ಕೆ ಬಂದವು. ಅದೇನೇ ಇದ್ದರೂ ಕನ್ನಡಿಗರ ಪ್ರಯತ್ನ ತಮ್ಮ ಭಾಷೆ, ಸಂಸ್ಕೃತಿಗಳ ದೀನಸ್ಥಿತಿಯನ್ನು ದೂರ ಮಾಡುವುದಕ್ಕಾಗಿ ಕರ್ನಾಟಕ ವಿದ್ಯಾವರ್ಧಕ ಸಂಘವು ಹಲವಾರು ಕಡೆ ಸಭೆ, ಸಮಾರಂಭಗಳನ್ನು ನಡೆಸುತ್ತ ಕನ್ನಡ ಸಂಸ್ಕೃತಿ, ಚರಿತ್ರೆ, ಕನ್ನಡ ಭಾಷೆಗಳ ಬಗ್ಗೆ ಅರಿವು ಮೂಡಿಸುವ ಪ್ರಯತ್ನದಲ್ಲಿ ತೊಡಗಿತ್ತು.

ತಿಲಕರ ರಾಷ್ಟ್ರೀಯ ಚಿಂತನೆ ಚಟುವಟಿಕೆಗಳಿಂದ ಮುಂಬೈ ಕರ್ನಾಟಕದ ಹಲವಾರು ಜನ ಆಕರ್ಷಿತರಾಗಿದ್ದರು. ಅವರಲ್ಲಿ ಅಗ್ರಗಣ್ಯರೆಂದರೆ ಆಲೂರು ವೆಂಕಟರಾವ್. ಸ್ವದೇಶಿ ಚಳವಳಿಯಲ್ಲಿ ಸಕ್ರಿಯವಾಗತೊಡಗಿದ ಆಲೂರರು ಅದರ ಬಿಸಿ ಆರಿದ ಮೇಲೆ ಕೆಲವು ಕಾಲ ಏಕೀಕರಣಕ್ಕೆ ಪೂರ್ಣಾವಧಿ ತೊಡಗಿಸಿಕೊಂಡರು. ವಂಗಭಂಗದ ರದ್ದು ಭಾಷಾವಾರು ಪ್ರಾಂತ ರಚನೆಯಲ್ಲಿ ಆಸಕ್ತರಾಗಿದ್ದವರನ್ನು ಉತ್ತೇಜಿಸಿತು. ಜೊತೆಗೆ ಜನರಲ್ಲಿ ಭಾಷಾಭಿಮಾನ, ಪ್ರಾಂತಾಭಿಮಾನಗಳು ಗರಿಗಟ್ಟುತ್ತಲೇ ರಾಷ್ಟ್ರೀಯ ಸ್ವಾತಂತ್ರ್ಯ ಚಳವಳಿಯೂ ಸಶಕ್ತವಾಗುತ್ತ ನಡೆಯಿತು. ಭಾರತದ ಆಗುಹೋಗುಗಳ ಬಗ್ಗೆ ಸದಾ ಎಚ್ಚರದಿಂದಿದ್ದ ಲಯನರ್ ಕರ್ಟಿಸ್ ಎಂಬ ಇಂಗ್ಲಿಷ್ ಸಂಸದ ಭಾರತದ ಪ್ರಾಂತಗಳು ಪುನರ್ ವಿಂಗಡಣೆಯಾದರೆ ಆಂತರಿಕವಾಗಿ ಶಾಂತಿ ಸೌಹಾರ್ದಗಳು ನೆಲೆಗೊಳ್ಳಲು ಸಹಾಯಕವಾಗುವುದೆಂದು ಅಭಿಪ್ರಾಯಪಟ್ಟ. ಈ ಪುನರ್ ವಿಂಗಡನೆಗೆ ಜನಾಂಗ, ಧರ್ಮಗಳು ಪೂರಕವಾದರೂ 'ಭಾಷೆ ಎಲ್ಲಕ್ಕಿಂತ ಮುಖ್ಯ ನೆಲೆ'ಯಾಗಬೇಕೆಂದು ವಾದಿಸಿದ.

ಸ್ವಾತಂತ್ರ್ಯ ಹೋರಾಟದಲ್ಲಿ ಮಹಾತ್ಮ ಗಾಂಧೀಜಿ ಪ್ರವೇಶದೊಂದಿಗೆ ಪ್ರಾಂತೀಯ ಭಾಷೆಗಳಿಗೆ ಸಂಬಂಧಿಸಿ ಅಂದಿನ ಕಾಂಗ್ರೆಸ್ ಸಂಘಟನೆ ಖಚಿತ ನಿಲುವು ತಳೆಯಬೇಕಾಯಿತು. 1920ರ ನಾಗಪುರ ಅಧಿವೇಶನದಲ್ಲಿ ಗಾಂಧೀಜಿ ಅವರು 'ಪ್ರಾಂತ್ಯಗಳನ್ನು ಗುರುತಿಸಲು ಭಾಷೆಯೇ ಆಧಾರವಾಗಬೇಕು ಎಂಬ ವಾದವನ್ನು ಒಪ್ಪುತ್ತೇನೆ. ಭಾಷೆಯ ನೆಲೆಯಲ್ಲಿ ಪ್ರಾಂತ್ಯಗಳ ವಿಂಗಡಣೆ ಆಗದೇ ಹೋದರೆ ಶಾಲಾ ಕಾಲೇಜುಗಳಲ್ಲಿ ಮಾತೃಭಾಷೆಯಲ್ಲಿ ಶಿಕ್ಷಣ ನೀಡಬೇಕು ಎಂದು ಒತ್ತಾಯಿಸುವುದು ಕಷ್ಟವಾಗುತ್ತದೆ. ಇದರಿಂದ ಇಂಗ್ಲಿಷು ಪ್ರಭುತ್ವ ಅಬಾಧಿತವಾಗಿ ಉಳಿಯುತ್ತದೆ. ಮಾತೃಭಾಷೆಗೆ ಪ್ರಾಧಾನ್ಯತೆ ಸಿಗಬೇಕಾದರೆ ಭಾಷಾವಾರು ಪ್ರಾಂತ್ಯ ವಿಂಗಡಣೆ ಆಗಲೇಬೇಕು..' ಎಂದಿದ್ದರು.

ಸ್ವಾತಂತ್ರ್ಯ ಹೋರಾಟದೊಂದಿಗೆ ಏಕೀಕರಣ



**ಹೈದರಾಬಾದ್ ಕರ್ನಾಟಕ ಪ್ರದೇಶ ಅತ್ಯಂತ ಹಿಂದೆ ಬಿದ್ದಿರುವುದನ್ನು ಅಂಕಿ ಅಂಶಗಳ ಮೂಲಕ ಪ್ರತಿಪಾದಿಸಿ ಅದಕ್ಕೆ ಪ್ರತ್ಯೇಕ ಸ್ಥಾನವನ್ನು ಕಲ್ಪಿಸುವಂತೆ ಸಂವಿಧಾನಕ್ಕೆ ತಂದ 118ನೆಯ ತಿದ್ದುಪಡಿಯನ್ನೂ ಸಂಸತ್ತು ಅಂಗೀಕರಿಸಿದೆ. ಅದರಂತೆ ಅಲ್ಲಿನ ಪ್ರಾದೇಶಿಕ ಅಸಮಾನತೆಯನ್ನು ಹಂತಹಂತವಾಗಿ ನಿವಾರಿಸುವ ಪ್ರಯತ್ನಗಳು ಆರಂಭವಾಗಿವೆ.**




ಹೋರಾಟವೂ ನಡೆಯಿತು. 1947ರ ಆಗಸ್ಟ್ 15 ರಂದು ದೇಶಕ್ಕೆ ಸ್ವಾತಂತ್ರ್ಯ ಲಭಿಸಿದ ನಂತರ ಏಕೀಕರಣದ ಬೇಡಿಕೆಗೆ ಒತ್ತಾಸೆಯಾಯಿತು. ಇದು ರಾಷ್ಟ್ರೀಯ ಮಟ್ಟದಲ್ಲಿಯೂ ಚರ್ಚೆಗೆ ಬಂದಿತು. ರಾಜ್ಯಗಳ ಪುನರ್ ವಿಂಗಡಣೆಗೆ ಭಾಷೆಯ ಆಧಾರ, ಆಡಳಿತ ಸೌಕರ್ಯ ಮತ್ತು ಪ್ರಾದೇಶಿಕ ಅನುಕೂಲಗಳನ್ನು ಗಣನೆಗೆ ತೆಗೆದುಕೊಳ್ಳಬೇಕೆಂಬ ಎಚ್ಚರಿಕೆಯನ್ನೂ ವಹಿಸಲಾಯಿತು. ಕರ್ನಾಟಕಕ್ಕೆ ಸಂಬಂಧಿಸಿ ಬೆಳಗಾವಿ, ಧಾರವಾಡ, ವಿಜಯಪುರ ಮತ್ತು ಉತ್ತರ ಕನ್ನಡ ಜಿಲ್ಲೆಗಳು ಮುಂಬೈ ಕಡೆ ಮುಖ ಮಾಡಿಕೊಂಡಿದ್ದರೆ ಕಲಬುರಗಿ, ಬೀದರ್ ಮತ್ತು ರಾಯಚೂರು ಜಿಲ್ಲೆಗಳು ಹೈದರಾಬಾದ್ ಕಡೆಗೆ ತಿರುಗಿಕೊಂಡಿದ್ದವು. ದಕ್ಷಿಣ ಕನ್ನಡ ಹಾಗೂ ಬಳ್ಳಾರಿ ಜಿಲ್ಲೆಗಳು ಮದರಾಸಿನ ಕಡೆಗೆ ಮುಖಮಾಡಿಕೊಂಡಿದ್ದವು. ಮೈಸೂರು ಸಂಸ್ಥಾನದಲ್ಲಿ 9 ಜಿಲ್ಲೆಗಳಿದ್ದವು. ಕೊಡಗು ಪ್ರತ್ಯೇಕ ಭಾಗವಾಗಿತ್ತು. ಈ ಎಲ್ಲ ಭಾಗಗಳನ್ನೂ ಒಂದುಗೂಡಿಸಿ 1956ನೆಯ ನವೆಂಬರ್ 1ರಲ್ಲಿ ಕರ್ನಾಟಕವನ್ನು ರೂಪಿಸಲಾಯಿತು.

ಭಾಷೆ, ಸಂಸ್ಕೃತಿ, ಸಾಹಿತ್ಯ, ರಾಜಕಾರಣಗಳ ದೃಷ್ಟಿಯಿಂದ ಏಕೀಕರಣವಾಯಿತು. ಪ್ರಾದೇಶಿಕವಾಗಿ ಒಂದು ನಿರ್ದಿಷ್ಟ ನೆಲೆಯನ್ನು ರಾಜ್ಯವು ಪಡೆದುಕೊಂಡಿತು. ಆದರೆ ಅಭಿವೃದ್ಧಿಯ ದೃಷ್ಟಿಯಿಂದ ಏಕೀಕರಣವಾಗಿದೆಯೆ ಎಂಬ ಪ್ರಶ್ನೆ ಏಕೀಕರಣವಾದ ಆರು ದಶಕಗಳ ನಂತರವೂ ಉಳಿದುಕೊಂಡಿದೆ. ಪ್ರತಿ ವರ್ಷದ ನವೆಂಬರ್ ತಿಂಗಳಲ್ಲಿ ಈ ಪ್ರಶ್ನೆ ಮುನ್ನೆಲೆಗೆ ಬರುತ್ತಿದೆ. ರಾಜ್ಯದ ಎಲ್ಲ ಪ್ರದೇಶಗಳೂ ಅಭಿವೃದ್ಧಿಯ ಫಲಗಳನ್ನು ಸಮಾನವಾಗಿ ಅನುಭವಿಸುತ್ತಿವೆಯೇ ಎಂಬುದು ಖಚಿತವಾಗಿಲ್ಲ. ರಾಜ್ಯದ ಆರೂವರೆ ಕೋಟಿ ಜನರನ್ನು ಒಳಗೊಳ್ಳುವಂತೆ ಅಭಿವೃದ್ಧಿ ನಡೆದಿಲ್ಲ. ಹೈದರಾಬಾದ್-ಕರ್ನಾಟಕ ಪ್ರದೇಶದ ಜನರು ಕರ್ನಾಟಕವನ್ನು 'ನಮ್ಮದು' ಎಂದುಕೊಳ್ಳುವ ಸ್ಥಿತಿಯಲ್ಲಿ ಅಭಿವೃದ್ಧಿ ಕಾರ್ಯಗಳು ವಿಸ್ತರಣೆಯಾಗಿಲ್ಲ. ತಮ್ಮನ್ನು ಕಡೆಗಣಿಸಲಾಗುತ್ತಿದೆ ಎಂಬ ಭಾವನೆ ಒಂದು ನಿರ್ದಿಷ್ಟ ಪ್ರದೇಶದ ಜನತೆಗೆ ಬಂದರೆ ಅದನ್ನು ಗಂಭೀರವಾಗಿ ಪರಿಗಣಿಸಬೇಕಾದ ಹೊಣೆ ಆ ಭಾಗದ ಜನಪ್ರತಿನಿಧಿಗಳದಾಗುತ್ತದೆ. ಅದರಲ್ಲಿ ಯಶಸ್ಸು ಕಂಡಿಲ್ಲ ಎಂಬುದೇ ಸದ್ಯದ ವಾಸ್ತವ.

ಏಕೀಕರಣವಾದ ನಂತರ ಕರ್ನಾಟಕದ ಆಡಳಿತ ಚುಕ್ಕಾಣಿಯನ್ನು ಹೈದರಾಬಾದ್ ಕರ್ನಾಟಕ ಹಾಗೂ ಮುಂಬೈ ಕರ್ನಾಟಕದ ಧುರೀಣರು ಹಿಡಿದಿದ್ದರು. ಈ ಆರು ದಶಕಗಳಲ್ಲಿ ಹೈದರಾಬಾದ್ ಕರ್ನಾಟಕ ಮತ್ತು ಮುಂಬೈ ಕರ್ನಾಟಕದ ಜನಪ್ರತಿನಿಧಿಗಳು ರಾಜ್ಯ ಸರ್ಕಾರದಲ್ಲಿ ಮಹತ್ವದ ಸಚಿವ ಖಾತೆಗಳನ್ನು ನಿರ್ವಹಿಸಿದ್ದರು. ಪ್ರಾದೇಶಿಕ ಅಸಮಾನತೆಯನ್ನು ಗುರುತಿಸಿ ಅದಕ್ಕೆ ಪರಿಹಾರ ಮಾರ್ಗಗಳನ್ನು ಸೂಚಿಸಲು ಅಂತರರಾಷ್ಟ್ರೀಯ ಖ್ಯಾತಿ ಹಣಕಾಸು ತಜ್ಞ ಡಾ.ಡಿ.ಎಂ.ನಂಜುಂಡಪ್ಪ ಅವರ ನೇತೃತ್ವದಲ್ಲಿ ಸಮಿತಿಯೊಂದನ್ನು ರಚಿಸಿ ಶಿಫಾರಸುಗಳನ್ನು ಪಡೆಯಲಾಗಿತ್ತು. ಅವುಗಳ ಅನುಷ್ಠಾನಕ್ಕೂ ವ್ಯವಸ್ಥೆ ಮಾಡಲಾಗಿತ್ತು. ಹೈದರಾಬಾದ್ ಕರ್ನಾಟಕ ಪ್ರದೇಶ ಅತ್ಯಂತ ಹಿಂದೆ ಬಿದ್ದಿರುವುದನ್ನು ಅಂಕಿ ಅಂಶಗಳ ಮೂಲಕ ಪ್ರತಿಪಾದಿಸಿ ಅದಕ್ಕೆ ಪ್ರತ್ಯೇಕ ಸ್ಥಾನವನ್ನು ಕಲ್ಪಿಸುವಂತೆ ಸಂವಿಧಾನಕ್ಕೆ ತಂದ 118ನೆಯ ತಿದ್ದುಪಡಿಯನ್ನೂ ಸಂಸತ್ತು ಅಂಗೀಕರಿಸಿದೆ. ಅದರಂತೆ ಅಲ್ಲಿನ ಪ್ರಾದೇಶಿಕ ಅಸಮಾನತೆಯನ್ನು ಹಂತಹಂತವಾಗಿ ನಿವಾರಿಸುವ ಪ್ರಯತ್ನಗಳು ಆರಂಭವಾಗಿವೆ.

ಆಡಳಿತದಲ್ಲಿ ಅವಗಣನೆಗೆ ಗುರಿಯಾದ ನಿರ್ದಿಷ್ಟ ಪ್ರದೇಶದ ಜನತೆಯ ತಾಳ್ಮೆ ಮಿತಿ ಮೀರಿದಾಗ ಅವರನ್ನು ಭಾವನಾತ್ಮಕವಾಗಿ ಹಿಡಿದಿಟ್ಟ ಅಂಶಗಳು ಹಿನ್ನೆಲೆಗೆ ಸರಿಯುತ್ತವೆ. ಅಭಿವೃದ್ಧಿಯಲ್ಲಿ ಆದ ಲೋಪಗಳನ್ನು ಪ್ರಶ್ನಿಸಿ ಪ್ರತ್ಯೇಕತೆಯ ವಾದವನ್ನು ಪ್ರಬಲವಾಗಿ ಮಂಡಿಸಿ ಯಶಸ್ವಿಯಾದ ನಿದರ್ಶನಗಳು ದೇಶದಲ್ಲಿ ಕಂಡು ಬಂದಿವೆ. ತೆಲುಗು ಭಾಷಿಕ ಜನರನ್ನು ಒಂದುಗೂಡಿಸುವುದಕ್ಕೆ ಪೊಟ್ಟಿ ಶ್ರೀರಾಮುಲು ಮಾಡಿಕೊಂಡ ಆತ್ಮಾರ್ಪಣೆ ಆಂಧ್ರಪ್ರದೇಶದ ರಚನೆಗೆ ಕಾರಣವಾಗಿತ್ತು. ಆದರೆ ಐದು ದಶಕಗಳ ನಂತರವೂ ಅಲ್ಲಿನ ಪ್ರಾದೇಶಿಕ ಅಸಮಾನತೆ ನಿವಾರಣೆ ಆಗಿಲ್ಲ ಎಂಬ ಪ್ರತಿಪಾದನೆ ಪ್ರಬಲವಾಗಿ ಈಚಿನ ವರ್ಷಗಳಲ್ಲಿ ಪ್ರತ್ಯೇಕ ತೆಲಂಗಾಣ ರಾಜ್ಯವೇ ಅಸ್ತಿತ್ವಕ್ಕೆ ಬಂದಿದೆ. ಭಾಷಿಕ ಬಾಂಧವ್ಯದ ಚೌಕಟ್ಟು ಅಭಿವೃದ್ಧಿಯ ಕಡೆಗಣನೆಯಿಂದ ಶಿಥಿಲವಾಗುತ್ತದೆ ಎಂಬುದಕ್ಕೆ ಇದು ಈಚಿನ ನಿದರ್ಶನ. ಜನತೆಗೆ ತಾವು ಒಂದು ಆಡಳಿತದಲ್ಲಿ ಸುರಕ್ಷಿತವಾಗಿದ್ದೇವೆ ಎಂಬ ಸಂತೃಪ್ತ ಭಾವ ಮೂಡಿಸುವಂತೆ ನೋಡಿಕೊಳ್ಳಬೇಕಾದುದು ಸಂಸದೀಯ ಪ್ರಜಾಸತ್ತೆಯಲ್ಲಿ ಜನಪ್ರತಿನಿಧಿಗಳ ಹೊಣೆಗಾರಿಕೆ. ಈ ಹೊಣೆಗಾರಿಕೆಯ ನಿರ್ವಹಣೆಯಲ್ಲಿ ಅಭಿವೃದ್ಧಿಯ ಸಾರ್ಥಕತೆ ಅಡಗಿದೆ.



## ಕನ್ನಡಿಗರ ಏಕೀಕರಣಕ್ಕೆ ಶ್ರಮಿಸಿದ ಹಿರಿಯ ಸಂಸ್ಥೆ

# ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘ

**ಮಂಜುನಾಥ ಡಿ.ಡೊಳ್ಳಿನ**
ಹಿರಿಯ ಸಹಾಯಕ ನಿರ್ದೇಶಕರು
ಧಾರವಾಡ

1890ರ ಇಸ್ವಿ ಭಾರತದಲ್ಲಿ ರಾಷ್ಟ್ರೀಯ ಪ್ರಜ್ಞೆಯ ಬೀಜ ಮೊಳಕೆಯೊಡೆಯುತ್ತಿದ್ದ ಮಹತ್ವದ ಕಾಲಘಟ್ಟ. 1885ರಲ್ಲಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಸಂಸ್ಥೆ ಸ್ಥಾಪನೆಯಾಗಿ ಸಮಸ್ತ ಭಾರತೀಯರ ಸಂಘಟನೆಗೆ ಚಾಲನೆ ದೊರೆಯಿತು. ಅದಾಗಿ 5 ವರ್ಷಗಳ ಅತ್ಯಲ್ಪ ಅವಧಿಯಲ್ಲಿಯೇ, ಕನ್ನಡ ನೆಲದ ಧಾರವಾಡದಲ್ಲಿ ರಾಷ್ಟ್ರೀಯ ಚಳವಳಿಯ ಜೊತೆಯಲ್ಲಿಯೇ ಕನ್ನಡ ನುಡಿ, ಸಂಸ್ಕೃತಿ, ಸಾಹಿತ್ಯ, ರಕ್ಷಿಸಿಕೊಂಡು ಕನ್ನಡಿಗರನ್ನು ಭಾವನಾತ್ಮಕವಾಗಿ ಒಂದುಗೂಡಿಸುವ ಕೆಲಸ ಆರಂಭವಾಯಿತು. ಈ ಕಾರ್ಯಕ್ಕೆ ಮುನ್ನುಡಿ ಬರೆದ ಹಿರಿಮೆ ಕರ್ನಾಟಕ ವಿದ್ಯಾವರ್ಧಕ ಸಂಘದ್ದಾಗಿದೆ.

1890ರ ಜುಲೈ 20ನೇ ತಾರೀಖಿನಂದು ಧಾರವಾಡದ ಶ್ರೀನಿವಾಸರಾವ್ ವಕೀಲರ ಮನೆಯ ಅಟ್ಟದ ಮೇಲೆ ಸಭೆ ಸೇರಿದ್ದ ಈ ಭಾಗದ ಹಲವಾರು ಹಿರಿಯರನ್ನು ಉದ್ದೇಶಿಸಿ ರಾ.ಹ.ದೇಶಪಾಂಡೆಯವರು ಸುಮಾರು ಒಂದು ಗಂಟೆಗೂ ಅಧಿಕ ಕಾಲ ಸುದೀರ್ಘ ಭಾಷಣ ಮಾಡಿ ಕನ್ನಡಿಗರ ದೀನ ಸ್ಥಿತಿಯನ್ನು ದೂರ ಮಾಡುವದಕ್ಕಾಗಿ ಕರ್ನಾಟಕ ವಿದ್ಯಾವರ್ಧಕ ಸಂಘದ ಸ್ಥಾಪನೆಯ ಅಗತ್ಯವನ್ನು ಮನಗಾಣಿಸಿದರು.

ಸುಮಾರು 20 ಆಡಳಿತ ವಿಭಾಗಗಳಲ್ಲಿ ಹಂಚಿಹೋಗಿದ್ದ ಆಗಿನ 1 ಕೋಟಿ 10 ಲಕ್ಷ ಜನ ಕನ್ನಡ ಭಾಷಿಕರನ್ನು ಭಾವನಾತ್ಮಕವಾಗಿ ಒಂದುಗೂಡಿಸಿ ಕನ್ನಡ ನೆಲದ ಇತಿಹಾಸ, ಸಾಹಿತ್ಯ, ಲಿಪಿ ಸುಧಾರಣೆ ಪುಸ್ತಕ ಪ್ರಕಟಣೆಗಾಗಿ ಕರ್ನಾಟಕ ವಿದ್ಯಾವರ್ಧಕ ಸಂಘ ಅಸ್ತಿತ್ವಕ್ಕೆ ಬಂದಿತು. ಶಾಮರಾವ್ ವಿಠಲ ಕಾಯ್ಕಿಣಿ ಮೊದಲ ಅಧ್ಯಕ್ಷರಾಗಿ ಹಾಗೂ ರಾಮಚಂದ್ರ ಹಣಮಂತ ದೇಶಪಾಂಡೆ ಪ್ರಥಮ ಕಾರ್ಯದರ್ಶಿಗಳಾಗಿ ಕಾರ್ಯಗಳನ್ನು ಆರಂಭಿಸಿದರು.

1848ರಲ್ಲಿ ಸ್ಥಾಪಿತವಾಗಿದ್ದ ಗುಜರಾತಿ ವರ್ನಾಕ್ಯುಲರ್ ಸೊಸೈಟಿಯ ನಿಯಮಾವಳಿಗಳನ್ನು ಮಾದರಿಯಾಗಿರಿಸಿಕೊಂಡು, ಕರ್ನಾಟಕ ವಿದ್ಯಾವರ್ಧಕ ಸಂಘದ ಕರಡನ್ನು ಸಿದ್ಧಪಡಿಸಲಾಯಿತು.

ಸಂಘದ ಮೊದಲ ಪ್ರವರ್ತಕರಲ್ಲಿ ಸರ್ಕಾರಿ ಸೇವೆಯಲ್ಲಿದ್ದ ಅಧಿಕಾರಿಗಳು, ಶಿಕ್ಷಕರು, ಬ್ರಿಟಿಷ್ ರಾಜನಿಷ್ಠರಾಗಿದ್ದ ರಾವ್‌ಬಹದ್ದೂರ್, ದಿವಾನ್‌ಬಹುದ್ದೂರ್, ರಾವ್‌ಸಾಹೇಬ ಪದವಿಗಳಿಂದ ಪುರಸ್ಕೃತರಾದವರು ಅಧಿಕ ಸಂಖ್ಯೆಯಲ್ಲಿದ್ದರು. ಸರ್ಕಾರಕ್ಕೆ ನಿಷ್ಠರಾಗಿಯೂ ಆಳರಸರಿಗೆ ವಿಧೇಯರಾಗಿಯೂ ಕನ್ನಡವನ್ನುದ್ಧರಿಸುವ ಕಾರ್ಯವನ್ನು ಅವರು ಮುಂದುವರೆಸಿದರು.

### ಕರ್ನಾಟಕ ಏಕೀಕರಣ ಚಳವಳಿಗೆ ಮುನ್ನುಡಿ

ಕನ್ನಡಿಗರ ಭಾವನಾತ್ಮಕ ಏಕತೆಗೆ ಶ್ರಮಿಸುತ್ತ ಬಂದಿದ್ದ ಕರ್ನಾಟಕ ವಿದ್ಯಾವರ್ಧಕ ಸಂಘವು ರಾಜಕೀಯವಾಗಿಯೂ ಕನ್ನಡಿಗರು ಮುಂದೊಂದು ದಿನ ಒಂದೇ ಆಡಳಿತದ ತೆಕ್ಕೆಗೆ ಒಳಪಡಬೇಕೆಂಬ ದೂರದೃಷ್ಟಿಯನ್ನು ತನ್ನೊಳಗೆ ಇರಿಸಿಕೊಂಡಿತ್ತು.

ಮೈಸೂರು, ಮಂಗಳೂರು, ಮದ್ರಾಸ್, ಹೈದರಾಬಾದ್, ಸೊಲ್ಲಾಪುರ, ಕೊಲ್ಲಾಪುರ ಭಾಗಗಳ ಕನ್ನಡಿಗರನ್ನು ಸಂಪರ್ಕಿಸಿ ಪಂಡಿತ, ವಿದ್ವಾಂಸರುಗಳ ಪರಸ್ಪರ ವಿಚಾರ ವಿನಿಮಯದಂಥ ಚಟುವಟಿಕೆಗಳು ವಾಗ್ಭೂಷಣ ನಿಯತಕಾಲಿಕದ ಪ್ರಕಟಣೆ, ಗ್ರಂಥಕರ್ತರ ಸಮ್ಮೇಳನ, ಇನಾಮೀ ಪರೀಕ್ಷೆಗಳನ್ನು ಆಯೋಜಿಸುವುದು ಕನ್ನಡ ಲಿಪಿ ಸುಧಾರಣೆ, ಏಕರೂಪದ ಗ್ರಂಥಸ್ಥ ಭಾಷೆಯ ಮೂಲಕ ಕನ್ನಡಿಗರೆಲ್ಲ ಒಂದು ಎಂಬ ಭಾವನೆಯನ್ನು ಸಮಸ್ತ ಕನ್ನಡಿಗರಲ್ಲಿ ಮೂಡಿಸಲು ಸಂಘ ಯಶಸ್ವಿಯಾಯಿತು.



ಆಲೂರು ವೆಂಕಟರಾಯರು



ಆರ್. ಹೆಚ್. ದೇಶಪಾಂಡೆ



1907 ರ ಫೆಬ್ರವರಿಯ ವಾಗ್ಭೂಷಣ ಸಂಚಿಕೆಯಲ್ಲಿ ಆಲೂರು ವೆಂಕಟರಾಯರು ಕರ್ನಾಟಕದ ಏಕೀಕರಣದ ಬಗ್ಗೆ ಸ್ಪಷ್ಟ ಲೇಖನವೊಂದನದನ್ನು ಬರೆದು ವಿಶಾಲ ಕರ್ನಾಟಕದ ಕಲ್ಪನೆಯನ್ನು ಪ್ರತಿಪಾದಿಸಿದರು. ಕರ್ನಾಟಕ ಏಕೀಕರಣದ ವಿಚಾರ ಹರಡಲು ಸಂಘದ ಮುಖವಾಣಿ 'ವಾಗ್ಭೂಷಣ' ಪತ್ರಿಕೆ ಸಾಧನವಾಯಿತು.

### ಏಕೀಕರಣದ ಮೊದಲ ಗೊತ್ತುವಳಿ:

"ಬ್ರಿಟಿಷ್ ಅಧಿಕಾರಕ್ಕೆ ಒಳಗಾದ ಎಲ್ಲ ಕನ್ನಡ ಊರು, ತಾಲ್ಲೂಕು, ಜಿಲ್ಲೆಗಳನ್ನು ಒಟ್ಟುಗೂಡಿಸಿ ಒಂದು ರಾಜಕೀಯ ವಿಭಾಗವನ್ನು ಮಾಡಿ ಅದಕ್ಕೆ ಕರ್ನಾಟಕ ಪ್ರಾಂತವೆಂದು ಕರೆಯುವ ಬಗ್ಗೆ ಸರಕಾರಕ್ಕೆ ಬಿನ್ನಹ ಮಾಡಬೇಕು. ಉದಾಹರಣಾರ್ಥ ಸೊಲ್ಲಾಪೂರ ಜಿಲ್ಲೆಯ ಕೆಲವು ಭಾಗಗಳು ಕನ್ನಡ ಇರುತ್ತವೆ. ಬಳ್ಳಾರಿ, ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಪೂರ್ಣ ಕನ್ನಡವಿದೆ. ಕಡಪಾ, ಕರ್ನೂಲ, ಅನಂತಪುರ ಮುಂತಾದ ಜಿಲ್ಲೆಗಳಲ್ಲಿ ಎಷ್ಟೋ ಹಳ್ಳಿಗಳು ತಾಲ್ಲೂಕುಗಳು ಕನ್ನಡ ಇರುತ್ತವೆ. ಇವುಗಳನ್ನೆಲ್ಲ ಒಟ್ಟು ಗೂಡಿಸಿ ಒಂದು ಕರ್ನಾಟಕ ಇಲಾಖೆ ಅಥವಾ ಪ್ರಾಂತವೆಂಬ ವಿಭಾಗವನ್ನು ಮಾಡಿದರೆ ಕನ್ನಡಿಗರ ಐಕ್ಯಕ್ಕೂ, ಹಿತಕ್ಕೂ, ಬೆಳವಣಿಗೆಗೂ ಅನುಕೂಲವಾಗುವದು" ಎಂಬ ಗೊತ್ತುವಳಿಯನ್ನು 1917ರಲ್ಲಿ ನಡೆದ ಸಂಘದ ವ್ಯವಸ್ಥಾಪಕ ಸಮಿತಿ ಸಭೆಯಲ್ಲಿ ಸ್ವೀಕರಿಸಲಾಯಿತು. ಈ ನಿರ್ಣಯವೇ ಒಟ್ಟು ಕನ್ನಡಿಗರ ಮೊಟ್ಟಮೊದಲ ಅಧಿಕೃತ ಪ್ರಯತ್ನವೆಂದು ಹೇಳಬಹುದು.

ಮ.ರಾ. ಗದಿಗೆಯ್ಯಾ ಹೊನ್ನಾಪುರಮಠ, ಕೃಷ್ಣರಾವ್ ಅಂಕಲಗಿ, ನಾರಾಯಣರಾವ್ ದೇಶಪಾಂಡೆ, ಲಕ್ಷಣರಾವ್ ಮುತಾಲಿಕದೇಸಾಯಿ, ರಾಮಚಂದ್ರರಾವ್ ದೇಶಪಾಂಡೆ ಅಂದಿನ ಸಭೆಯಲ್ಲಿ ಹಾಜರಿದ್ದ ಪ್ರಮುಖರಾಗಿದ್ದರು.

ಆದರೆ ಹೈದ್ರಾಬಾದ್ ಸಂಸ್ಥಾನ ಹಾಗೂ ಕೊಡಗು ಭಾಗದ ಕನ್ನಡ ಪ್ರದೇಶಗಳನ್ನು ಈ ಗೊತ್ತುವಳಿಯಲ್ಲಿ ಸೇರಿಸದೇ ಇರುವದಕ್ಕೆ ಆಗಿನ ಕಾರಣಗಳು ಏನಿದ್ದವೆಂಬುದು ಸಂಶೋಧನೆಗಳಿಂದ ತಿಳಿಯಬೇಕು.

ಕರ್ನಾಟಕ ಏಕೀಕರಣದ ಕಲ್ಪನೆಗೆ ಸಂಘವು ಮೊದಲು ಅಧಿಕೃತ ಮುದ್ರೆ ಒತ್ತಿದ ಬಳಿಕ ಕರ್ನಾಟಕ ಸಭಾ, ಕರ್ನಾಟಕ ಏಕೀಕರಣ ಸಂಘ, ಅಖಿಲ ಕರ್ನಾಟಕ ರಾಜ್ಯ ನಿರ್ಮಾಣ ಸಮಿತಿಗಳ ಉದಯಕ್ಕೂ ಪ್ರೇರಣೆ ದೊರೆಯಿತು.

19–06–1926 ರಂದು ಸೇರಿದ ಕ.ವಿ.ವ. ಸಂಘದ ಸಾಮಾನ್ಯ ಸಭೆಯಲ್ಲಿ ಕರ್ನಾಟಕ ಏಕೀಕರಣ ಹಾಗೂ ಕರ್ನಾಟಕ ವಿಶ್ವವಿದ್ಯಾಲಯದ ಸಂಬಂಧಿತ ಗೊತ್ತುವಳಿ ಸ್ವೀಕರಿಸಿ, ಸರ್ವಾನುಮತದಿಂದ ಅಂಗೀಕರಿಸಲಾಯಿತು. ನಾರಾಯಣರಾವ್ ನಾಡಿಗೇರ ಮಾಮಲೆದಾರ, ಕೃಷ್ಣರಾವ್ ಮುದವೇಡಕರ್, ಕೃಷ್ಣರಾವ್ ಅಂಕಲಗಿ, ಮ.ಪ್ರ.ಪೂಜಾರ, ಶಿ.ಶಿ.ಬಸವನಾಳ, ನಿ.ರೇ.ಸಬರದ, ಬಿ.ಜಿ.ಹಳಕಟ್ಟಿ, ಕೃ.ವೆಂ.ಕುಲಕರ್ಣಿ, ಕೆ.ಜಿ.ಕುಂದಣಗಾರ, ಬಿ.ಜಿ.ಹುಲಿಕವಿ, ಬಿ.ಎಸ್.ಹಂಚಿನಾಳ, ವೆಂಕಟರಾವ್ ಆಲೂರ, ಎಚ್.ಎಫ್.ಕಟ್ಟೀಮನಿ,

ಎಲ್.ಐ.ಬೇಲೂರ ಅವರು ಹಾಜರಿದ್ದ ಸಭೆಯಲ್ಲಿ ತೆಗೆದುಕೊಂಡ ಈ ನಿರ್ಣಯಗಳು ಏಕೀಕರಣ ಚಳವಳಿಯ ನೆಲೆಯನ್ನು ವಿಸ್ತರಿಸಿತು.

1928ರ ಜನವರಿ 29ನೇ ತಾರೀಖಿನಂದು ನಡೆದ ಕ.ವಿ.ವ. ಸಂಘ ವಾರ್ಷಿಕ ಸಾಧಾರಣ ಸಭೆಯು ಏಕೀಕರಣ ಚಳವಳಿಯನ್ನು ಅಧಿಕೃತವಾಗಿ ಮುನ್ನಡೆಸಲು ಠರಾವು ತೆಗೆದುಕೊಂಡಿತು.

ವಿ.ಎಚ್.ನಾಯಕ್, ಸಿ.ಸಿ.ಹುಲಕೋಟಿಯವರ ಮುಂದಾಳತ್ವದಲ್ಲಿ 30 ಜನರನ್ನೊಳಗೊಂಡ ಬ್ರಿಟಿಷ ಕರ್ನಾಟಕ ಸಮಿತಿಯನ್ನು ರಚಿಸಿ ಬಾಂಬೆ, ಮದ್ರಾಸ್ ಹಾಗೂ ಭಾರತ ಸರ್ಕಾರಗಳ ಎದುರು ಕನ್ನಡಿಗರ ಬೇಡಿಕೆಗಳು ಮತ್ತು ಆಕಾಂಕ್ಷೆಗಳನ್ನು ಮಂಡಿಸಲು ನಿರ್ಣಯಿಸಿತು. ವಿಧಾನ ಪರಿಷತ್ತಿನ ಸದಸ್ಯರಾಗಿದ್ದ ಬೆಳಗಾವಿಯ ರಾವ್‌ಬಹದ್ದೂರ್ ಎಸ್.ಎನ್.ಅಂಗಡಿ, ವಿ.ಎನ್.ಜೋಗ್, ರಾವ್‌ಬಹದ್ದೂರ್ ಎಸ್.ಟಿ.ಕಂಬಳಿ, ವಿಜಾಪುರದ ರಾವ್‌ಸಾಹೇಬ್ ಎಸ್.ವಿ. ಸರ್‌ನಾಯಕ್, ಧಾರವಾಡದ ವಿ.ಬಿ.ಆಲೂರ, ಈ ಸಮಿತಿಯ ಸದಸ್ಯರಾಗಿದ್ದರು. ಎಚ್.ಎಫ್.ಕಟ್ಟಿಮನಿ, ಕಾರ್ಯದರ್ಶಿಗಳಾಗಿದ್ದರು.

1920 ರಲ್ಲಿ ಧಾರವಾಡದಲ್ಲಿ ಕರ್ನಾಟಕ ರಾಜಕೀಯ ಪರಿಷತ್ತು ಸಮಾವೇಶಗೊಂಡಿತ್ತು. 1924ರಲ್ಲಿ ಬೆಳಗಾವಿಯಲ್ಲಿ ಅಖಿಲ ಕರ್ನಾಟಕ ಏಕೀಕರಣ ಸಂಘ ಸ್ಥಾಪನೆಯಾಯಿತು. 1925ರಿಂದ ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಕಮಿಟಿಯು ಸ್ವಾತಂತ್ರ್ಯ ಚಳವಳಿಯೊಂದಿಗೆ ಕರ್ನಾಟಕ ಏಕೀಕರಣ ಹೋರಾಟಕ್ಕೆ ಆದ್ಯತೆ ನೀಡಿತು.

1935ರ ಫೆಬ್ರವರಿ 2ರಂದು ಕ.ವಿ.ವ ಸಂಘದ ಅಧ್ಯಕ್ಷರು "Intense feeling about unification among Karnataka people Respectfully urge Excellency expedite steps" ಎಂಬ ಟೆಲಿಗ್ರಾಂ ಸಂದೇಶವನ್ನು ವೈಸರಾಯ್‌ರಿಗೂ, ಕೇಂದ್ರ ಶಾಸನ ಸಭೆಯ ಸದಸ್ಯರಿಗೂ ಕಳುಹಿಸಿದರು. 1942 ರಿಂದ 1948 ರವರೆಗಿನ ಕ.ವಿ.ವ. ಸಂಘದ ಕಾರ್ಯಕಾರಿ ಮಂಡಲದ ಕಲಾಪಗಳ ವಿಷಯ ಪಟ್ಟಿಯ ಅಂಶಗಳನ್ನು ಪರಿಶೀಲಿಸಿದಾಗ ಏಕೀಕರಣಕ್ಕಾಗಿ ಯಾವೆಲ್ಲ ಕ್ರಮಗಳು, ಹೋರಾಟಗಳನ್ನು ಸಂಘ ರೂಪಿಸಿತು ಎಂಬುದು ವೇದ್ಯವಾಗುತ್ತದೆ.

**ಕನ್ನಡ, ಕನ್ನಡಿಗರ ಕಾವಲು ಸಂಸ್ಥೆ :**

ಕರ್ನಾಟಕ ವಿದ್ಯಾವರ್ಧಕ ಸಂಘವು ಕನ್ನಡ ಕನ್ನಡಿಗರ ಹಿತಾಸಕ್ತಿಗಳ ಕಾವಲಿನ ಸಂಸ್ಥೆಯಾಗಿ ಕೆಲಸ ಮಾಡುತ್ತ ಬಂದಿದೆ. 1896 ರ ನವೆಂಬರ್ 22ರಷ್ಟು ಹಿಂದೆಯೇ ಅದು ಕನ್ನಡಿಗರಿಗೆ ಬಾಳಬೋಧೆ ಅಕ್ಷರಗಳು ಹಾಗೂ ಮರಾಠಿ ಭಾಷೆಯ ಕಲಿಕೆ ಅಗತ್ಯವಿಲ್ಲವೆಂದು ಗೊತ್ತುವಳಿ ತೆಗೆದುಕೊಂಡು ಪುಣೆಯ ಸಾರ್ವಜನಿಕ ಶಿಕ್ಷಣ ನಿರ್ದೇಶಕರಿಗೆ ಪತ್ರ ಕಳುಹಿಸಿತು. 1901 ರಲ್ಲಿ ಮುಂಬಯಿ ವಿಶ್ವವಿದ್ಯಾಲಯದಲ್ಲಿ ಕನ್ನಡಕ್ಕೆ ಸ್ಥಾನ ದೊರಕಿಸಿಕೊಳ್ಳಲು ಹೋರಾಡಿತು.

ಧಾರವಾಡದ ಕರ್ನಾಟಕ ಕಾಲೇಜಿನ ಅಧ್ಯಾಪಕ ಕೆ.ಜಿ.ಕುಂದಣಗಾರ, ಟ್ರೇನಿಂಗ್ ಕಾಲೇಜಿನ ಕನ್ನಡ ಪಂಡಿತ ಮ.ಪ್ರ.ಪೂಜಾರ ಮುಂತಾದ ಕನ್ನಡಿಗ ಸರ್ಕಾರಿ ಸೇವಕರಿಗೆ ಕಿರುಕುಳ ಉಂಟಾದಾಗ ಸಂಘ ಅವರ ಹಿತರಕ್ಷಣೆಗೆ ಒತ್ತಾಸೆಯಾಗಿ ನಿಲ್ಲುತ್ತದೆ. 1929 ರಂದು ಬೆಳಗಾವಿಯಲ್ಲಿ ಹಮ್ಮಿಕೊಳ್ಳಲು ಉದ್ದೇಶಿಸಿದ್ದ ಮಹಾರಾಷ್ಟ್ರ ಸಾಹಿತ್ಯ ಸಮ್ಮೇಳನಕ್ಕೆ ಸಂಘ ತೀವ್ರ ವಿರೋಧ ವ್ಯಕ್ತ ಮಾಡುತ್ತದೆ.

ಸುಮಾರು 20 ಆಡಳಿತ ವಿಭಾಗಗಳಲ್ಲಿ ಹಂಚಿಹೋಗಿದ್ದ ಆಗಿನ 1 ಕೋಟಿ 10 ಲಕ್ಷ ಜನ ಕನ್ನಡ ಭಾಷಿಕರನ್ನು ಭಾವನಾತ್ಮಕವಾಗಿ ಒಂದುಗೂಡಿಸಿ ಕನ್ನಡ ನೆಲದ ಇತಿಹಾಸ, ಸಾಹಿತ್ಯ, ಲಿಪಿ ಸುಧಾರಣೆ ಪುಸ್ತಕ ಪ್ರಕಟಣೆಗಾಗಿ ಕರ್ನಾಟಕ ವಿದ್ಯಾವರ್ಧಕ ಸಂಘ ಅಸ್ತಿತ್ವಕ್ಕೆ ಬಂದಿತು. ಶಾಮರಾವ್ ವಿಠಲ ಕಾಯ್ಕಿಣಿ ಮೊದಲ ಅಧ್ಯಕ್ಷರಾಗಿ ಹಾಗೂ ರಾಮಚಂದ್ರ ಹಣಮಂತ ದೇಶಪಾಂಡೆ ಪ್ರಥಮ ಕಾರ್ಯದರ್ಶಿಗಳಾಗಿ ಕಾರ್ಯಗಳನ್ನು ಆರಂಭಿಸಿದರು.

1934 ರಲ್ಲಿ ಬಳ್ಳಾರಿ ಹಾಗೂ ಹಂಪಿಯ ಸುತ್ತಮುತ್ತಲಿನ ಪ್ರದೇಶಗಳನ್ನು ಆಂಧ್ರ ವಿಶ್ವವಿದ್ಯಾಲಯದ ವ್ಯಾಪ್ತಿಗೆ ಸೇರಿಸುವ ಪ್ರಯತ್ನ ನಡೆದಾಗ ಸಂಘವು ಮದ್ರಾಸ್ ಸರಕಾರಕ್ಕೆ ಪತ್ರ ಬರೆದು ತಡೆಯೊಡ್ಡುತ್ತದೆ.

1944 ರಲ್ಲಿ ಕೆ.ಎಂ.ಮುನ್ಷಿ ಅವರ ಕಾದಂಬರಿ ಆಧಾರಿತ "ಪೃಥ್ವೀವಲ್ಲಭ" ಎಂಬ ಸೋಹ್ರಾಬ್ ಮೋದಿ ನಿರ್ಮಿತ ಚಲನಚಿತ್ರದಲ್ಲಿ ಕರ್ನಾಟಕದ ಚಕ್ರವರ್ತಿಗೆ ಅಪಮಾನವಾಗುವಂತೆ ಚಿತ್ರಿಸಿದ ಅಂಶವನ್ನು ಸಂಘ ಪ್ರತಿಭಟಿಸುತ್ತದೆ. ಕನ್ನಡಿಗರ ಜಾಗೃತ ಪ್ರಜ್ಞೆಯ ಬಗೆಗೆ ದೇಶಕ್ಕೆ ಸಂದೇಶ ರವಾನಿಸುತ್ತದೆ.

1956ರ ನವೆಂಬರ್ 1 ರಂದು ಮುಂಬಯಿ, ಹೈದ್ರಾಬಾದ್, ಮೈಸೂರು, ಮದ್ರಾಸ್, ಕೊಡಗು ಮತ್ತಿತರ ಕನ್ನಡ ಪ್ರದೇಶಗಳು ಒಟ್ಟುಗೂಡಿದ ನವ ಮೈಸೂರು ರಾಜ್ಯ ರಚನೆಯಾಗುವವರೆಗೂ ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘ ತನ್ನ ಹೋರಾಟವನ್ನು ನಿರಂತರವಾಗಿ ನಡೆಸಿಕೊಂಡೇ ಬಂದಿತು.

ಏಕೀಕರಣದ ಬಳಿಕವೂ ನಾಡಿನ ನೆಲ, ಜಲ, ಭಾಷೆ, ಶಿಕ್ಷಣ, ಕೃಷಿಯ ವಿಷಯಗಳಲ್ಲಿ ಸದಾ ಜಾಗೃತಿ ಮೂಡಿಸುವ, ಕನ್ನಡಿಗರನ್ನು ಎಚ್ಚರದಿಂದ ಇಡುವ ಕಾರ್ಯದಲ್ಲಿ ನಿರತವಾಗಿದೆ. ಕರ್ನಾಟಕ ವಿದ್ಯಾವರ್ಧಕ ಸಂಘವು ಹಿರಿಯ ಪತ್ರಕರ್ತ ಡಾ. ಪಾಟೀಲ ಪುಟ್ಟಪ್ಪನವರ ಸಾರಥ್ಯದಲ್ಲಿ ಕನ್ನಡಿಗರ ಪಾಲಿನ ಹಿರಿಯ ಸಂಸ್ಥೆಯಾಗಿ, ಕ್ರಿಯಾಶೀಲವಾಗಿ ಇಂದಿಗೂ ತನ್ನ ಮಹತ್ವ ಕಾಯ್ದುಕೊಂಡಿದೆ. ■



# ಕರ್ನಾಟಕ

## ಏಕೀಕರಣಕ್ಕೆ ಮೊದಲು ಮತ್ತು ಅನಂತರ

ಬಿ.ಎಂ. ಚಂದ್ರಶೇಖರಯ್ಯ

ಕರ್ನಾಟಕವು ತನ್ನ ಅನೇಕ ಸಮಸ್ಯೆಗಳನ್ನು ಅರಿವು ಮತ್ತು ಕ್ರಿಯಾಶೀಲ ಸಾಮರ್ಥ್ಯಗಳಿಂದ, ಸಮರ್ಥವಾಗಿ ಎದುರಿಸಿ ಪರಿಹರಿಸಿಕೊಂಡಿದೆ. ಹಾಗೆಯೇ, ಉಳಿದಿರುವ ಸಮಸ್ಯೆಗಳ ನಿವಾರಣೆಗೂ ಮಾರ್ಗೋಪಾಯಗಳನ್ನು ಕಂಡುಕೊಂಡಿದೆ. ಅವುಗಳನ್ನು ಗುರುತಿಸಲು ಪ್ರಸಿದ್ಧ ಆರ್ಥಿಕ **ತಜ್ಞರಾದ ನಂಜುಂಡಪ್ಪನವರ ಅಧ್ಯಕ್ಷತೆಯಲ್ಲಿ ಆಯೋಗವೊಂದನ್ನು ರಚಿಸಿತು. ಆಯೋಗವು ತನ್ನ ವರದಿಯಲ್ಲಿ ಸೂಚಿಸಿರುವ ಸಮಸ್ಯೆಗಳ ಪರಿಹಾರಕ್ಕೆ ಅಗತ್ಯ ಕ್ರಮಗಳನ್ನು ಈಗಾಗಲೇ ಸರ್ಕಾರವು ಕೈಗೊಂಡಿದೆ.**



**ಬಾ**ದಾಮಿಯ ಚಾಲುಕ್ಯರು, ರಾಷ್ಟ್ರಕೂಟರು, ಕಲ್ಯಾಣ ಚಾಲುಕ್ಯರು ಹಾಗೂ ಕಲಚುರಿಗಳು ಆಳುತ್ತಿದ್ದಾಗ ಕರ್ನಾಟಕವು ಭೌಗೋಳಿಕವಾಗಿ ಒಂದಾಗಿಯೇ ಇತ್ತು. ಆದರೆ, ಕಲ್ಯಾಣ ಚಾಲುಕ್ಯರ ನಂತರ ಕನ್ನಡ ಪ್ರದೇಶವು ಉತ್ತರದ ದೇವಗಿರಿಯ ಯಾದವರು ಮತ್ತು ದಕ್ಷಿಣದ ಹೊಯ್ಸಳರ ನಡುವೆ ಹಂಚಿ ಹೋಗಿ ಇಬ್ಭಾಗವಾಯಿತು. ಅನಂತರ, ವಿಜಯನಗರದ ಕಾಲದಲ್ಲಿ ಕರ್ನಾಟಕವು ಸಮಗ್ರತೆಯನ್ನು ಕಾಪಾಡಿಕೊಂಡಿತಾದರೂ, ಕೃಷ್ಣಾ ನದಿಯ ಉತ್ತರದ ಕನ್ನಡ ಪ್ರದೇಶವು ಬಹಮನಿಗಳು ಅನಂತರ ಬಿಜಾಪುರದ ಸುಲ್ತಾನರುಗಳ ಆಳ್ವಿಕೆಗೆಗೊಳಗಾಗಿದ್ದುದರಿಂದಾಗಿ ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿಗಳು ಅನಾದರಕ್ಕೊಳಗಾದವು.

1885ರಲ್ಲಿ ನಡೆದ ಭಾರತ ರಾಷ್ಟ್ರೀಯ ಕಾಂಗ್ರೆಸ್‌ನ ಹುಟ್ಟಿನೊಂದಿಗೆ, ಭಾಷಾವಾರು ಪ್ರಾಂತ್ಯಗಳ ಬೇಡಿಕೆಯೂ ಹುಟ್ಟಿಕೊಂಡಿತು. ಅದರಲ್ಲಿ ಏಕೀಕೃತ ಕರ್ನಾಟಕದ ಬೇಡಿಕೆಯೂ ಸೇರಿತ್ತು. 1905ರಲ್ಲಿ ನಡೆದ ಬಂಗಾಳ ವಿಭಜನೆಯೂ ಬ್ರಿಟಿಷ್ ಸರ್ಕಾರಕ್ಕೆ ಭಾರೀ ಎದಿರೇಟು ನೀಡಿತು.

ಇಡೀ ದೇಶವೇ ಒಂದಾಗಿ ನಿಂತು ಬ್ರಿಟಿಷರ ಒಡೆದಾಳುವ ನೀತಿಯ ವಿರುದ್ಧ ಸಿಡಿದೆದ್ದು ಉಗ್ರ ಚಳವಳಿಯನ್ನು ನಡೆಸಿತು. ಅಲ್ಲದೆ, ಭಾರತದ ಎಲ್ಲಾ ಪ್ರಾಂತ್ಯಗಳನ್ನೂ ಭಾಷಾವಾರಾಗಿ ಪುನರ್ರಚಿಸಲು ಒತ್ತಾಯ ಹೇರಿತು. ಈ ಜನಜಾಗೃತಿಯ ಪರಿಣಾಮವಾಗಿ ಕರ್ನಾಟಕದಲ್ಲೂ ಆಂದೋಲನ ಪ್ರಾರಂಭವಾಯಿತು. ವಿದೇಶೀ ಮಿಷನರಿಗಳು ಕನ್ನಡ ವಿದ್ವಾಂಸರಲ್ಲಿ ಕನ್ನಡ ಪುನರುಜ್ಜೀವನವನ್ನು ಕೈಗೊಳ್ಳಲು ಉದ್ದೀಪಿಸಿದರು. ಕನ್ನಡ ಪತ್ರಿಕೆಗಳಲ್ಲಿ ಕನ್ನಡ ಪುನರುಜ್ಜೀವನದ ಬಗ್ಗೆ ಅನೇಕ ಮುಂದಾಳುಗಳು ಲೇಖನಗಳನ್ನು ಬರೆದು, ಕನ್ನಡಿಗರ ದೇಶಾಭಿಮಾನವನ್ನು ಬಡಿದೆಬ್ಬಿಸಿದರು. ಅಂತಹ ಮಹನೀಯರಲ್ಲಿ ಪ್ರೊ.ಬಿ.ಎಂ. ಶ್ರೀಕಂಠಯ್ಯ, ಹಾನಗಲ್ಲು ಕುಮಾರಸ್ವಾಮಿಗಳು, ಹರ್ಡೇಕರ್ ಮಂಜಪ್ಪ, ಆಲೂರು ವೆಂಕಟರಾಯರು ಪ್ರಮುಖರು. ಹೀಗೆ ಸಾಹಿತಿಗಳು, ಕರ್ನಾಟಕದ ಏಕೀಕರಣ ಚಳವಳಿಗೆ ಬೇಕಾದ ಭಾವನಾತ್ಮಕ ಹಾಗೂ ತಾತ್ವಿಕ ನೆಲಗಟ್ಟನ್ನು ಒದಗಿಸಿಕೊಟ್ಟ ಮೇಲೆ, ರಾಜಕಾರಣಿಗಳು ಅದನ್ನುಪಯೋಗಿಸಿಕೊಂಡು, ಚಳವಳಿಗೆ ವ್ಯವಸ್ಥಿತವಾದ ರೂಪವನ್ನು ಕೊಟ್ಟರು.

ಹಿಂದಿನ ಮೈಸೂರು ರಾಜ್ಯದಲ್ಲಿ ಪ್ರಜಾವತ್ಸಲರಾಗಿದ್ದ ಅರಸರು ಕೈಗೊಂಡಿದ್ದ ಜನಹಿತ ಕಾರ್ಯಗಳನ್ನು ದಕ್ಷ ಆಡಳಿತಗಾರರೂ, ರಾಜನೀತಿಜ್ಞರೂ ಆಗಿದ್ದ ಸರ್ ಕೆ. ಶೇಷಾದ್ರಿ ಅಯ್ಯರ್, ಸರ್ ಎಂ. ವಿಶ್ವೇಶ್ವರಯ್ಯ, ಸರ್ ಮಿರ್ಜಾ ಇಸ್ಮಾಯಿಲ್ ಅವರುಗಳಂತಹ ದಿವಾನರುಗಳು ಅನುಷ್ಠಾನಗೊಳಿಸಿದರು. ರಾಜ್ಯದಲ್ಲಿ ಕೋಲಾರದ ಚಿನ್ನದ ಗಣಿಗಳು, ಭದ್ರಾವತಿಯ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆ, ಕಾಗದದ ಕಾರ್ಖಾನೆ, ಸಿಮೆಂಟ್ ಕಾರ್ಖಾನೆ, ರೇಷ್ಮೆ ಕಾರ್ಖಾನೆ, ಪಿಂಗಾಣಿ ಕಾರ್ಖಾನೆಗಳಂತಹ ಅನೇಕ ಕಾರ್ಖಾನೆಗಳನ್ನು ಸ್ಥಾಪಿಸಲಾಗಿತ್ತು. ಇವುಗಳ ಜೊತೆಗೆ ಜಲವಿದ್ಯುತ್ ತಯಾರಿಕೆಯೂ ಸೇರಿಕೊಂಡಿತು. (ಭಾರತದ ಹಾಗೆಯೇ ಕರ್ನಾಟಕದ ಮೊದಲ ಜಲವಿದ್ಯುತ್ ಯೋಜನೆಯು 1887ರಲ್ಲಿ ಬೆಳಗಾವಿ ಜಿಲ್ಲೆಯ ಗೋಕಾಕದಲ್ಲಿ ಸ್ಥಾಪಿಸಲ್ಪಟ್ಟಿತು) ಶಿವನಸಮುದ್ರದಿಂದ ಕೆ.ಜಿ.ಎಫ್.ವರೆಗಿನ ಜಲವಿದ್ಯುತ್ ಸಾಗಣೆ ಮಾರ್ಗವು ಆಗಿನ ಕಾಲಕ್ಕೆ ಇಡೀ ಭಾರತದಲ್ಲಿಯೇ ಅತ್ಯಂತ ಉದ್ದದ ಮಾರ್ಗವಾಗಿತ್ತು!

ಮೇಲ್ಕಂಡ ಕೈಗಾರಿಕೆಗಳಿಂದ ಬಂದ ಆದಾಯವನ್ನು ರಸ್ತೆಗಳು, ಅಣೆಕಟ್ಟುಗಳು, ಸೇತುವೆಗಳ ನಿರ್ಮಾಣ ಮೊದಲಾದ ಲೋಕೋಪಯೋಗಿ ಕಾರ್ಯಗಳು ಹಾಗೂ ಆಸ್ಪತ್ರೆ, ಶಿಕ್ಷಣ ಮೊದಲಾದ ಜನೋಪಯೋಗಿ ಕಾರ್ಯಗಳಿಗೂ ಬಳಸಲಾಯಿತು. ಸರ್ಕಾರವು ಪ್ರಾಥಮಿಕ, ಕಾಲೇಜು ಹಾಗೂ ವಿಶ್ವವಿದ್ಯಾಲಯ ಮಟ್ಟದವರೆಗಿನ ಶಿಕ್ಷಣದ ಹೊಣೆಯನ್ನು ತಾನೇ ಭರಿಸತೊಡಗಿತು. ಪ್ರೌಢಶಾಲೆ, ಕಾಲೇಜುಗಳನ್ನು ಅಧಿಕ ಸಂಖ್ಯೆಯಲ್ಲಿ ಪ್ರಾರಂಭಿಸಲಾಯಿತು. ಶಿಕ್ಷಣಕ್ಕೆ ಅತಿ ಕಡಿಮೆ ಶುಲ್ಕವನ್ನು ವಿಧಿಸಲಾಗುತ್ತಿತ್ತು. ಅರ್ಹ ಹಾಗೂ ಹಿಂದುಳಿದವರಿಗೆ ವಿದ್ಯಾರ್ಥಿ ವೇತನಗಳನ್ನು ನೀಡಲಾಗುತ್ತಿತ್ತು. 1916ರಲ್ಲಿ ದೇಶೀಯ ಸಂಸ್ಥಾನಗಳಲ್ಲೇ ಮೊಟ್ಟಮೊದಲನೆಯದಾಗಿ 'ಮೈಸೂರು ವಿಶ್ವವಿದ್ಯಾನಿಲಯ'ವನ್ನು ಸ್ಥಾಪಿಸಲಾಯಿತು!

ಆದರೆ, ಏಕೀಕೃತ ಕರ್ನಾಟಕದ ಇತರ ಭಾಗಗಳ ಪರಿಸ್ಥಿತಿ ಇದಕ್ಕೆ ವ್ಯತಿರಿಕ್ತವಾಗಿತ್ತು. ಆ ಪ್ರದೇಶಗಳಲ್ಲಿ ಹೇರಳವಾದ ಸಂಪನ್ಮೂಲಗಳಿದ್ದರೂ, ಅವುಗಳ ಸದ್ಬಳಕೆಗೆ ಯಾರೂ ಮುಂದಾಗಿರಲಿಲ್ಲ. ಏಕೆಂದರೆ, ಆಯಾ ಪ್ರಾಂತ್ಯಗಳಲ್ಲಿ ಕನ್ನಡಿಗರು ಅಲ್ಪಸಂಖ್ಯಾತರಾಗಿದ್ದರು. ಅದರಿಂದಾಗಿ, ಅವರ ಅಸ್ತಿತ್ವವು ಯಾವುದೇ ಪ್ರಭಾವ ಬೀರುವಂತಿರಲಿಲ್ಲ. ಆ ಸರ್ಕಾರಗಳು ಅವರ ಶಿಕ್ಷಣದ ಹೊಣೆಯನ್ನು ಕಡೆಗಣಿಸಿದ್ದು, ಅದು ಖಾಸಗಿಯವರ ಪಾಲಾಗಿತ್ತು. ಧಾರವಾಡದಲ್ಲಿ ಆ ಪ್ರದೇಶದ ಮೊಟ್ಟಮೊದಲ ಕಾಲೇಜು, 'ಕರ್ನಾಟಕ ಕಾಲೇಜು' ಪ್ರಾರಂಭವಾಗಲು 1916ರ ವರೆಗೂ ಕಾಯಬೇಕಾಯಿತು. ಅದೂ ಕೂಡಾ ಸಾರ್ವಜನಿಕರು ನೀಡಿದ 2 ಲಕ್ಷ ರೂ.ಗಳ ವಂತಿಗೆಯಿಂದ ಸಾಧ್ಯವಾಯಿತು. 1931–32ರಲ್ಲಿ ಕಲ್ಬುರ್ಗಿಯಲ್ಲಿ ಒಂದು 'ಇಂಟರ್ ಮೀಡಿಯಟ್ ಕಾಲೇಜ'ನ್ನು ಮಾತ್ರ ಸ್ಥಾಪಿಸಲಾಯಿತು. 1947ರ ವರೆಗೆ ಹೈದರಾಬಾದ್ ಕರ್ನಾಟಕದಲ್ಲಿ ಇದ್ದುದು ಇದೊಂದೇ ಉಚ್ಚ ಶಿಕ್ಷಣ ಸಂಸ್ಥೆಯಾಗಿತ್ತು.





ಸಹಜವಾಗಿಯೇ, ನೂತನ ರಾಜ್ಯವು ಅನೇಕ ಸಮಸ್ಯೆಗಳನ್ನೆದುರಿಸಬೇಕಾಯಿತು. ಕನ್ನಡಿಗರ 65 ವರ್ಷಗಳ ಅವಿಶ್ರಾಂತ ಚಳವಳಿಯ ಫಲವಾಗಿ ಮುಂಬಯಿ, ಮದ್ರಾಸ್, ಹೈದರಾಬಾದ್ ಪ್ರಾಂತ್ಯಗಳಲ್ಲಿ ಕನ್ನಡ ಮಾತನಾಡುವವರು ಇದ್ದ ಪ್ರದೇಶಗಳನ್ನು, ಕೊಡಗು ಸೇರಿದಂತೆ ಹಳೆಯ ಮೈಸೂರು ರಾಜ್ಯದ 9 ಜಿಲ್ಲೆಗಳೊಡನೆ ಸೇರಿಸಿ ಏಕೀಕರಣ ಮಾಡಲಾಗಿತ್ತು. ನೂತನ ಮೈಸೂರು ರಾಜ್ಯದ ವಿಸ್ತೀರ್ಣ 1,91,791 ಚದರ ಕಿಲೋಮೀಟರುಗಳು. 1961ರ ಜನಗಣತಿಯಂತೆ ಜನಸಂಖ್ಯೆ 2,35,47,081 (2001ರಲ್ಲಿ 5,28,51,000). ಆಗ ರಾಜ್ಯವನ್ನು 19 ಜಿಲ್ಲೆಗಳು (ಈಗ 30 ಜಿಲ್ಲೆಗಳು), 175 ತಾಲ್ಲೂಕುಗಳನ್ನಾಗಿಯೂ ವಿಂಗಡಿಸಲಾಗಿತ್ತು. ಹಾಗೆಯೇ 4 ಕಂದಾಯ ವಿಭಾಗಗಳನ್ನಾಗಿ ಮಾಡಲಾಗಿತ್ತು.

ನೂತನ ರಾಜ್ಯವು ನಿರ್ವಹಿಸಬೇಕಾಗಿದ್ದ ಪ್ರಮುಖ ಸಮಸ್ಯೆಗಳೆಂದರೆ, ರಾಜಕೀಯ ಏಕೀಕರಣದ ಸಮಸ್ಯೆ, ಭಾವೈಕ್ಯದ ಸಮಸ್ಯೆ, ಶಿಕ್ಷಣವನ್ನು ಏಕರೂಪಗೊಳಿಸುವ ಸಮಸ್ಯೆ, ವೇತನ ಶ್ರೇಣಿಗಳ ಸಮಸ್ಯೆ, ಅಂತರರಾರಜ್ಯ ಸೇವಾ ಹಿರಿತನವನ್ನು ನಿರ್ಧರಿಸುವುದು, ಏಕರೀತಿಯ ತೆರಿಗೆ ಹಾಗೂ ಕಂದಾಯದ ಕಾಯ್ದೆ, ಕಾನೂನುಗಳೇ ಅಲ್ಲದೆ ಇನ್ನಿತರ ಹಲವಾರು ಸಮಸ್ಯೆಗಳೂ ಇದ್ದವು.

ಸಚಿವ ಸಂಪುಟದಲ್ಲಿ ಮತ್ತು ರಾಜ್ಯಮಟ್ಟದ ಪ್ರಮುಖ ಸಮಿತಿಗಳಲ್ಲಿ, ಮಂಡಲಿಗಳಲ್ಲಿ ಏಕೀಕೃತ ಪ್ರದೇಶಗಳಿಗೆ ಸೂಕ್ತ ಪ್ರಾತಿನಿಧ್ಯ ನೀಡುವ ಮೂಲಕ ರಾಜಕೀಯ ಏಕೀಕರಣವನ್ನು ಸಾಧಿಸಲಾಯಿತು. ಆಡಳಿತ ಪಕ್ಷವಾದ ಕಾಂಗ್ರೆಸ್ ಏಕೀಕರಣದ ಹಿಂದಿನ ಶಕ್ತಿಯಾಗಿ ಕಾರ್ಯನಿರ್ವಹಿಸಿತು. ರಾಜ್ಯವು ಪುನರ್ವಿಂಗಡಣೆಯಾದ ಕೂಡಲೇ ನಡೆದ ಸಾರ್ವತ್ರಿಕ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವು ಸ್ಪಷ್ಟ ಬಹುಮತ ಗಳಿಸಿತು. ಸಿದ್ದವ್ವನ ಹಳ್ಳಿ ನಿಜಲಿಂಗಪ್ಪನವರು ಮುಖ್ಯಮಂತ್ರಿಯಾದರು.

**ನಮ್ಮ ಭಾಷೆ ಉಳಿಯಬೇಕಾದರೆ, ನಮ್ಮ ಜನ ಬದುಕ ಬೇಕಾದರೆ,**
**ಬಾಳ ಬೇಕಾದರೆ, ಕನ್ನಡದಲ್ಲಿ ಜ್ಞಾನ ಪ್ರಚಾರವಾಗಬೇಕು**

– ಎಂ. ಆರ್. ಶ್ರೀನಿವಾಸ ಮೂರ್ತಿ



'ಬೆಂಗಳೂರು ವಿಶ್ವವಿದ್ಯಾಲಯ'
(ಸೆಂಟ್ರಲ್ ಕಾಲೇಜ್)

ಶಿಕ್ಷಣ ಕ್ಷೇತ್ರದಲ್ಲಿ, ವಿವಿಧ ಶಿಕ್ಷಣ ಪದ್ಧತಿಗಳನ್ನು ಏಕೀಕರಿಸುವ ಸಮಸ್ಯೆಯು ಉದ್ಭವಿಸಿತು. ಅದಕ್ಕಾಗಿ, ರಾಜ್ಯ ಶಿಕ್ಷಣ ಏಕೀಕರಣದ ಸಲಹಾ ಸಮಿತಿಯನ್ನು ನೇಮಕ ಮಾಡಲಾಯಿತು. ಸಮಿತಿಯು ಏಕ ರೀತಿಯ ಶಿಕ್ಷಣ ಕಾಯ್ದೆ, ಸಹಾಯ ಧನಗಳ ನಿಯಮಗಳು ಮತ್ತು ಅವುಗಳಿಗೆ ಸಂಬಂಧಿಸಿದ ಉಪನಿಯಮಗಳನ್ನು ರೂಪಿಸಿತು. 6 ರಿಂದ 12 ವರ್ಷಗಳ ಗುಂಪಿನ ಮಕ್ಕಳಿಗೆ ಪ್ರಾಥಮಿಕ ಶಿಕ್ಷಣವನ್ನು 'ಕಡ್ಡಾಯಗೊಳಿಸುವ' ಮೈಸೂರು ಕಡ್ಡಾಯ ಪ್ರಾಥಮಿಕ ಶಿಕ್ಷಣ ಮಸೂದೆ 1961ನ್ನು ರಾಜ್ಯದ ಶಾಸನ ಸಭೆಯು ಅಂಗೀಕರಿಸಿ ಕುಟುಂಬಗಳ ಮಕ್ಕಳಿಗೆ ಸೆಕೆಂಡರಿ ಶಿಕ್ಷಣವನ್ನು ಪುಕ್ಕಟೆಯಾಗಿ ನೀಡಲು ಕ್ರಮ ಕೈಗೊಳ್ಳಲಾಯಿತು.

1964ರಲ್ಲಿ 'ಕಾಲೇಜು ಶಿಕ್ಷಣ ನಿರ್ದೇಶನಾಲಯ'ವನ್ನು ರಚಿಸಿ, ರಾಜ್ಯದ ಎಲ್ಲ ಕಾಲೇಜುಗಳ ನಿರ್ವಹಣೆಯ ಜವಾಬ್ದಾರಿಯನ್ನು ಅದಕ್ಕೆ ವಹಿಸಿಕೊಡಲಾಯಿತು. 1964ರಲ್ಲಿಯೇ 'ಬೆಂಗಳೂರು ವಿಶ್ವವಿದ್ಯಾಲಯ'ವನ್ನು ಅಸ್ತಿತ್ವಕ್ಕೆ ತರಲಾಯಿತು. ರಾಜ್ಯದ ಪದವಿ ಪೂರ್ವ ಶಿಕ್ಷಣ ಹಾಗೂ ಪದವಿ ಶಿಕ್ಷಣ ವ್ಯಾಸಂಗಗಳಿಗೆ ಏಕ ರೀತಿಯ ಪಠ್ಯಕ್ರಮವನ್ನು ರೂಪಿಸಲಾಯಿತು.

ಏಕೀಕರಣದ ಫಲವಾಗಿ, ವಿವಿಧ ರೀತಿಯ ವೇತನ ಶ್ರೇಣಿಗಳೂ ಹಾಗೂ ಸೇವಾ ನಿಯಮಗಳನ್ನುಳ್ಳ ಸರ್ಕಾರಿ ನೌಕರರು ಒಂದೇ ಆಡಳಿತಕ್ಕೊಳಗಾಗಿದ್ದು, ಅವುಗಳ ಸಮನ್ವಯಕ್ಕಾಗಿ 'ವೇತನ ರಚನಾ ಸಮಿತಿ'ಯನ್ನು 1956ರಲ್ಲಿಯೇ ನೇಮಿಸಲಾಗಿತ್ತು. ಅದರ ಶಿಫಾರಸುಗಳನ್ವಯ ಏಕರೂಪದ ವೇತನ ಶ್ರೇಣಿಗಳನ್ನು ಜಾರಿ ಮಾಡಲಾಯಿತು. ಅನಂತರ, ಬಿ.ಡಿ. ಜತ್ತಿಯವರ ಅಧ್ಯಕ್ಷತೆಯಲ್ಲಿ 'ಭೂ ಸುಧಾರಣಾ ಸಮಿತಿ'ಯೊಂದನ್ನು ರಚಿಸಲಾಯಿತು. 1957ರಲ್ಲಿ ಸಮಿತಿಯು ಸಲ್ಲಿಸಿದ ಶಿಫಾರಸುಗಳನ್ವಯ ಭೂಸುಧಾರಣೆಯನ್ನು ಅನುಷ್ಠಾನಗೊಳಿಸಲಾಯಿತು. ಮುಂದೆ, ದೇವರಾಜ ಅರಸರು ಮುಖ್ಯಮಂತ್ರಿಯಾದ ಕಾಲದಲ್ಲಿ 'ಉಳುವವನಿಗೇ ಭೂಮಿ' ದೊರಕುವಂತೆ ಮಾಡಲು ಭೂಸುಧಾರಣಾ ಕಾಯ್ದೆಯಲ್ಲಿ ಮಹತ್ತರ ಬದಲಾವಣೆಗಳನ್ನು ತಂದು, ಅದನ್ನು ಅನುಷ್ಠಾನಗೊಳಿಸಲಾಯಿತು. ಹಾಗೆಯೇ, 'ಜೀತ ವಿಮೋಚನಾ ಕಾಯ್ದೆ'ಯನ್ನೂ ಜಾರಿಗೊಳಿಸಲಾಯಿತು.

ರಾಜ್ಯದ ಸರ್ವತೋಮುಖ ಅಭಿವೃದ್ಧಿಗೆ ಸಮರ್ಪಕ ಹಾಗೂ ಸಮಗ್ರ ಸಂಪರ್ಕ ಜಾಲವು ಅತ್ಯಗತ್ಯ. ಅದಕ್ಕಾಗಿ ರಾಜಧಾನಿ ಬೆಂಗಳೂರಿನಿಂದ ಉತ್ತರದ ಎಲ್ಲ ಜಿಲ್ಲೆಗಳಿಗೂ ಸರ್ವಋತು ರಸ್ತೆ ಸಂಪರ್ಕವನ್ನು ಕಲ್ಪಿಸುವ ಯೋಜನೆಯನ್ನು ಕೈಗೆತ್ತಿಕೊಳ್ಳಲಾಯಿತು. ಈಗಾಗಲೇ ಅಸ್ತಿತ್ವದಲ್ಲಿದ್ದು, ಉತ್ತರದ ಬೆಳಗಾವಿಯನ್ನು ಬೆಂಗಳೂರಿಗೆ ಸಂಪರ್ಕಿಸುವ ಮುಂಬಯಿ-ಮದ್ರಾಸ್ ರಾಷ್ಟ್ರೀಯ ಹೆದ್ದಾರಿ ಸಂಖ್ಯೆ 4ನ್ನು ಅಭಿವೃದ್ಧಿಪಡಿಸುವುದರ ಜೊತೆಗೆ, ಕರಾವಳಿ ರಾಷ್ಟ್ರೀಯ ಹೆದ್ದಾರಿ, ಬೀದರ್-ಬೆಂಗಳೂರು, ಚಿತ್ರದುರ್ಗ-ಸೊಲ್ಲಾಪುರ ಹೆದ್ದಾರಿಗಳ ನಿರ್ಮಾಣವನ್ನು ಕೈಗೆತ್ತಿಕೊಳ್ಳಲಾಯಿತು. ಕೃಷ್ಣಾ, ತುಂಗಭದ್ರಾ, ಕಾವೇರಿ, ಕಾಳಿ ಮೊದಲಾದ ನದಿಗಳಿಗೆ ಸೇತುವೆಗಳ ನಿರ್ಮಾಣವನ್ನು ಕೈಗೊಂಡು ಮುಗಿಸಲಾಯಿತು. ಕರಾವಳಿ ಜಿಲ್ಲೆಗಳಲ್ಲಿ ಬಂದರುಗಳ ಅಭಿವೃದ್ಧಿಯನ್ನು ಕೈಗೊಂಡು ಸಾಗರೋತ್ತರ ವ್ಯಾಪಾರ ವಹಿವಾಟುಗಳಿಗೆ ಒತ್ತು ನೀಡಲಾಗಿದೆ. ನವಮಂಗಳೂರು ಬಂದರನ್ನು ಸರ್ವಋತು ಬಂದರು ಆಗಿ ಅಭಿವೃದ್ಧಿಪಡಿಸಲಾಗಿದೆ. ಅದರಂತೆ, ಹೊನ್ನಾವರ, ಕುಂದಾಪುರ ಮತ್ತು ಬೇಲಿಕೇರಿ ಬಂದರುಗಳನ್ನು ಅಭಿವೃದ್ಧಿಪಡಿಸಲು ಕ್ರಮ ಕೈಗೊಳ್ಳಲಾಗಿದೆ. ಮಲ್ಪೆಯನ್ನು ಮೀನುಗಾರಿಕೆ ಬಂದರಾಗಿ ಅಭಿವೃದ್ಧಿಪಡಿಸಲಾಗಿದೆ. ಕಾರವಾರದಲ್ಲಿ ಕೇಂದ್ರ ರಕ್ಷಣಾ ಸಚಿವಾಲಯವು 'ಕದಂಬ' ಹೆಸರಿನ ನೌಕಾನೆಲೆಯನ್ನು ಸ್ಥಾಪಿಸಿದೆ. ಅದರಂತೆ, ರಾಜ್ಯದ ರೈಲ್ವೆ ಮಾರ್ಗಗಳ ವಿಸ್ತರಣೆಗೂ ಕೇಂದ್ರದೊಡನೆ ಕೈಜೋಡಿಸಿ, ಹೊಸ ರೈಲು ಮಾರ್ಗಗಳ ರಚನೆ ಹಾಗೂ ಈಗಾಗಲೇ ಅಸ್ತಿತ್ವದಲ್ಲಿರುವ ಮಾರ್ಗಗಳ ಗೇಜ್ ಪರಿವರ್ತನೆ, ವಿಸ್ತರಣೆ ಕಾರ್ಯಕ್ರಮಗಳನ್ನು ಕೈಗೆತ್ತಿಕೊಳ್ಳಲಾಗಿದೆ. ಈಗಾಗಲೇ ಬೆಂಗಳೂರು-ಮಂಗಳೂರು ರೈಲುಮಾರ್ಗ ಸಂಚಾರಕ್ಕೆ ತೆರವಾಗಿದೆ. ಅದರಂತೆ, ಗದಗ-ಸೊಲ್ಲಾಪುರ ಮಾರ್ಗವೂ ಸಂಚಾರಕ್ಕೆ ತೆರವಾಗಿದೆ. ಕೊಟ್ಟೂರು-ಹರಿಹರ, ಬೆಂಗಳೂರು-ಸೇಲಂ, ಕಲ್ಬುರ್ಗಿ-ಬೀದರ್ ಮಧ್ಯೆ





ನಿರ್ಮಿಸಲಾಗುತ್ತಿರುವ ಮಾರ್ಗಗಳು ಇನ್ನೇನು ಮುಗಿಯುತ್ತಾ ಬಂದಿವೆ. ಈ ಮಧ್ಯೆ ತುಮಕೂರು-ದಾವಣಗೆರೆ ಮಾರ್ಗದ ರಚನೆಯನ್ನು ಕೈಗೆತ್ತಿಕೊಳ್ಳಲಾಗಿದೆ. ಈಗಾಗಲೇ ರಾಜ್ಯದ ಎಲ್ಲ ಮೀಟರ್‌ಗೇಜ್ ಮಾರ್ಗಗಳನ್ನು 'ಬ್ರಾಡ್‌ಗೇಜ್'ಗೆ ಪರಿವರ್ತಿಸಲಾಗಿದೆ.

ಕರ್ನಾಟಕದಲ್ಲಿ ಅನೇಕ ಜಲಪಾತಗಳಿವೆ. ಅವುಗಳಲ್ಲಿ ಕೆಲವು ವಿಶ್ವಪ್ರಸಿದ್ಧವಾಗಿವೆ. ಗೇರುಸೊಪ್ಪೆಯ ಜೋಗ್‌ಜಲಪಾತ, ಶಿವನಸಮುದ್ರ ಜಲಪಾತ ಮೊದಲಾದವುಗಳಿಂದ ಜಲವಿದ್ಯುತ್ ಉತ್ಪಾದನೆಯಾಗುತ್ತಿದೆ. ಅದರಂತೆ, ಕಾವೇರಿ ಕಣಿವೆ, ಶರಾವತಿ, ಕಾಳಿ, ವಾರಾಹಿಗಳಲ್ಲಿ ಬೃಹತ್ ಮತ್ತು ಭದ್ರಾ, ಘಟಪ್ರಭಾ, ತುಂಗಭದ್ರಾ ಅಣೆಕಟ್ಟುಗಳಿಂದ ಮಿನಿ ಜಲವಿದ್ಯುತ್ ಯೋಜನೆಗಳನ್ನು ಕೈಗೊಳ್ಳಲಾಗಿದೆ. ಇವುಗಳ ಜೊತೆಗೆ ಶಾಖೋತ್ಪನ್ನ ವಿದ್ಯುತ್ ಉತ್ಪಾದಿಸುವ ಸ್ಥಾವರವನ್ನು ಯಲಹಂಕಾ (ಬೆಂಗಳೂರು)ದಲ್ಲಿ ಸ್ಥಾಪಿಸಲಾಗಿದೆ. ಗದಗ



ಜಿಲ್ಲೆಯ ಕಪ್ಪತಗುಡ್ಡ, ಚಿತ್ರದುರ್ಗ ಮೊದಲಾದೆಡೆಗಳಲ್ಲಿ ಗಾಳಿಯ ಯಂತ್ರಗಳಿಂದ ವಿದ್ಯುತ್ ಉತ್ಪಾದನೆಯನ್ನು ಮಾಡಲಾಗುತ್ತಿದೆ. ಕೈಗಾದಲ್ಲಿ ಅಣುವಿದ್ಯುತ್ ಸ್ಥಾವರವನ್ನು ಸ್ಥಾಪಿಸಲಾಗಿದೆ.

ತುಂಗಭದ್ರಾ, ಕೃಷ್ಣಾ, ಕಾವೇರಿ, ಭದ್ರಾ, ತುಂಗಾ, ಘಟಪ್ರಭಾ, ಮಲಪ್ರಭಾ, ಕಪಿಲಾ ನದಿಗಳಿಗೆ ಅಣೆಕಟ್ಟುಗಳನ್ನು ಕಟ್ಟಿ, ಸುಮಾರು 20 ಬೃಹತ್ ನೀರಾವರಿ ಯೋಜನೆಗಳನ್ನು ಅನುಷ್ಠಾನಗೊಳಿಸಿದ್ದರೆ, 50ಕ್ಕೂ ಹೆಚ್ಚು ಮಧ್ಯಮ ನೀರಾವರಿ ಯೋಜನೆಗಳನ್ನು ಕಾರ್ಯಗತಗೊಳಿಸಲಾಗಿದೆ. ಹಲವಾರು ಸಣ್ಣ ನೀರಾವರಿ ಯೋಜನೆಗಳನ್ನು ರಾಜ್ಯದಾದ್ಯಂತ ಆದ್ಯತೆಯ ಮೇಲೆ ಪೂರೈಸಲಾಗಿದೆ. ಅದರಿಂದಾಗಿ, ಇಂದು ರಾಜ್ಯದಲ್ಲಿ ಒಟ್ಟು 40,96,016 ಹೆಕ್ಟೇರುಗಳಷ್ಟು ಭೂಮಿ ನೀರಾವರಿಗೊಳಪಟ್ಟಿದೆ.

ಹೊಸ ರಾಜ್ಯ ಸ್ಥಾಪನೆಯಾದ ನಂತರ, ಕೈಗಾರಿಕಾ ಕ್ಷೇತ್ರದಲ್ಲಿ ಕೆಲವು ಪ್ರಗತಿಪರ ಬದಲಾವಣೆಗಳಾದವು. ನೂತನ ಕೈಗಾರಿಕೆಗಳ ಸ್ಥಾಪನೆಗೆ ನೆರವಾಗಲು 'ಕರ್ನಾಟಕ ರಾಜ್ಯ ಕೈಗಾರಿಕಾ ಬಂಡವಾಳ ಹಾಗೂ ಅಭಿವೃದ್ಧಿ ನಿಗಮ'ವನ್ನು ಸ್ಥಾಪಿಸಲಾಯಿತು. ಹಾಗೆಯೇ, ಸಣ್ಣ ಕೈಗಾರಿಕೆಗಳಿಗೆ ನೆರವಾಗಲು, 'ಕರ್ನಾಟಕ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ'ವನ್ನು ಕೂಡಾ ಸ್ಥಾಪಿಸಲಾಯಿತು. ಅದು ರಾಜ್ಯದ ಎಲ್ಲ ಜಿಲ್ಲೆಗಳಲ್ಲೂ ಕೈಗಾರಿಕಾ ವಸಾಹತು'ಗಳನ್ನು ಸ್ಥಾಪಿಸುವ ಮೂಲಕ ಸಣ್ಣ ಕೈಗಾರಿಕೆಗಳ ಅಭಿವೃದ್ಧಿಗೆ ನೆರವನ್ನು ನೀಡುತ್ತಿದೆ. ಕರಕುಶಲ ಕೈಗಾರಿಕೆಗಳು ಮತ್ತು ಕೈಮಗ್ಗಗಳ ಅಭಿವೃದ್ಧಿಗಾಗಿ ಅನುಕ್ರಮವಾಗಿ 'ಕರ್ನಾಟಕ ಕರಕುಶಲ ಅಭಿವೃದ್ಧಿ ನಿಗಮ' ಹಾಗೂ 'ಕರ್ನಾಟಕ ರಾಜ್ಯ ಕೈಮಗ್ಗ ಅಭಿವೃದ್ಧಿ ನಿಗಮ'ಗಳನ್ನು ಸ್ಥಾಪಿಸಲಾಗಿದೆ. ಖಾದಿಗೆ ಉತ್ತೇಜನ ನೀಡಲು, 'ಕರ್ನಾಟಕ ಖಾದಿ ಮತ್ತು ಗ್ರಾಮೀಣ ಕೈಗಾರಿಕೆಗಳ ಅಭಿವೃದ್ಧಿ ಮಂಡಳಿ' ಮತ್ತು 'ತೆಂಗಿನ ನಾರು ಕೈಗಾರಿಕಾ ಅಭಿವೃದ್ಧಿ ಮಂಡಳಿ'ಗಳನ್ನು ರಚಿಸಲಾಗಿದೆ.

## ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘದಲ್ಲಿ ಭಾಷೆ, ಕಲೆ, ಸಂಸ್ಕೃತಿಗಳಿಗೆ ಸಂಬಂಧಿಸಿದ ವಿವಿಧ ಚಟುವಟಿಕೆಗಳು



ವಿದ್ಯಾವರ್ಧಕ ಸಂಘದ ಸಾಹಿತ್ಯಿಕ ಕಾರ್ಯಕ್ರಮವೊಂದರಲ್ಲಿ ಕವಿ ಚನ್ನವೀರ ಕಣವಿಯವರಿಗೆ ಹಾ.ಮಾ ನಾಯಕ್ ಹಾಗೂ ಆರ್. ಸಿ. ಹಿರೇಮಠ್‌ರವರಿಂದ ಸನ್ಮಾನ



ಶ್ರೀಮತಿ ಗಂಗೂಭಾಯಿ ಹಾನಗಲ್ ಅವರಿಂದ ಸಂಗೀತ ಕಾರ್ಯಕ್ರಮ

ಕಯ್ಯಾರ ಕಿಞ್ಞಣ್ಣರೈ ಅವರೊಂದಿಗೆ ಹೆಜ್ಜೆ ಹಾಕುತ್ತಿರುವ ಪಾಟೀಲ್ ಪುಟ್ಟಪ್ಪನವರು





ಕರ್ನಾಟಕ ವಿದ್ಯಾವರ್ಧಕ ಸಂಘದ ಕಾರ್ಯಕ್ರಮವೊಂದರಲ್ಲಿ ಕನ್ನಡ ಕಾವಲು ಸಮಿತಿ ಅಧ್ಯಕ್ಷರಾಗಿದ್ದ ಮಾನ್ಯ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ





# ತ್ರಿಕರಣಗಳ ಕುಲುಮೆಯಲ್ಲಿ ನಮ್ಮ ಕನ್ನಡ

ಡಾ. ಬರಗೂರು ರಾಮಚಂದ್ರಪ್ಪ

**ಕ**ನ್ನಡಿಗರು ಪ್ರಧಾನವಾಗಿ ಮೂರು ಕಾಲಘಟ್ಟಗಳನ್ನು ಒಳಗೊಂಡಂತೆ ಸಮಸ್ಯೆ ಮತ್ತು ಸವಾಲುಗಳಿಗೆ ಮುಖಾಮುಖಿಯಾಗಿದ್ದಾರೆ. ಅದರಲ್ಲಿ ಮೊದಲನೆಯದು ಏಕೀಕರಣ, ಸುಮಾರು 20 ಆಡಳಿತ ಘಟಗಳಲ್ಲಿ ಹಂಚಿಕೆಯಾಗಿದ್ದವೆಂದು ತಿಳಿಯಲಾದ ಕನ್ನಡ ಪ್ರಧಾನ ಪ್ರದೇಶಗಳನ್ನು ಒಂದೇ ಭೂಗೋಳ ವ್ಯಾಪ್ತಿಗೆ ಒಳಪಡಿಸುವ ಹಂಬಲವೇ ಏಕೀಕರಣ ಚಳುವಳಿಯ ಕೇಂದ್ರಶಕ್ತಿ. ಈ ಹಂಬಲಕ್ಕೆ ಆಲೂರು ವೆಂಕಟರಾಯರಾದಿಯಾಗಿ ಅನೇಕ ಸಾಧಕರು ಹಾಲೆರೆದು ಬೆಳೆಸಿದ್ದಾರೆ. 1890 ರಲ್ಲಿ ಸ್ಥಾಪಿತವಾದ ಕರ್ನಾಟಕ ವಿದ್ಯಾವರ್ಧಕ ಸಂಘವು 1917 ರ ಜನವರಿ 7 ರಂದು ಕೈಗೊಂಡ ನಿರ್ಣಯವು ಏಕೀಕರಣದ ಉದ್ದೇಶವನ್ನು ಸ್ಪಷ್ಟ ನುಡಿಗಳಲ್ಲಿ ಪ್ರತಿಪಾದಿಸಿದೆ. "ಬ್ರಿಟಿಷ್ ಅಧಿಕಾರಕ್ಕೆ ಒಳಗಾದ ಎಲ್ಲ ಕನ್ನಡ ಊರು, ತಾಲೂಕು ಮತ್ತು ಜಿಲ್ಲೆಗಳನ್ನು ಒಟ್ಟುಗೂಡಿಸಿ ಒಂದು ರಾಜಕೀಯ ವಿಭಾಗವನ್ನಾಗಿ ಮಾಡಿ ಅದನ್ನು ಕರ್ನಾಟಕವೆಂದು ಕರೆಯಬೇಕು".

ಬಹುಪಾಲು ಏಕೀಕರಣವೇನೋ ಆಯಿತು. ದೇವರಾಜ ಅರಸರು ಮುಖ್ಯಮಂತ್ರಿಯಾಗಿದ್ದಾಗ 1973 ರ ನವೆಂಬರ್ 1 ರಂದು ಕರ್ನಾಟಕವೆಂದು ನಾಮಕರಣ ಮಾಡಿದ್ದು ಆಯಿತು.

> ಕನ್ನಡವನ್ನುಳಿದು ಎನಗೆ ಅನ್ಯಜೀವನವಿಲ್ಲ;
> ಕನ್ನಡವೆ ಎನ್ನುಸಿರು, ಪೆತ್ತೆನ್ನತಾಯಿ
> –ಬೆನಗಲ್ ರಾಮರಾಯರು

ಆದರೂ ಕನ್ನಡ ಪ್ರಧಾನ ಕೆಲವು ಪ್ರದೇಶಗಳು ಮಹಾರಾಷ್ಟ್ರ, ಕೇರಳ ಮತ್ತು ಆಂಧ್ರದಲ್ಲಿ ಇನ್ನೂ ಉಳಿದುಕೊಂಡಿವೆ. ಮಹಾಜನ್ ವರದಿಯ ಪ್ರಕಾರವೇ ಕರ್ನಾಟಕಕ್ಕೆ ಸೇರಬೇಕಾದ ಕಾಸರಗೋಡು ಮುಂತಾದ ವಲಯಗಳು ಹೊರಗೆ ಇವೆ. ಆದರೂ ಕರ್ನಾಟಕ ಸರ್ಕಾರವು ಗಡಿಯಾಚೆಗಿನ ಕೆಲವು ಕನ್ನಡ ಪ್ರಧಾನ ಪ್ರದೇಶಗಳಿಗೆ ಕೆಲವು ಸೌಲಭ್ಯಗಳನ್ನು ಕೊಟ್ಟಿವೆ. 19–02–1986 ರಲ್ಲಿ ಹೊರಟ ಆದೇಶದ ಪ್ರಕಾರ ಮಹಾರಾಷ್ಟ್ರದ ಘಾಡಿಂಗ್‌ಲಾಜ್, ಜತ್, ಅಕ್ಕಲಕೋಟೆ, ದಕ್ಷಿಣ ಸೊಲ್ಲಾಪೂರ ತಾಲೂಕುಗಳು ಮತ್ತು ಕೇಳರದ ಕಾಸರಗೋಡು ತಾಲೂಕಿನಲ್ಲಿ ವಾಸವಾಗಿರುವ ಕನ್ನಡಿಗರು 10ನೇ ತರಗತಿವರೆಗೆ ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದ್ದರೆ ಕರ್ನಾಟಕದೊಳಗಿನ ಉದ್ಯೋಗಕ್ಕೆ ಅರ್ಹರಾಗಿದ್ದು, ಕರ್ನಾಟಕದಲ್ಲೇ 15 ವರ್ಷ ವಾಸವಾಗಿರಬೇಕೆಂಬ ಷರತ್ತನ್ನು ರದ್ದುಪಡಿಸಲಾಗಿದೆ.

ಸದ್ಯದ ಏಕೀಕರಣದ ವಿಸ್ತರಣೆಯ ಸ್ಥಗಿತವಾಗಿದ್ದರೂ ಭೂಗೋಳ ಹೆಮ್ಮೆ ಏನೂ ಕಡಿಮೆಯಾಗಿಲ್ಲ. ಭಾವುಕ ಭೂಗೋಳ ಪ್ರಜ್ಞೆಯ ಏಕೀಕರಣಕ್ಕೆ ಒಕ್ಕೂಟ ವ್ಯವಸ್ಥೆಯ ಮುನ್ನೋಟವು ಇತ್ತು. ಅಂದು ಕನ್ನಡಿಗರೆಲ್ಲ ಒಂದು ನಿರ್ದಿಷ್ಟ ಭೂಗೋಳ ವ್ಯಾಪ್ತಿಗೆ ಬರಬೇಕೆಂಬ ಆಕಾಂಕ್ಷೆಯಲ್ಲಿ ಅದು ಅಂತರ್ಗತವಾಗಿತ್ತು. ಈಗ ಭೂಗೋಳ ಪ್ರಜ್ಞೆಯು ಕನ್ನಡಿಗರ ಸಾಮ್ರಾಜ್ಯ ಕನವರಿಕೆಯಾಗಿ ಕಾಣಿಸುತ್ತಿದೆ. ಹಿಂದೆ ಕನ್ನಡಿಗರ ಸಾಮ್ರಾಜ್ಯವು ಎಷ್ಟು ದೊಡ್ಡದಾಗಿತ್ತು ಎಂದು ಹೇಳಿಕೊಳ್ಳುವ ಹೆಮ್ಮೆ ಹೆಮ್ಮರದಂತೆ ಕಾಣಿಸತೊಡಗಿದೆ. ನೃಪತುಂಗನು ಕಾವೇರಿಯಿಂದ ಗೋದಾವರಿವರಮಿರ್ದ ನಾಡನ್ನು ಆಳಿದ್ದು ನಿಜವೇ ಹೌದು. ಆದರೆ ಎಲ್ಲ ರಾಜರ ಸಾಮ್ರಾಜ್ಯಗಳೂ ಕನ್ನಡ ಜನಪದರನ್ನು ಒಳಗೊಂಡಿದ್ದವೇ ? ಅವು ನಿಜಕ್ಕೂ ಕನ್ನಡಿಗರ ಪ್ರದೇಶಗಳೇ ಅಥವಾ ಕನ್ನಡ ಬಲ್ಲ ರಾಜನ ಪ್ರದೇಶಗಳೇ? ಈ ಪ್ರಶ್ನೆಯನ್ನು ನಾವು ಕೇಳಿಕೊಳ್ಳಬೇಕು. ಇಲ್ಲದಿದ್ದರೆ ಕನ್ನಡದ ಭೂಗೋಳ ಪ್ರಜ್ಞೆಯ ಹೆಮ್ಮೆ ಕೇವಲ ಕನವರಿಕೆಯಾಗುತ್ತದೆ.

ಏಕೀಕರಣದ ಭೂಗೋಳ ಪ್ರಜ್ಞೆಯಾಚೆಗೆ ಬಂದಾಗ ಕನ್ನಡಿಗರಿಗೆ ಎದುರಾದದ್ದು ಕೈಗಾರಿಕೀಕರಣ, ಇದು ಉದ್ಯೋಗಾವಕಾಶಗಳ ವಲಯ. ಕನ್ನಡಿಗರಿಗೆ ಉದ್ಯೋಗ ನೀಡಿಕೆಯಲ್ಲಿ ಆದ್ಯತೆಯಿರಬೇಕೆಂಬ ಹೋರಾಟಗಳಿಗೆ ಕಾರಣವಾದ ಸನ್ನಿವೇಶ ಸೃಷ್ಟಿಯಾದದ್ದು ಕೈಗಾರಿಕೀಕರಣದ ಸಂದರ್ಭದಲ್ಲಿ ಎಂಬ ಅಂಶ ಮುಖ್ಯವಾದುದು. ನಮ್ಮ ದೇಶದಲ್ಲಿದ್ದ ಕುಲ ಮೂಲ ಉತ್ಪಾದನಾ ವ್ಯವಸ್ಥೆಯನ್ನು ಸಡಿಲಗೊಳಿಸಿದ್ದು ಮತ್ತು ದೊಡ್ಡ ಪ್ರಮಾಣದ ಸಾಮೂಹಿಕ ಉತ್ಪಾದನಾ ಪದ್ಧತಿಗೆ ಕಾರಣವಾದದ್ದು ಈ ಕೈಗಾರಿಕೀಕರಣ. ಕರ್ನಾಟಕವು ಕೈಗಾರಿಕೀಕರಣದ ವಿಸ್ತರಣೆಯಲ್ಲಿ ಎದುರಿಸಿದ್ದು ವಲಸಿಗರ ಸಮಸ್ಯೆ. ಅನೇಕ ಕಾರ್ಖಾನೆಗಳಲ್ಲಿ ಹೊರರಾಜ್ಯದವರು ತುಂಬಿಕೊಳ್ಳತೊಡಗಿದಾಗ ಸ್ಥಳೀಯರಿಗೆ ಉದ್ಯೋಗದಲ್ಲಿ ಆದ್ಯತೆ ನೀಡಬೇಕೆಂಬ ಪ್ರತಿಪಾದನೆ ಮತ್ತು ಪ್ರತಿಭಟನೆಗಳು ಹೆಚ್ಚಾದ ಪರಿಣಾಮವಾಗಿ ಅಂದಿನ ರಾಮಕೃಷ್ಣ ಹೆಗಡೆಯವರ ನೇತೃತ್ವದ ಸರ್ಕಾರವು 4–8–1983ರಲ್ಲಿ ಮಾರ್ಗರೇಟ್ ಆಳ್ವ ಅವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚಿಸಿತು. ಮಾರ್ಗರೇಟ್ ಆಳ್ವ ಅವರು ಒಪ್ಪದೇ ಇದ್ದಾಗ ಸರೋಜಿನಿ ಮಹಿಷಿಯವರ ಅಧ್ಯಕ್ಷತೆಯಲ್ಲಿ 21–01–1984 ರ ಆದೇಶದಂತೆ ಸಮಿತಿಯನ್ನು ಪುನರ್ ರಚಿಸಿತು. ಈ ಸಮಿತಿಯಲ್ಲಿ ಗೋಪಾಲಕೃಷ್ಣ ಅಡಿಗ, ಜಿ.ಕೆ. ಸತ್ಯ, ಜಿ. ನಾರಾಯಣ ಕುಮಾರ್, ಕೆ. ಪ್ರಭಾಕರ ರೆಡ್ಡಿ,



ಡಾ॥ ಸರೋಜಿನಿ ಮಹಿಷಿ

ಸಿದ್ಧಯ್ಯ ಪುರಾಣಿಕ ಮತ್ತು ಬಿ.ಎಸ್. ಹನುಮಾನ ಇದ್ದರು. ಸರೋಜಿನಿ ಮಹಿಷಿ ನೇತೃತ್ವದ ಸಮಿತಿಗೆ ವಾಣಿಜ್ಯ ಬ್ಯಾಂಕ್‌ಗಳನ್ನು ಒಳಗೊಂಡಂತೆ ಕೇಂದ್ರೋದ್ಯಮದಲ್ಲಿ ಕರ್ನಾಟಕದ ಜನರ ಉದ್ಯೋಗ ಸ್ಥಿತಿಯ ಅಧ್ಯಯನವನ್ನು ವಹಿಸಲಾಗಿತ್ತು. ಸರೋಜಿನಿ ಮಹಿಷಿ ಸಮಿತಿಯು ಸಲ್ಲಿಸಿದ ವರದಿಯ ಪರಿಶೀಲನೆಗೆ ಸಂಸದ ಕೆ. ವೆಂಕಟೇಶ ಅವರ ಅಧ್ಯಕ್ಷತೆಯಲ್ಲಿ ಡಿ.ಬಿ. ಚಂದ್ರೇಗೌಡ, ಜಿ. ನಾರಾಯಣ ಕುಮಾರ್, ಕೆ. ಪ್ರಭಾಕರ ರೆಡ್ಡಿ ಮತ್ತು ಪಿ.ವಿ. ನಾರಾಯಣ ಅವರಿದ್ದ ಸಮಿತಿಯನ್ನು ನೇಮಿಸಲಾಯಿತು. ಈ ಎಲ್ಲಾ ಪ್ರಕ್ರಿಯೆಯ ಮೂಲಕ ಸರೋಜಿನಿ ಮಹಿಷಿ ವರದಿ 58 ಶಿಫಾರಸ್ಸುಗಳಲ್ಲಿ ಕೇಂದ್ರ ಸರ್ಕಾರಕ್ಕೆ ನೇರವಾಗಿ ಸಂಬಂಧಿಸಿದ್ದ 12 ಶಿಫಾರಸ್ಸುಗಳನ್ನು ಹೊರತುಪಡಿಸಿ ಉಳಿದ ಶಿಫಾರಸ್ಸುಗಳನ್ನು ಒಪ್ಪಲಾಯಿತು. ಸರೋಜಿನಿ ಮಹಿಷಿ ವರದಿಯ ಜಾರಿಗೆ ಕ್ರಮ ಕೈಗೊಳ್ಳುವ ಅಧಿಕಾರವನ್ನು ಕನ್ನಡ ಅಭಿವೃದ್ಧಿ ಪ್ರಾಧಿಕಾರಕ್ಕೆ ನೀಡಿತು.

ಸರೋಜಿನಿ ಮಹಿಷಿ ವರದಿಯನ್ನು ಕೈಗಾರೀಕರಣದ ಸಂದರ್ಭದಲ್ಲಿ ಒಪ್ಪಿ ಜಾರಿಗೊಳಿಸಲಾಯಿತಾದರೂ ಜಾಗತೀಕರಣದ ಈ ಸಂದರ್ಭದಲ್ಲಿ ಅದರ ಜಾರಿಗೆ ಮುಕ್ತ ಆರ್ಥಿಕ ನೀತಿಯೇ ಅಡ್ಡಿಯಾಗಿದೆ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು. ಕೈಗಾರಿಕೀಕರಣದ ಸಂದರ್ಭದಲ್ಲಿ ಇದ್ದ ಮಿಶ್ರ ಆರ್ಥಿಕ ಪದ್ಧತಿಯು ಖಾಸಗಿ ಒಡೆಯರನ್ನು ನಿಯಂತ್ರಿಸುವ ಅಧಿಕಾರವನ್ನು ಸರ್ಕಾರಕ್ಕೆ ಕೊಟ್ಟಿತ್ತು. ಸರೋಜಿನಿ ಮಹಿಷಿ ವರದಿಯು ರಾಜ್ಯ ವ್ಯಾಪ್ತಿಯದ್ದಾಗಿದ್ದು, ವರದಿಯ ಆಶಯಗಳಿಗನುಗುಣವಾಗಿ ಕೇಂದ್ರಸರ್ಕಾರವು ರಾಷ್ಟ್ರೀಯ ಉದ್ಯೋಗ ನೀತಿಯೊಂದನ್ನು ರೂಪಿಸಲು ಸಾಧ್ಯವಿದೆ. ಈ ಸಾಧ್ಯತೆಯನ್ನು ಮನವರಿಕೆ ಮಾಡಿಕೊಡಲು ರಾಜ್ಯಸರ್ಕಾರಗಳು ಸಂಸದ ಸದಸ್ಯರು ಸನ್ನದ್ಧರಾಗಬೇಕು. ರಚನಾತ್ಮಕ ಹಾಗೂ ಪ್ರಜಾಸತ್ತಾತ್ಮಕ ಹೋರಾಟಗಳು ಇವರೆಲ್ಲ ಸನ್ನದ್ಧರಾಗುವ ವಿವೇಕವನ್ನು ವಿಸ್ತರಿಸಬೇಕು. ಏಕೀಕರಣವು ಕೈಗಾರಿಕೀರಣವನ್ನು ಹಾದು ಬಂದು ಜಾಗತೀಕರಣದಲ್ಲಿ ಜಾಗೃತವಾಗಬೇಕು.





## ಕನ್ನಡಕ್ಕಾಗಿ ಕೈ ಎತ್ತಿ ಕಲ್ಪವೃಕ್ಷರಾದ

# ಆಲೂರು ವೆಂಕಟರಾಯರು

ಹರ್ಷವರ್ಧನ ವಿ. ಶೀಲವಂತ

"ಕರ್ನಾಟಕತ್ವ, ಕರ್ನಾಟಕ ಏಕೀಕರಣ, ಕರ್ನಾಟಕದ ಸರ್ವಾಂಗೀಣ ಅಭಿವೃದ್ಧಿಯ ಕನಸನ್ನು ಸದಾ ಕಾಣುತ್ತಿದ್ದ ಆಲೂರ ವೆಂಕಟರಾವ್ ಅಪ್ಪಟ ರಾಷ್ಟ್ರೀಯವಾದಿ. ಅವರಲ್ಲಿ ಪ್ರಾಂತೀಯ ಭಾವನೆಯಾಗಲಿ ಅಥವಾ ಕನ್ನಡದ ಭಾಷಾಂಧತೆಯಾಗಲಿ ಇರಲಿಲ್ಲ. ದೇಶ ವಿಮೋಚನೆಗಾಗಿ ಹೋರಾಟ ನಡೆಯುತ್ತಿದ್ದ ಕಾಲದಲ್ಲೇ ಆಲೂರರು ಅಖಂಡ ಕರ್ನಾಟಕ ನಿರ್ಮಾಣಕ್ಕಾಗಿ ಸಂಕಲ್ಪ ಮಾಡಿದ್ದು, ಇದಕ್ಕೆ ಪ್ರಮುಖ ಕಾರಣವಾಗಿತ್ತು. "ಭವ್ಯ ಭಾರತ ನಿರ್ಮಾಣದಿಂದ ಮಾತ್ರವೇ ಭವ್ಯ ಭಾರತ ಕಟ್ಟಲು ಸಾಧ್ಯ ಎಂಬುದು ಅವರ ಬಲವಾದ ನಂಬಿಕೆಯಾಗಿತ್ತು."

### ಕನ್ನಡದ ಕಾವಲುಗಾರ

ಮರಾಠಿಗರೇ, ಕನ್ನಡದ ನೆಲದಲ್ಲಿ ನಿಮ್ಮ ದಬ್ಬಾಳಿಕೆ ಬೇಡ; ಕೂಡಿ ಬಾಳುವ ಮನಸ್ಸಿದ್ದರೆ ಬನ್ನಿ.. ಒಟ್ಟಾಗಿ ಬಾಳೋಣ ಎಂದು ಅನೇಕ ಸಂದರ್ಭಗಳಲ್ಲಿ ಒತ್ತಿ ಹೇಳಿದ ಅಭಿಮಾನಿ ಕನ್ನಡಿಗ ಆಲೂರರು. ಈ ದೃಷ್ಟಿ, ಆ ಮೇಧಾವಿತನ ಇಂದು ನಮ್ಮನ್ನಾಳುವ ಎಷ್ಟು ಜನಪ್ರತಿನಿಧಿಗಳಿಗಿದೆ? ಕನ್ನಡ ಸೇವಕರಿಗಿದೆ?

"ಕನ್ನಡ ನಾಡಿನ ಸರ್ವತೋಮುಖ ಅಭ್ಯುದಯಕ್ಕೆ ಕನ್ನಡಿಗರೆಲ್ಲರೂ ಒಂದಾಗಿ ದುಡಿಯೋಣ. ಕನ್ನಡಮ್ಮನ ಪವಿತ್ರ ಸೇವೆಯಿಂದ ಪುನೀತರಾಗೋಣ"

ಡಾ. ಹಣಮಂತರಾವ ಸವಣೂರು, ಅನಂತರಾವ್ ಚಿಕ್ಕೋಡಿ, ಕನ್ನಡದ ಪುಸ್ತಕಗಳನ್ನು ತನ್ನ ಮಕ್ಕಳೊಂದಿಗೆ, ಹೆಗಲ ಮೇಲೆ ಹೊತ್ತು, ಊರೂರು ಕಾಲ್ನಡಿಗೆಯಲ್ಲೇ ಕ್ರಮಿಸಿ, ಮಾರಿದ ಧಾರವಾಡ ಮನೋಹರ ಗ್ರಂಥ ಮಾಲೆಯ ಜಡಭರತ ಜಿ.ಬಿ. ಜೋಶಿ, ಸಮಾಜ ಪುಸ್ತಕಾಲಯದ ಬಾಲಚಂದ್ರ ಘಾಣೇಕರ, ಹುಬ್ಬಳ್ಳಿಯ ಸಾಹಿತ್ಯ ಭಂಡಾರದ ಕೀರ್ತಿಶೇಷ ಮಂಗಳೂರು ಗೋವಿಂದರಾಯರು, ಮೊದಲಾದವರು ಸೇರಿ, ಕನ್ನಡ-ಕರ್ನಾಟಕ ಕಟ್ಟುವ ಕೆಲಸ ಹಗಲು-ರಾತ್ರಿಗಳ ಪರಿವೆಯೇ ಇಲ್ಲದೇ ಮಾಡಿದರು.

ಧಾರವಾಡ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ದಟ್ಟವಾಗಿದ್ದ ಕನ್ನಡದ್ವೇಷಿ ಮರಾಠಿಗರ ಪ್ರಭಾವ ಕಿತ್ತೊಗೆಯಲು ಪಣ ತೊಟ್ಟರು. ಕನ್ನಡಿಗರಲ್ಲಿ ವ್ಯಾಪಕವಾಗಿ ಮನೆ ಮಾಡಿದ್ದ, ಆತ್ಮ ವಂಚನೆಯ ಭಾವವನ್ನು ತೊಡೆದು ಹಾಕಲು ಸತತವಾಗಿ ದುಡಿದರು.

### ಏಕೀಕರಣ ಸಮಿತಿ ರಚನೆ

ಕರ್ನಾಟಕವನ್ನು ರಾಜಕೀಯವಾಗಿ ಒಗ್ಗೂಡಿಸಲು ಏಕೀಕರಣ ಸಮಿತಿ ರಚಿಸಿದ ಆಲೂರರು, ಕರ್ನಾಟಕದ ಗತ ವೈಭವವನ್ನು ಅಭಿಮಾನ ಪೂರ್ವಕವಾಗಿ, ಆವೇಶಪೂರ್ಣವಾಗಿ ಬಣ್ಣಿಸುತ್ತಿದ್ದರು. ಅವರು ತಮ್ಮ ಸಂಪತ್ತನ್ನೆಲ್ಲ ಕನ್ನಡ-ಕರ್ನಾಟಕದ ಹಿತಕ್ಕೆ ಬಳಸಿದರು. ತಮ್ಮ ಪಾಲಿಗೆ ಬಂದ ಪೂರ್ವಜರ ಆಸ್ತಿಯನ್ನೆಲ್ಲ ಕನ್ನಡ ಕಟ್ಟುವ ಕೈಂಕರ್ಯಕ್ಕೆ ವಿನಿಯೋಗಿಸಿದರು. ನಾಡಿನ ಯಾವುದೇ ಮೂಲೆಗೆ ಕನ್ನಡ ಕಟ್ಟುವ ಕೆಲಸಕ್ಕೆ ಹೋದರೂ ಖರ್ಚು ತಮ್ಮದೇ. ಅದು ಕನ್ನಡಕ್ಕಾಗಿ ಎಂದು ಅವರು ಭಾವಿಸುತ್ತಿದ್ದರು.

ಕನ್ನಡ ಸಾಹಿತ್ಯ ಪರಿಷತ್ ಸ್ಥಾಪನೆಯಲ್ಲೂ ಆಲೂರರದ್ದು ಬಹುದೊಡ್ಡ ಪಾತ್ರ ನಿರ್ವಹಿಸಿದರು. ಕನ್ನಡ ಸಾಹಿತ್ಯ ಪರಿಷತ್ ರಚನೆಯಾದ ನಂತರ, ಕನ್ನಡ ಚಳವಳಿಗೆ



"ನಾನೇನೂ ವಿದ್ಯಾರಣ್ಯನಲ್ಲ. ಅಲೌಕಿಕ ಪುರುಷನಲ್ಲ. ವಿಲಕ್ಷಣ ಮುತ್ಸದ್ದಿ ಅಲ್ಲ. ಆಗರ್ಭ ಶ್ರೀಮಂತನಲ್ಲ. ಸಾದಾ, ಮಧ್ಯಮ ವರ್ಗದ ಮಧ್ಯಮ ಬುದ್ಧಿಯ ಮನುಷ್ಯ. ಜನರು ನನ್ನನ್ನು ಕಾರಣ ಪುರುಷನೆಂದು ತಿಳಿದಿರುವುದು ಪೂರ್ಣ ಸತ್ಯವಲ್ಲ. ನಿಜವಾಗಿ ಹೇಳಬೇಕೆಂದರೆ ನಾನು ಸಂಕಲ್ಪ ಮಾಡಿದ್ದು ಗುಡ್ಡದಷ್ಟು, ಸಾಧಿಸಿದ್ದು ಸಣ್ಣ ಹರಳಿನಷ್ಟು. ಒಂದು ರಾಷ್ಟ್ರವನ್ನು ಕಟ್ಟುವುದು ಸಾಮಾನ್ಯ ಕೆಲಸವಲ್ಲ. ಅದರಲ್ಲಿಯೂ 400 ವರ್ಷಗಳಿಂದಲೂ ಅವಿಚ್ಛಿನ್ನವಾಗಿ ಹೋಗಿರುವ ಕರ್ನಾಟಕವನ್ನು ಅಖಂಡವಾಗಿ ಕಟ್ಟುವುದು ಅತ್ಯಂತ ಬಿಕ್ಕಟ್ಟಿನ ಕೆಲಸ. ಅಂಥ ರಾಜ್ಯವನ್ನು ಕಟ್ಟಲು ನೂರಾರು ಮುಖಂಡರು ದುಡಿಯಲೇ ಬೇಕು."

ಕರ್ನಾಟಕದ ಏಕೀಕರಣಕ್ಕಾಗಿ ಹೋರಾಡಿದ ಕನ್ನಡದ ಕುಲಪುರೋಹಿತ ಆಲೂರ ವೆಂಕಟರಾಯರ ಹೃದಯಾಂತರಾಳದ ಮಾತುಗಳಿವು!

ಕನ್ನಡ ನಾಡಿನ ಬಾವುಟ ಹಾರಿಸಿ
ಕನ್ನಡ ಮಾತೆಯ ಬಿರುದನು ಬಾರಿಸಿ

– ಕಯ್ಯಾರ ಕಿಞ್ಞಣ್ಣರೈ



ದೊಡ್ಡ ಶಕ್ತಿ ಬಂತು ಎಂದರೂ ಅಡ್ಡಿ ಇಲ್ಲ. ನಿಜವಾಗಿ ಕರ್ನಾಟಕ ಏಕೀಕರಣದ ಮಹತ್ವದ ಕೆಲಸ ಆರಂಭವಾಗಿದ್ದು ಇಲ್ಲಿಂದಲೇ.

ಕರ್ನಾಟಕದ ಸಂಸ್ಕೃತಿಯಲ್ಲಿ ವೈವಿಧ್ಯತೆಯನ್ನು ಕಾಪಿಟ್ಟುಕೊಂಡೇ ಏಕರೂಪತೆ ತರಲು ಆಲೂರರು ಪ್ರಯತ್ನಿಸಿದರು. ಕನ್ನಡ ಹಾಗೂ ಕರ್ನಾಟಕ ಒಗ್ಗೂಡಿಸುವ ಆಲೂರರ ಸಂಕಲ್ಪ ಕಂಡು, ಕಾದಂಬರಿ ಸಾರ್ವಭೌಮ ಅ.ನ. ಕೃಷ್ಣರಾಯರು ಆಶ್ಚರ್ಯಪಟ್ಟಿದ್ದರು. ಕನ್ನಡದ ಹೋರಾಟಕ್ಕೆ ನೀವೇ ಗುರುಗಳು ಎಂದು ನಮಸ್ಕರಿಸಿದ್ದರು. ಕನ್ನಡ–ಕರ್ನಾಟಕದ ಆಲದ ಮರವೆಂದು ಆಲೂರರನ್ನು ಕೊಂಡಾಡಿದ್ದರು.

**ಕರ್ನಾಟಕತ್ವವೇ ಅವರ ಉಸಿರು**

ಸದಾ ಕರ್ನಾಟಕತ್ವ; ಕರ್ನಾಟಕ ಏಕೀಕರಣ; ಕರ್ನಾಟಕದ ಸರ್ವಾಂಗೀಣ ಅಭಿವೃದ್ಧಿಯ ಕನಸು ಕಾಣುತ್ತಿದ್ದ ಆಲೂರ ವೆಂಕಟರಾಯರು ಅಪ್ಪಟ ರಾಷ್ಟ್ರೀಯವಾದಿ. ಮೈ–ಮನಗಳ ತುಂಬ ದೇಶ ಭಕ್ತಿ ತುಂಬಿ ತುಳುಕುತ್ತಿದ್ದ ಮೈವೆತ್ತ ರೂಪದಂತಿದ್ದರು ಅವರು. ಅವರಲ್ಲಿ ಪ್ರಾಂತೀಯ ಭಾವನೆಯಾಗಲಿ ಅಥವಾ ಕನ್ನಡದ ಭಾಷಾಂಧತೆಯಾಗಲಿ ಇರಲಿಲ್ಲ. ದೇಶ ವಿಮೋಚನೆಗಾಗಿ ಹೋರಾಟ ನಡೆಯುತ್ತಿದ್ದ ಕಾಲದಲ್ಲೇ ಅವರು ಅಖಂಡ ಕರ್ನಾಟಕದ ನಿರ್ಮಾಣಕ್ಕಾಗಿ ಪಣ ತೊಟ್ಟಿದ್ದು ಇದಕ್ಕೆ ಪ್ರಮುಖ ಕಾರಣ. ಭವ್ಯ ಕರ್ನಾಟಕ ನಿರ್ಮಾಣದಿಂದ ಮಾತ್ರವೇ ಭವ್ಯ ಭಾರತ ಕಟ್ಟಲು ಸಾಧ್ಯ ಎಂಬುದು ಅವರ ಬಲವಾದ ನಂಬಿಕೆಯಾಗಿತ್ತು.

ರಾಷ್ಟ್ರೀಯತ್ವಕ್ಕೆ ವಿರುದ್ಧವಾದದ್ದು ಕರ್ನಾಟಕತ್ವವಲ್ಲ; ಕರ್ನಾಟಕಕ್ಕೆ ವಿರುದ್ಧವಾದದ್ದು ನಿಜವಾದ ರಾಷ್ಟ್ರೀಯತ್ವವಲ್ಲ. ಕರ್ನಾಟಕದ ಬಗೆಗಿನ ಸಾತ್ವಿಕಾಭಿಮಾನವೇ ಕರ್ನಾಟಕತ್ವ ಎಂದೂ ಆಲೂರ ವೆಂಕಟರಾವ್ ಪ್ರತಿಪಾದಿಸಿದರು.

**ಕನಸು, ನನಸಾಯಿತು; ಆಶಯ!**

ನವೆಂಬರ್ 1, 1956ರಲ್ಲಿ ಆಲೂರರ ಕನಸು ನನಸಾಯಿತು. ಹತ್ತಾರು ಪ್ರದೇಶಗಳಲ್ಲಿ ಹರಿದು ಹಂಚಿ ಹೋಗಿದ್ದ, ಕರ್ನಾಟಕವು ಸಂಪೂರ್ಣವಾಗಿ ಅಲ್ಲದಿದ್ದರೂ ಬಹುತೇಕವಾಗಿ ಒಗ್ಗೂಡಿತು. ಏಕೀಕೃತ ಕರ್ನಾಟಕಕ್ಕೆ ಮೈಸೂರು ರಾಜ್ಯ ಎಂದು ನಾಮಕರಣವಾಯಿತು. ಈ ಸಂದರ್ಭದಲ್ಲಿ ನೀಡಿದ ಸಂದೇಶದಲ್ಲಿ "ಈಗ ಮೈಸೂರು ರಾಜ್ಯ ಎಂದು ತಪ್ಪು ಹೆಸರಿಡಲ್ಪಟ್ಟ ಕರ್ನಾಟಕ ರಾಜ್ಯವು ಆಯುಷ್ಯವಂತ ಆಗಲಿ; ಆರೋಗ್ಯವಂತಾಗಲಿ ಮತ್ತು ಭಾಗ್ಯವಂತವಾಗಲಿ ಎಂದು ಮನದುಂಬಿ ಹರಸಿದ್ದರು.

"ಕನ್ನಡ ನಾಡಿನ ಸರ್ವತೋಮುಖ ಅಭ್ಯುದಯಕ್ಕೆ ಕನ್ನಡಿಗರೆಲ್ಲರೂ ಒಂದಾಗಿ ದುಡಿಯೋಣ. ಕನ್ನಡಮ್ಮನ ಪವಿತ್ರ ಸೇವೆಯಿಂದ ಪುನೀತರಾಗೋಣ" ಎಂದೂ, ಆಲೂರರು ಪರಿಪರಿಯಾಗಿ ಮನವಿ ಮಾಡಿದ್ದರು.

ಆಲೂರ ವೆಂಕಟರಾವ್ ಬೆಳೆದು ಬಂದ ಪರಿಸರ, ಪಡೆದ ಶಿಕ್ಷಣವನ್ನು ಸ್ವಾರ್ಥಕ್ಕಾಗಿ ಬಳಸಿಕೊಂಡಿದ್ದರೆ ಏನು ಬೇಕಾದರೂ ಆಗಬಹುದಿತ್ತು. ಆದರೆ, ಕನ್ನಡಿಗ–ಕರ್ನಾಟಕಕ್ಕಾಗಿ ಎಲ್ಲವನ್ನೂ ಸಮರ್ಪಿಸಿದರು. ವ್ಯಕ್ತಿಗಿಂತ ರಾಜ್ಯ, ರಾಷ್ಟ್ರ ದೊಡ್ಡದು ಎಂದು ಸಾರಿ ಹೇಳಿದರು.

ಭಾರತ ರತ್ನ ಡಾ. ಎ.ಪಿ.ಜೆ. ಅಬ್ದುಲ್ ಕಲಾಂ, ರಾಷ್ಟ್ರಪತಿಯಾಗಿ ಆಯ್ಕೆಯಾದಾಗ, 'ವ್ಯಕ್ತಿಗಿಂತ ದೇಶ ದೊಡ್ಡದು' ಎಂದು ನೀಡಿದ ಸಂದೇಶವನ್ನು ಆಲೂರ ವೆಂಕಟರಾಯರು ಬಹಳ ಹಿಂದೆ ತಮ್ಮ ಕೃತಿಯಲ್ಲಿ ನಮಗೆ ತೋರಿಸಿಕೊಟ್ಟಿದ್ದಾರೆ.

**ಇಂಥ ಆಲೂರರು, ಕನ್ನಡಕ್ಕೆ, ಕರ್ನಾಟಕಕ್ಕೆ ಒಬ್ಬರೇ!**

ಈ ಕನ್ನಡದ ಕುಲಪುರೋಹಿತನ್ನು ಕನ್ನಡಿಗರು ನೆನೆಯುವರೇ? ಅವರ ಹೆಸರಿನಲ್ಲಿ ಧಾರವಾಡದಲ್ಲಿ ಸ್ಥಾಪಿತವಾಗಿರುವ ಕರ್ನಾಟಕ ಕುಲಪುರೋಹಿತ ಆಲೂರ ವೆಂಕಟರಾವ್ ರಾಷ್ಟ್ರೀಯ ಸ್ಮಾರಕ ಟ್ರಸ್ಟ್, ಖ್ಯಾತ ಇತಿಹಾಸ ತಜ್ಞ ಪ್ರೊ. ಶ್ರೀನಿವಾಸ ರಿತ್ತಿ ಅವರ ಅಧ್ಯಕ್ಷತೆ, ಆಲೂರರ ಮೊಮ್ಮಗ, ಟ್ರಸ್ಟಿ ಪ್ರೊ. ದೀಪಕ್ ಆಲೂರ ಹಾಗೂ ಸಂಚಾಲಕ ಟ್ರಸ್ಟಿ ವೆಂಕಟೇಶ ದೇಸಾಯಿ ಅವರ ನೇತೃತ್ವದಲ್ಲಿ ಅನೇಕ ಅರ್ಥಪೂರ್ಣ ಕಾರ್ಯಕ್ರಮಗಳನ್ನು ಆಯೋಜಿಸುತ್ತ ಬರಲಾಗಿದೆ.

ನಮ್ಮ ಮನೆಯ, ನಮ್ಮ ಹಿರಿಯ ಅಜ್ಜನವರ ಜಯಂತಿ ಮತ್ತು ಪುಣ್ಯ ತಿಥಿಯನ್ನು ಸರ್ಕಾರದ ವತಿಯಿಂದ ಆಚರಿಸಲಿ ಎಂಬುದು ಬೇಡಿಕೆಯಲ್ಲ. ಸುವರ್ಣ ಕರ್ನಾಟಕದ ಕಾಲನ ಹೊಸ್ತಿಲು ಅಖಂಡ ಕರ್ನಾಟಕ ಯಶಸ್ವಿಯಾಗಿ ದಾಟಿದೆ. ಸಮಾಜದ ಸಹಭಾಗಿತ್ವದಲ್ಲಿ, ಸಮುದಾಯದ ಅಭಿಮಾನದಿಂದ ಅಜ್ಜನವರ ಸಂಸ್ಮರಣೆ ಅರ್ಥಪೂರ್ಣವಾಗಿ ನಡೆಯಬೇಕಿದೆ. ಮುಂದಿನ ಪೀಳಿಗೆಗೆ, ಕರ್ನಾಟಕದ ಏಕೀಕರಣಕ್ಕೆ ಆಲೂರ ಬದ್ಧತೆ ಅಧ್ಯಯನ ಯೋಗ್ಯ ವಿಷಯವಾಗಿ, ಹೊಸ ಹೊಳಹಿನಲ್ಲಿ ಅಜ್ಜನ ವ್ಯಕ್ತಿತ್ವ ಮತ್ತು ಕತೃತ್ವ ಅನಾವರಣಗೊಳ್ಳಲಿ ಎಂಬುದೇ ಈ ಕ್ಷಣದ ಆಶಯ.





## 'ಕನ್ನಡದ ಹುಲಿ' ಡೆಪ್ಯೂಟಿ ಚೆನ್ನಬಸಪ್ಪನವರು

(ಜನನ : 1–11–1833 ಮರಣ : 5–1–1881)



ಕರ್ನಾಟಕ ಏಕೀಕರಣವಾಗುವ ಮೊದಲು ವಿಜಾಪುರ, ಬೆಳಗಾವಿ, ಧಾರವಾಡ ಹಾಗೂ ಕಾರವಾರ ಜಿಲ್ಲೆಗಳನ್ನೊಳಗೊಂಡ ಪ್ರದೇಶವನ್ನು ಮುಂಬಯಿ ಕರ್ನಾಟಕ ಎಂದು ಕರೆಯಲಾಗುತ್ತಿತ್ತು. ಈ ಪ್ರದೇಶವು 1818ರವರೆಗೆ ಪೇಶ್ವೆಯವರ ಅಧೀನದಲ್ಲಿತ್ತು. ಪಟವರ್ಧನ, ಘೋರ್ಪಡೆ, ಭಾವೆ ಮನೆತನಗಳು ಉತ್ತರ ಕರ್ನಾಟಕವನ್ನು ಹಂಚಿಕೊಂಡು ಆಳುತ್ತಿದ್ದವು. ಈ ಸಂಸ್ಥಾನಿಕರ ಆಡಳಿತ ಭಾಷೆ ಮರಾಠಿ ಆಗಿದ್ದ ಪರಿಣಾಮ ಕನ್ನಡವು ನೇಪಥ್ಯಕ್ಕೆ ಸರಿದಿತ್ತು. ಕನ್ನಡವು ತನ್ನ ನೆಲದಲ್ಲಿಯೇ ಅನಾಥವಾಯಿತು. ಉತ್ತರ ಕರ್ನಾಟಕವು ದಕ್ಷಿಣ ಮಹಾರಾಷ್ಟ್ರ ಎಂದೇ ಗುರುತಿಸಲ್ಪಟ್ಟಿತು. ಪುಣೆ ನಗರವು ಆಡಳಿತ ಕೇಂದ್ರವಾದ ಕಾರಣ ದೂರದ ಕನ್ನಡಿಗರು ಎಲ್ಲ ಸೌಲಭ್ಯಗಳಿಂದ ವಂಚಿತರಾದರು.

ಉತ್ತರ ಕರ್ನಾಟಕದ ವಿದ್ಯಾರ್ಥಿಗಳು ವಿದ್ಯಾರ್ಜನೆಗೆ ಪುಣೆ ಇಲ್ಲವೆ ಮುಂಬಯಿಗೆ ಹೋಗಬೇಕಾದ ದುರ್ದೆಸೆ ಪ್ರಾಪ್ತವಾಯಿತು. ಹೀಗೆ ವಿದ್ಯಾಭ್ಯಾಸ ಮುಗಿಸಿ ಬಂದ ತರುಣರಿಗೆ ಮರಾಠೀ ದೀಕ್ಷೆಯಾಗಿರುತ್ತಿತ್ತು. ತರುಣ ಕನ್ನಡಿಗರು ಭಾಷಿಕವಾಗಿ, ಸಾಂಸ್ಕೃತಿಕವಾಗಿ ಮರಾಠಿಗರ ತುಳಿತಕ್ಕೆ ತುತ್ತಾಗಿ, ನಿತ್ರಾಣರಾಗಿ ಕನ್ನಡ, ಕನ್ನಡತನವು ಮರಣಶಯ್ಯೆಯಲ್ಲಿದ್ದಾಗ ಧನ್ವಂತರಿಯಾಗಿ ಕನ್ನಡಕ್ಕೆ ಪುನರ್ಜೀವವನ್ನು ತಂದು ಕೊಟ್ಟವರು ಡೆಪ್ಯುಟಿ ಚೆನ್ನಬಸಪ್ಪನವರು.

ಬೆಳಗಾವಿ ಜಿಲ್ಲೆಯ ಬಸಲಿಂಗಪ್ಪ ಅಪ್ಪಯ್ಯಪ್ಪ ಧಾರವಾಡ ಎಂಬ ಸದ್ಗೃಹಸ್ಥರು. ವೃತ್ತಿಯಿಂದ ವ್ಯಾಪಾರಿಗಳು. ಅವರ ಧರ್ಮಪತ್ನಿ ತಿಪ್ಪವ್ವ ಶರಣ ಸಂಪ್ರದಾಯ ಪಾಲಿಸುತ್ತಿದ್ದವರು. ಇವರ ಜೇಷ್ಠ ಪುತ್ರ ಚೆನ್ನಬಸಪ್ಪ ಕನ್ನಡದ ಶ್ರೇಷ್ಠ ಪುತ್ರರಾಗಿ ಬೆಳೆದ ಬಗೆ ರೋಮಾಂಚನಕಾರಿ.

ಬಾಲ್ಯದಲ್ಲಿಯೇ ತಂದೆಯನ್ನು ಕಳೆದುಕೊಂಡ ಬಾಲಕ ಚೆನ್ನಬಸಪ್ಪ ತಾಯಿ ತಿಪ್ಪವ್ವನವರ ಮಡಿಲಲ್ಲಿ ಬೆಳೆದರು. ಮನೆಯಲ್ಲಿ ಕಿತ್ತು ತಿನ್ನುವ ಬಡತನ. ತನ್ನ ವಿದ್ಯಾಭ್ಯಾಸ ನಿಲ್ಲುತ್ತದೆ ಎಂದು ಮನಗಂಡು ಚೆನ್ನಬಸಪ್ಪ ಒಂದು ರಾತ್ರಿ ತಾಯಿಯ ಪೆಟ್ಟಿಗೆಯಲ್ಲಿದ್ದ 3 ರೂಪಾಯಿ 10 ಆಣೆಗಳನ್ನು ತೆಗೆದುಕೊಂಡು ಮನೆಬಿಟ್ಟು ಹೊರಟರು. ಪುಣೆಯವರೆಗೆ 400 ಕಿ.ಮೀ. ದಾರಿಯನ್ನು ನಡೆದುಕೊಂಡೇ ಸಾಗಿದರು. ವಿದ್ಯಾಭ್ಯಾಸ ಮಾಡಲು ಅವರಿಗಿದ್ದ ಆಸಕ್ತಿ ಮತ್ತು ಅದಕ್ಕಾಗಿ ಈ ಬಾಲಕನ ಜ್ಞಾನತೃಷೆಗೆ ಮರುಳಾದ ಪುಣೆಯ ಶ್ರೀಮಂತ ಗೋವಿಂದರಾವ ಮೆಹಂದಳೇಕರ ಅವರು ಈ ಕನ್ನಡದ ಕೂಸನ್ನು ಪುಣೆಯಲ್ಲಿ ಬೆಳೆಸಿದರು.

ಚೆನ್ನಬಸಪ್ಪನವರು ಇಂಜಿನಿಯರಿಂಗ್ ಪದವಿ ಪಡೆದು ಧಾರವಾಡಕ್ಕೆ ಹಿಂದಿರುಗಿದ್ದು 1855ರಲ್ಲಿ. ಮನೆ ಕಟ್ಟುವ ಇಂಜಿನಿಯರ್ ಆಗಬೇಕಾಗಿದ್ದ ಚೆನ್ನಬಸಪ್ಪನವರು ಮನ ಕಟ್ಟುವ ಮಾಸ್ತರರಾದರು. ಮುಂಬಯಿ ಪ್ರಾಂತದ ವಿದ್ಯಾ ಇಲಾಖೆಯ ಕರೆಯ ಮೇರೆಗೆ ಬೆಳಗಾವಿ ನಾರ್ಮಲ್ ಸ್ಕೂಲಿನ ಪ್ರಾಚಾರ್ಯರಾದರು.

ಉತ್ತರ ಕರ್ನಾಟಕವನ್ನು ದಕ್ಷಿಣ ಮಹಾರಾಷ್ಟ್ರವೆಂದು ಗುರುತಿಸಿದ್ದ ಆ ದಿನಗಳಲ್ಲಿ ಆ ಪ್ರದೇಶದ ಎಲ್ಲ ಕಡೆ ಮರಾಠಿ ಭಾಷೆ ಮನೆ ಮಾಡಿಕೊಂಡಿತ್ತು. ಬ್ರಿಟಿಷ್ ಅಧಿಕಾರಿಗಳು ಆ ಪ್ರದೇಶದ ಭಾಷೆಯನ್ನು ಮರಾಠಿ ಎಂದೇ ತಿಳಿದಿದ್ದರು. ಆಳುವ ಸಂಸ್ಥಾನಿಕರು ಮಾತ್ರ ಮರಾಠಿಗರು. ಆದರೆ ಅಲ್ಲಿಯ ಜನರ ಭಾಷೆ ಕನ್ನಡ ಎಂಬ ಸತ್ಯವನ್ನು ಚೆನ್ನಬಸಪ್ಪನವರು ಬ್ರಿಟಿಷ್ ಅಧಿಕಾರಿ ರಸೆಲ್ ಸಾಹೇಬರಿಗೆ ಮನವರಿಕೆ ಮಾಡಿಕೊಟ್ಟರು. ಇದರಿಂದ ಕನ್ನಡಿಗರ ಭಾಗ್ಯೋದಯದ ಬಾಗಿಲು ತೆರೆಯಿತು.

ಚೆನ್ನಬಸಪ್ಪನವರು ವಿದ್ಯಾ ಇಲಾಖೆಗೆ ಕಾಲಿರಿಸಿದಾಗ ಕನ್ನಡಿಗರ ಪಾಡು ಚಿಂತಾಜನಕವಾಗಿತ್ತು. "ನಾನು 1864ರ ಜನವರಿ 21ರಂದು ಹಾಜರಾದಾಗ 12 ಹಾಗೂ 14 ವಿದ್ಯಾರ್ಥಿಗಳ ಎರಡು ವರ್ಗಗಳಿದ್ದವು. ಅವರಲ್ಲಿ ಅರ್ಧದಷ್ಟು ವಿದ್ಯಾರ್ಥಿಗಳು ಕೊಂಕಣಿಗಳಾಗಿದ್ದರು..." ಎಂದು ಚೆನ್ನಬಸಪ್ಪನವರು ಒಂದೆಡೆ ದಾಖಲಿಸಿದ್ದಾರೆ.

ಕನ್ನಡದ ನಿಸ್ಸೀಮ ಆರಾಧಕರಾಗಿದ್ದ ಚೆನ್ನಬಸಪ್ಪ ಅವರು ಬೆಳಗಾವಿಯ ನಾರ್ಮಲ್ ಶಾಲೆಯ ಪ್ರಾಚಾರ್ಯರಾಗಿ ಈ ನೆಲದ ಭಾಷೆ, ಸಂಸ್ಕೃತಿಯ ರಕ್ಷಣೆಗಾಗಿ ಕಂಕಣಬದ್ಧರಾದರು. ಆ ಕಾಲದಲ್ಲಿ ಆಡಳಿತದ ಪತ್ರವ್ಯವಹಾರಗಳು, ವರದಿ, ಸುತ್ತೋಲೆಗಳು ಮರಾಠಿಯಲ್ಲಿಯೇ ಇರುತ್ತಿದ್ದವು. ಆಗಾಗ ಬಳಸಲಾಗುತ್ತಿದ್ದ ಕನ್ನಡವು ವಿಕೃತವಾಗಿರುತ್ತಿತ್ತು. ಇದನ್ನು ಕಂಡು ಚೆನ್ನಬಸಪ್ಪನವರು ನೊಂದರು. ಆಡಳಿತದಲ್ಲಿ ಕನ್ನಡದ ಅನುಷ್ಠಾನ ಅಗತ್ಯವೆಂದು ಮನಗಂಡರು. ಅದನ್ನು ಕಾರ್ಯರೂಪಕ್ಕೆ ತರಲು ಮುಂದಾದರು.

ಕನ್ನಡದ ಕುಲದೀವಿಗೆಯನ್ನು ಕಾಪಾಡಲು ಕನ್ನಡದ

ಶಾಲೆಗಳನ್ನು ಸ್ಥಾಪಿಸಿದರು. ಅವುಗಳ ಸಂಖ್ಯೆಯ ಗಣನೀಯವಾಗಿ ಹೆಚ್ಚಿತು. ಚೆನ್ನಬಸಪ್ಪನವರು ಅಧಿಕಾರಕ್ಕೆ ಬರುವ ಮುನ್ನ ಮುಂಬಯಿ ಕರ್ನಾಟಕದ ಭಾಗದಲ್ಲಿದ್ದ ಕನ್ನಡ ಶಾಲೆಗಳ ಸಂಖ್ಯೆ ಕೇವಲ 34. ತಮ್ಮ ವೃತ್ತಿ ಜೀವನದ ಒಂದು ದಶಕದ ಅಧಿಕಾರಾವಧಿಯಲ್ಲಿ ಚೆನ್ನಬಸಪ್ಪನವರು ಈ ಸಂಖ್ಯೆಯನ್ನು 668ಕ್ಕೆ ಏರಿಸಿದ್ದರು! ಇದು ಅವರ ಕರ್ತೃತ್ವ ಶಕ್ತಿಯ ಕುರುಹು. ಹೀಗೆ ಅವರು ಕನ್ನಡ ಶಾಲೆಗಳನ್ನು ಸ್ಥಾಪಿಸುವುದರ ಮೂಲಕ ಕನ್ನಡಾಭಿಮಾನದ ಜ್ಯೋತಿಯನ್ನು ಬೆಳಗಿಸಿ, ಸಮರ್ಥವಾಗಿ ಕನ್ನಡಾಂಬೆಯ ತೇರನ್ನು ಮುನ್ನಡೆಸಿದರು. ಮಾರ್ಗದಲ್ಲಿ ಬಂದ ಎಡರು ತೊಡರುಗಳನ್ನು ಧೈರ್ಯವಾಗಿ ಎದುರಿಸಿದರು.

ಆಗಲೂ ಶಿಕ್ಷಣದಲ್ಲಿ ಪಠ್ಯಪುಸ್ತಕಗಳ ಕೊರತೆ ಮೊದಲ ಮತ್ತು ಬಹುಮುಖ್ಯ ಸಮಸ್ಯೆಯಾಗಿತ್ತು. ಇದರ ಪರಿಹಾರಕ್ಕಾಗಿ ಚೆನ್ನಬಸಪ್ಪನವರು ಅಣಿಯಾದರು. ಸಮರ್ಥರಾದ ಕನ್ನಡ ಲೇಖಕರನ್ನು ಪತ್ತೆಮಾಡಿದರು. ಅವರಿಗೆ ಪ್ರೇರಣೆ, ಪ್ರೋತ್ಸಾಹವನ್ನು ನೀಡಿ ಪಠ್ಯಪುಸ್ತಕಗಳನ್ನು ಬರೆಸಿ, ಕನ್ನಡದ ಏಳ್ಗೆಯನ್ನು ಸಾಧಿಸಿದರು. ಕನ್ನಡ ಬರಹಗಾರರನ್ನು ಶಿಕ್ಷಕರ ಹುದ್ದೆಗಳಿಗೆ ಸೇರಿಸಿಕೊಂಡರು. ಅಂತಹವರ ಪೈಕಿ ಬಾಣನ ಸಂಸ್ಕೃತ ಕಾದಂಬರಿಯನ್ನು ಸಮರ್ಥವಾಗಿ ಕನ್ನಡಕ್ಕೆ ಅನುವಾದಿಸಿದ ಗಂಗಾಧರ ಮಡಿವಾಳೇಶ್ವರ ತೂರಮರಿ, ಅರೇಬಿಯನ್ ನೈಟ್ಸ್ ಕತೆಗಳನ್ನು ಅನುವಾದಿಸಿದ ಗ್ಯಾಜೆಟಿಯರ್ ಖ್ಯಾತಿಯ ವೆಂಕಟರಂಗೋ ಕಟ್ಟಿ, ಹಳಗನ್ನಡದ ಪ್ರಕಾಂಡ ಪಂಡಿತರಾಗಿದ್ದ ಶಾಂತವೀರ ರಾಚಿದೇವ ಕಿತ್ತೂರ, ಶಾಕುಂತಲ ನಾಟಕಕ್ಕೆ ಕನ್ನಡದ ರೂಪ ನೀಡಿದ ಶೇಷೋ ರಾಮಚಂದ್ರ ಚೂರಮರಿ, ಪಠ್ಯಪುಸ್ತಕಗಳನ್ನು ರಚಿಸಿದ ಮಡಿವಾಳೇಶ್ವರ ಪಂಡಿತ, ಖಗೋಳಶಾಸ್ತ್ರ ಕೃತಿ ರಚನೆ ಮಾಡಿದ ಭುಜಂಗರಾವ ಹುಯಿಲಗೋಳ ಮೊದಲಾದವರನ್ನು ಹೆಸರಿಸಬಹುದು.

ಇದರಿಂದಾಗಿ ಚೆನ್ನಬಸಪ್ಪನವರು ಕನ್ನಡ ಗ್ರಂಥಕರ್ತರ ನಿರ್ಮಾಪಕರೆಂಬ ಖ್ಯಾತಿಗೆ ಪಾತ್ರರಾಗಿದ್ದಾರೆ. ಅವರು ಆಯ್ಕೆ ಮಾಡಿದ ಬರಹಗಾರರು ಕನ್ನಡದ ಉಳಿವಿಗಾಗಿ ಮನಮುಟ್ಟಿ ದುಡಿದ ಕಿಂಕರರಾಗಿದ್ದಾರೆ. ಇವರೆಲ್ಲರ ಕೇಂದ್ರ ಶಕ್ತಿಯಾಗಿ ಚೆನ್ನಬಸಪ್ಪನವರು ಕಾರ್ಯನಿರ್ವಹಿಸಿದರು. ಇಡಿಯಾಗಿ ತನು ಮನ ಧನಗಳನ್ನು ಅರ್ಪಿಸಿ, ಕನ್ನಡ ವಿದ್ಯಾ ಪ್ರಸಾರದ ಕಾರ್ಯವನ್ನು ಕೈಕೊಂಡು ಕನ್ನಡ ಜಾಗೃತಿಯ ಆದಿ ಪುರುಷ ಎನಿಸಿಕೊಂಡರು. ಅವರ ನೇತೃತ್ವದಲ್ಲಿ ಕನ್ನಡ ಲೇಖಕರ ಒಂದು ಪಡೆಯೇ ತಲೆ ಎತ್ತಿತು. ವಿದೇಶಿಯರಾದ ರೆವರೆಂಡ್ ಝುಗ್ಲರ್ ಅವರಿಗೆ ಇಂಗ್ಲಿಷ್ – ಕನ್ನಡ ನಿಘಂಟನ್ನು ಸಿದ್ಧಪಡಿಸಲು ಪ್ರೇರಣೆ ನೀಡಿದರು. ಆ ಕೃತಿ ರಚನೆಯಲ್ಲಿ ತಾವೂ ನೆರವಾದರು. ಸ್ವತಃ ಚೆನ್ನಬಸಪ್ಪನವರು ಗ್ರಂಥ ಬರೆಯಲು ಮುಂದಾಗಿ ಶೇಕ್ಸ್‌ಪಿಯರ್‌ನ ಸುಖಾಂತ ನಾಟಕವಾದ 'ಕಾಮೆಡಿ ಆಫ್ ಎರರ್ಸ್' ಹಾಗೂ ದುಃಖಾಂತ ನಾಟಕವಾದ 'ಮ್ಯಾಕ್‌ಬೆತ್'ಗಳನ್ನು ಕನ್ನಡಕ್ಕೆ ಅನುವಾದಿಸಿದರು. ಶಿಕ್ಷಣ ಪ್ರಸಾರ, ಜನಜಾಗೃತಿ, ಕನ್ನಡ ಭಾಷೆಯ ಉತ್ಥಾನ – ಇವನ್ನು ಗುರಿಯಾಗಿಟ್ಟುಕೊಂಡು ಚೆನ್ನಬಸಪ್ಪನವರು ಬೆಳಗಾವಿಯಲ್ಲಿ ನಾರ್ಮಲ್ ಸ್ಕೂಲಿನ ಪ್ರಾಚಾರ್ಯರಾಗಿದ್ದಾಗ 1865ರಲ್ಲಿ 'ಮಠ ಪತ್ರಿಕೆ' ಎಂಬ ಮಾಸಿಕ ಪತ್ರಿಕೆಯನ್ನು ಪ್ರಾರಂಭಿಸಿದರು. ಈಗಲೂ ಅದು 'ಜೀವನ ಶಿಕ್ಷಣ' ಎಂಬ ಶೀರ್ಷಿಕೆಯಲ್ಲಿ ಪ್ರಕಟಗೊಳ್ಳುತ್ತಿದೆ. ಈ 'ಮಠ ಪತ್ರಿಕೆ'ಯು ಕರ್ನಾಟಕದಲ್ಲಿ ಪತ್ರಿಕೋದ್ಯಮಕ್ಕೆ ನಾಂದಿ ಹಾಡಿತೆನ್ನಬಹುದು.



ಉದಯವಾಗಲಿ ನಮ್ಮ ಚಲುವ ಕನ್ನಡ ನಾಡು ಎಂದ ಹುಯಿಲಗೋಳ ನಾರಾಯಣರಾಯರು

1866ರಲ್ಲಿ ಚೆನ್ನಬಸಪ್ಪನವರು ಬೆಳಗಾವಿಯ ಡೆಪ್ಯುಟಿ ಶಿಕ್ಷಣಾಧಿಕಾರಿ ಆಗಿ ನೇಮಕಗೊಂಡರು. 1869ರಲ್ಲಿ ಅವರಿಗೆ ಬೆಳಗಾವಿಯಿಂದ ಧಾರವಾಡಕ್ಕೆ ವರ್ಗವಾಯಿತು. ಅವರು ಡೆಪ್ಯುಟಿ ಶಿಕ್ಷಣಾಧಿಕಾರಿಯ ಹುದ್ದೆಯಲ್ಲಿ ಹದಿನಾಲ್ಕು ವರ್ಷ ಸೇವೆ ಸಲ್ಲಿಸಿದರು. ಆವರೆಗೆ ಮರೆಯಾಗಿದ್ದ ಕನ್ನಡವು ಚೆನ್ನಬಸಪ್ಪನವರ ಅಧಿಕಾರದ ಅವಧಿಯಲ್ಲಿ ಮತ್ತೆ ಸ್ಫಟಿಕದಂತೆ ಗೋಚರಿಸಿತು. ಚೆನ್ನಬಸಪ್ಪನವರ ಅಮೋಘ ಸೇವೆಯು ಅವರಿಗೆ 'ಡೆಪ್ಯುಟಿ' ಎಂಬ ಅಭಿದಾನವನ್ನು ತಂದುಕೊಟ್ಟಿತು. 1881ರಲ್ಲಿ ಅವರು ದೈಹಿಕವಾಗಿ ಮೃತರಾದರು. ಆದರೆ ಅವರು ಡೆಪ್ಯುಟಿ ಎಂಬ ಹೆಸರಿನಿಂದ ಉಳಿದಿದ್ದಾರೆ. ಈಗಲೂ ಉತ್ತರ ಕರ್ನಾಟಕದ ಜನ ಡೆಪ್ಯುಟಿ ಚೆನ್ನಬಸಪ್ಪ ಅವರನ್ನು ಮರೆತಿಲ್ಲ.

ಡೆಪ್ಯುಟಿ ಚೆನ್ನಬಸಪ್ಪನವರು ತಮ್ಮ ಆಡಳಿತದ ಅವಧಿಯಲ್ಲಿ ಹೊರಡಿಸಿದ ಸುತ್ತೋಲೆ, ಪ್ರಕಟಣೆಗಳು ಶಿಕ್ಷಣ ಪ್ರಸಾರ ಮತ್ತು ಕನ್ನಡದ ಭಾಷಾ ಶುದ್ಧಿಗಾಗಿ ಹೆಚ್ಚಿನ ಒತ್ತನ್ನು ನೀಡಿದವು. ಚೆನ್ನಬಸಪ್ಪನವರ ಸುತ್ತೋಲೆಯ ಒಕ್ಕಣೆಗೆ ಇವು ಉದಾಹರಣೆಗಳು :

"...ಕನ್ನಡ ಶಾಲೆಗಳಲ್ಲಿ ವಿಷಯವನ್ನು ಕನ್ನಡದಲ್ಲಿ ಕಲಿಸುವುದಿಲ್ಲ. ಇದು ಬಂದ್ ಮಾಡಿ ಯಾವತ್ತೂ ವಿಷಯಗಳನ್ನು ಕನ್ನಡದಲ್ಲಿ ಕಲಿಸಬೇಕು. ಲೆಕ್ಕ ಮಾಡುವಾಗ ಕನ್ನಡ ಅಂಕಿಗಳನ್ನು ಹಾಕಬೇಕು." (ತಾ.ಪ.ಜೂ.1866)

"...ಕೆಲವು ಮಾಸ್ತರರು ಕನ್ನಡ ಪತ್ರಗಳನ್ನು ನಮ್ಮ ಕಡಿಗೆ ಬರೆದು ಅವುಗಳಲ್ಲಿ ಕಡೆಗೆ ಹಿಂದಿ (ಸೇವೆಯಲ್ಲಿ ಶ್ರುತವಿರಲಿ ಅಂತಾ ವಿನಂತಿ) ಅಥವಾ ಹೀಗೆ ಮತ್ತೇನಾದರೂ ಬರೆಯುತ್ತಿರುತ್ತಾರೆ. ಈ ವಹಿವಾಟು ಬಂದ್ ಮಾಡಬೇಕು. ಕನ್ನಡ ಪತ್ರಗಳಲ್ಲಿ ಯಾವತ್ತೂ ಕನ್ನಡ ಬರೆಯಬೇಕು.." (ತಾ.ಪ. ಸೆಪ್ಟೆಂಬರ್ 1869)

"...ಶುದ್ಧ ಬರೆಯೋಣದರಲ್ಲಿ ಆಗತಕ್ಕಷ್ಟು ಸುಧಾರಣೆ ಆದ ಹಾಗೆ ಕಾಣಲಿಲ್ಲ. ಆದ್ದರಿಂದ ನಮ್ಮ ಮಾಸ್ತರ ಜನರೆಲ್ಲರೂ ಈ ವಿಷಯದಲ್ಲಿ ಲಕ್ಷ್ಯ ಕೊಡುವಿರೆಂದು ನಾವು ಕೋರುತ್ತೇವೆ.."

ಈ ಬಗೆಯ ಸುತ್ತೋಲೆಗಳನ್ನು ಗಮನಿಸಿದಾಗ ಚೆನ್ನಬಸಪ್ಪನವರು ಕನ್ನಡದ ಬಗ್ಗೆ ವಹಿಸಿದ ಕಾಳಜಿ ವ್ಯಕ್ತವಾಗುತ್ತದೆ. ಕನ್ನಡ ಅಂಕಿಗಳ ಬದಲಾಗಿ ಮರಾಠಿ ಅಂಕಿಗಳನ್ನು ಬಳಸುವುದನ್ನು ತಡೆಯಲು ಆದೇಶ ನೀಡಿದರು. ನಮ್ಮ ಮಾಧ್ಯಮ, ಬರಹ, ಮಾತುಗಳಲ್ಲಿ ಕನ್ನಡ ಮಾತ್ರ ಕೇಳಿ ಬರುವಂತಾದರೆ ಅದುವೆ ಚೆನ್ನಬಸಪ್ಪನವರಿಗೆ ನಾವು ಸಲ್ಲಿಸುವ ನಿಜವಾದ ಗೌರವ.

ಇದು ಚೆನ್ನಬಸಪ್ಪನವರ ಜೀವನ ಸಾಧನೆ, ಸಂದೇಶ ಕುರಿತ ಸ್ಥೂಲ ನೋಟ. ಅವರ ಘನ ವ್ಯಕ್ತಿತ್ವದ ಬಗ್ಗೆ ಒಂದು ಮಾತನ್ನು ಹೇಳಲೇಬೇಕು. ಅವರದು ಎತ್ತರವಾದ ಮೈಕಟ್ಟು, ನಸುಗೆಂಪು ಮೈಬಣ್ಣ. ಅಪ್ಪಟ ಭಾರತೀಯ ವೇಷಭೂಷಣ. ಬದುಕು ಆದರ್ಶಗಳ ಆಗರ. ಮಾಸ್ತರನಾದವನು ಮಹಾಸ್ತರದ ವಿದ್ಯಾರ್ಥಿಯಾಗಿರಬೇಕೆಂಬುದಕ್ಕೆ ಸಾಕ್ಷಿಯಾಗಿದ್ದವರು ಚೆನ್ನಬಸಪ್ಪನವರು. ಶಿಕ್ಷಕನಿಗೆ ಶಾರೀರವೇ ಆಸ್ತಿ. ಅವರು ಗಂಭೀರ ಧ್ವನಿಯುಳ್ಳ ಮೋಹಕ ವಾಗ್ಮಿಗಳಾಗಿದ್ದರು. ತಮ್ಮ ಚುಂಬಕ ವ್ಯಕ್ತಿತ್ವದಿಂದ ಕನ್ನಡಿಗರಲ್ಲಿ ಕನ್ನಡಾಭಿಮಾನದ ದೀಪವನ್ನು ಹೊತ್ತಿಸಿದರು.

ಶಿಕ್ಷಣ ಪ್ರಕ್ರಿಯೆ ಎಂದರೆ ಘನ ವ್ಯಕ್ತಿತ್ವದ ನಿರ್ಮಾಣವೆಂದು ನಂಬಿದ್ದ ಚೆನ್ನಬಸಪ್ಪನವರು ಶುದ್ಧ ಚಾರಿತ್ರ್ಯ, ನ್ಯಾಯನಿಷ್ಠೆ, ಪ್ರಾಮಾಣಿಕತನ, ದಕ್ಷತೆಗಳನ್ನು ಮೈಗೂಡಿಸಿಕೊಂಡ ಕಾಯಕ ಜೀವಿಗಳಾಗಿದ್ದರು. ತಮ್ಮ ಹೊಣೆಗಾರಿಕೆಯಿಂದ ಜಾರಿಕೊಳ್ಳುವ ಜಾಯಮಾನ ಅವರದಾಗಿರಲಿಲ್ಲ.

ಒಮ್ಮೆ ಅವರ ಕಾರಕೂನನೊಬ್ಬ 4–5 ಸಾವಿರ ರೂಪಾಯಿಗಳ ಮೊತ್ತವನ್ನು ಎತ್ತಿಹಾಕಿ ಪರಾರಿಯಾದರು. ನೈತಿಕ ಹೊಣೆ ಹೊತ್ತು ಚೆನ್ನಬಸಪ್ಪನವರು ಸರಕಾರಕ್ಕೆ ಬರೆದದ್ದು ಹೀಗೆ

"..ನಾನು ನನ್ನ ಕಾರಕೂನನನ್ನು ನಂಬಿ ಜಮಾ ಖರ್ಚಿನ ಪುಸ್ತಕಗಳ ಮೇಲೆ ಸಹಿ ಮಾಡಿದ್ದು ನನ್ನ ತಪ್ಪು ಇರುತ್ತದೆ... ಆದ್ದರಿಂದ ನನಗೆ ಸಲ್ಲತಕ್ಕ ಪಗಾರದಲ್ಲಿ ಮನೆತನದ ವೆಚ್ಚಕ್ಕೆಂದು ಅರವತ್ತು ರೂಪಾಯಿ ಮಾತ್ರ ಬಿಟ್ಟು ಉಳಿದುದನ್ನ ಕಡಿಮೆ ಬಿದ್ದ ಹಣವನ್ನು ಮುಟ್ಟಿಸಿಕೊಳ್ಳುವುದಕ್ಕಾಗಿ ಉಪಯೋಗಿಸಬೇಕು..."

ಈ ಬಗೆಯ ಕರ್ತವ್ಯ ಪ್ರಜ್ಞೆ ಹಾಗೂ ಹೊಣೆಗಾರಿಕೆಯು ಡೆಪ್ಯುಟಿ ಅವರ ದೊಡ್ಡತನವಾಗಿದೆ. ಎಂಜಿನಿಯರಿಂಗ್ ವಿದ್ಯಾಭ್ಯಾಸ ಮಾಡಿ, ಕೇವಲ ಸ್ವಲ್ಪ ಅವಧಿಗೆ ಕಲಿತ ಶಾಲೆಯಲ್ಲೇ ತಾತ್ಕಾಲಿಕ ಬೋಧಕರಾಗಿ, ಕೆಲವು ದಿನಗಳು ಅಂಚೆ ಇಲಾಖೆಯಲ್ಲಿ ಕಾರ್ಯನಿರ್ವಹಿಸಿ, ಶಿಕ್ಷಣ ಇಲಾಖೆಯಲ್ಲಿ ಅಧಿಕಾರಿಯಾಗಿ, ಆ ಅಧಿಕಾರದ ಕಾರಣದಿಂದ ಡೆಪ್ಯುಟಿಯೇ ಆಗಿ ಕನ್ನಡ ಸಾಹಿತ್ಯ ಮತ್ತು ಶಿಕ್ಷಣ ಕ್ಷೇತ್ರಗಳನ್ನು ಶ್ರೀಮಂತ ಮಾಡಿರುವ ಚೆನ್ನಬಸಪ್ಪನವರು, ಈಗ ಮಾತ್ರವಲ್ಲದೆ, ಮುಂದೆಯೂ 'ಡೆಪ್ಯುಟಿ'ಯಾಗಿಯೇ ಕನ್ನಡಿಗರ ಮನೆ ಮತ್ತು ಮನಸ್ಸುಗಳಲ್ಲಿ ಉಳಿಯುತ್ತಾರೆ.

**ಹೊತ್ತಿತೋ ಹೊತ್ತಿತು**
**ಕನ್ನಡದ ದೀಪ**

– ಸಿದ್ದಯ್ಯ ಪುರಾಣಿಕ

**ಕೊಡಗಿನಲ್ಲಿ ಏಕೀಕರಣ ಚಳುವಳಿ**

1928ರಲ್ಲಿ ಕೊಡಗನ್ನು ಕರ್ನಾಟಕದಲ್ಲಿ ಸೇರಿಸಬೇಕೆಂದು ಠರಾವು ಮಾಡಲಾಗಿತ್ತು. ಆದರೆ ಸೈಮನ್ ಕಮೀಷನ್ ಈ ಠರಾವನ್ನು ತಿರಸ್ಕರಿಸಿತು. 1938ರಲ್ಲಿ ಕೊಡಗನ್ನು ಮೈಸೂರು ಸಂಸ್ಥಾನದಲ್ಲಿ ವಿಲೀನಗೊಳಿಸಬೇಕೆಂಬ ವಿಚಾರಕ್ಕೆ ಬೆಂಬಲ ದೊರೆಯಿತು. 1946ರಲ್ಲಿ ಕೇಂದ್ರ ಸಂವಿಧಾನ ರಚನಾ ಸಭೆ (ಘಟನಾ ಸಭೆ)ಗೆ ಕೊಡಗಿನಿಂದ ಒಬ್ಬ ಸದಸ್ಯರ ಆಯ್ಕೆಗೆ ಅವಕಾಶ ದೊರೆತಾಗ ಸಿ.ಎಂ. ಪೂಣಚ್ಚ ಅವರು ಘಟನಾ ಸಮಿತಿಗೆ ಆಯ್ಕೆಗೊಂಡರು. ಕೊಡಗಿನಲ್ಲಿ ಚೀಫ್ ಕಮೀಶನರ್ ಆಡಳಿತ ಮುಂದುವರಿಯಿತು. ಭಾರತದ ಸಂವಿಧಾನವು ಕೊಡಗನ್ನು 'ಸಿ' ಗುಂಪಿನ ರಾಜ್ಯವನ್ನಾಗಿ ಪರಿಗಣಿಸಿದ ಕಾರಣ ಕೊಡಗು ಜವಾಬ್ದಾರಿ ಸರಕಾರವನ್ನು ಪಡೆಯಲು ಅರ್ಹವಾಯಿತು.

1952ರಲ್ಲಿ ನಡೆದ ಸಾರ್ವತ್ರಿಕ ಚುನಾವಣೆಯಲ್ಲಿ, ಕರ್ನಾಟಕ ಏಕೀಕರಣದ ಪರವಾಗಿದ್ದ ಕಾಂಗ್ರೆಸ್ ಪಕ್ಷವು 15 ಸ್ಥಾನಗಳಲ್ಲಿ ಗೆಲುವು ಪಡೆಯಿತು. ಕರ್ನಾಟಕದಲ್ಲಿ ಕೊಡಗಿನ ವಿಲೀನವನ್ನು ವಿರೋಧಿಸುತ್ತಿದ್ದ (ಕೊಡಗಿನ ಅಸ್ತಿತ್ವ ಹಾಗೆಯೇ ಉಳಿಯಬೇಕೆನ್ನುವ) ಪಂದ್ಯಂಡ ಬೆಳ್ಳಿಯಪ್ಪನವರ ಪಕ್ಷಕ್ಕೆ 9 ಸ್ಥಾನಗಳು ದೊರೆತವು. ಸಿ.ಎಂ. ಪೂಣಚ್ಚ ಮುಖ್ಯಮಂತ್ರಿಯಾಗಿ ಹಾಗೂ ಕೆ. ಮಲ್ಲಪ್ಪ ಮಂತ್ರಿಗಳಾಗಿದ್ದ ಇಬ್ಬರ ಮಂತ್ರಿಮಂಡಲವು ಕೊಡಗಿನಲ್ಲಿ ಅಧಿಕಾರ ಸ್ವೀಕರಿಸಿತು. ಕೆ.ಪಿ. ಮುತ್ತಣ್ಣನವರ ಪ್ರಕಾರ 'ವ್ಯಕ್ತಿ ಸ್ವಾತಂತ್ರ್ಯವೆಂಬ ಪ್ರಜಾಸತ್ತಾತ್ಮಕ ತಿರುಳು ಪೂರ ನಾಶವಾಯಿತು. ಕೊಡಗಿನ ರಾಜರ 200 ವರ್ಷದ ಆಳ್ವಿಕೆಯ ಲಕ್ಷಣಗಳಲ್ಲಿ ಹಲವಾರು ಲಕ್ಷಣಗಳು ಪ್ರತ್ಯಕ್ಷವಾಗಿ ಪ್ರತಿಬಿಂಬಿಸಿದವು. ಬೇಹುಗಾರರ ಸಂಖ್ಯೆಯು ಸರ್ವ ಗ್ರಾಮಗಳಲ್ಲಿಯೂ ಹೆಚ್ಚಾಗಿ ಕಂಡುಬಂದಿತು. ದುರವಸ್ಥೆಗೀಡಾದ ಪ್ರತ್ಯೇಕತಾವಾದಿಗಳು ಈ ಸ್ಥಿತಿಯಿಂದ ಪಾರಾಗಲು ಮೈಸೂರಿನೊಡನೆ ವಿಲೀನವಾಗುವುದರಿಂದಲೇ ತಮ್ಮ ಬಂಧ ವಿಮೋಚನೆಯಾಗುವುದೆಂಬ ನಿಜಾಂಶವನ್ನು ಕಂಡುಕೊಂಡರು.'

ಕೊಡಗಿನಲ್ಲಿ ಕಾಂಗ್ರೆಸ್ಸಿಗರು ಏಕೀಕರಣಕ್ಕೆ ಹೆಚ್ಚು ಬೆಂಬಲ ನೀಡುತ್ತ ಬಂದಿದ್ದರು. ಕೊಡಗನ್ನು ಮದ್ರಾಸ್ ಇಲ್ಲವೆ ಮೈಸೂರು ರಾಜ್ಯದಲ್ಲಿ ವಿಲೀನಗೊಳಿಸಬೇಕೆಂಬ ಬೇಡಿಕೆಗೆ ವಿಧಾನಸಭೆಯೂ ಬೆಂಬಲ ನೀಡಿತ್ತು. ಕನ್ನಡ ಸಾಹಿತ್ಯಿಕ ಚಟುವಟಿಕೆ, ಕರ್ನಾಟಕ ಸಂಘಗಳ ಚಟುವಟಿಕೆಗಳು ಕರ್ನಾಟಕದ ಪರವಾಗಿಯೇ ಬೆಳೆದಿದ್ದವು. ಕನ್ನಡ ಮಾತೃಭಾಷೆಯಾಗಿರದೇ ಇದ್ದರೂ ಕೊಡವರು ಕನ್ನಡದಲ್ಲೇ ಶಿಕ್ಷಣ ಪಡೆದು ಕನ್ನಡದ ಬಗ್ಗೆ ಅಭಿಮಾನ ಹೊಂದಿದ್ದರು. ಸ್ವಾತಂತ್ರ್ಯ ಸನ್ನಿಹಿತವಾದಂತೆ ಪಂದ್ಯಂಡ ಬೆಳ್ಳಿಯಪ್ಪ ಹಾಗೂ ಮುಂತಾದ ಕಾಂಗ್ರೆಸ್ ನಾಯಕರು ಕೊಡಗಿನ ವಿಲೀನಕ್ಕೆ ವಿರೋಧಿಸಿ, 1952ರಲ್ಲಿ ಚುನಾವಣೆಗೂ ಸ್ಪರ್ಧಿಸಿದ್ದರು. 1953ರಲ್ಲಿ ಕೊಡಗಿನ ವಿಲೀನದ ವಿಷಯದಲ್ಲಿ ಠರಾವನ್ನು ವಿಧಾನಸಭೆಯಲ್ಲಿ ಮಂಡಿಸಿದಾಗ ಪರವಾಗಿ 22 ಮತ್ತು ವಿರೋಧವಾಗಿ 2 ಮತಗಳಿಂದ ಗೊತ್ತುವಳಿ ಸ್ವೀಕಾರವಾಯಿತು. ರಾಜ್ಯ ಪುನರ್ಘಟನಾ ಆಯೋಗ (ತ್ರಿಮೂರ್ತಿ ಅಥವಾ ಫಜಲ್ ಆಲಿ ಕಮೀಶನ್)ವು ಕೊಡಗನ್ನು ವಿಶಾಲ ಮೈಸೂರು (ಕರ್ನಾಟಕ) ರಾಜ್ಯದಲ್ಲಿ ಐಕ್ಯಗೊಳಿಸಲು ಶಿಫಾರಸ್ಸು ಮಾಡಿ ಅದನ್ನು ಒಂದು ಪ್ರತ್ಯೇಕ ಜಿಲ್ಲೆಯಾಗಿ ಉಳಿಸಬೇಕೆಂದು ಮೈಸೂರು ರಾಜ್ಯದಲ್ಲಿ ವಿಲೀನವಾಗಿ, ರಾಜ್ಯದ 19 ಜಿಲ್ಲೆಗಳಲ್ಲಿ ಒಂದಾಗಿ 1956ರ ನವೆಂಬರ್ 1 ರಂದು ಕೊಡಗು ಜಿಲ್ಲೆ ಅಸ್ತಿತ್ವಕ್ಕೆ ಬಂದಿತು. ಕೊಡಗಿನ ಮುಖ್ಯಮಂತ್ರಿಯಾಗಿದ್ದ ಪೂಣಚ್ಚ ವಿಶಾಲ ಮೈಸೂರು ರಾಜ್ಯದಲ್ಲಿ ಎಸ್. ನಿಜಲಿಂಗಪ್ಪನವರ ಮಂತ್ರಿಮಂಡಲದಲ್ಲಿ ಸಚಿವ ಸ್ಥಾನವನ್ನು ಪಡೆದರು.

## ನರಸಿಂಹಾಚಾರ್ಯ ಆರ್.

**(ಜನನ : 9-4-1860 ಮರಣ : 6-12-1936)**



ಆರ್. ನರಸಿಂಹಾಚಾರ್ಯರು ಮಂಡ್ಯ ಜಿಲ್ಲೆಯ ಕೊಪ್ಪಲಿನ ತಿರುನಾರಾಯಣ ಪೆರುಮಾಳ್ ಮತ್ತು ಶಿಂಗಮ್ಮಾಳ್ ಇವರ ಮಗ. ಇವರ ಬಾಲ್ಯ ವಿದ್ಯಾಭ್ಯಾಸವು ಸ್ವಗ್ರಾಮದಲ್ಲಿಯೇ ನಡೆಯಿತು. ಸಂಸ್ಕೃತವನ್ನು ತಮ್ಮ ತಂದೆಯವರಿಂದಲೇ ಕಲಿತರು. ಇವರಿಗೆ 13ನೇ ವಯಸ್ಸಿಗೆ ಮದುವೆಯಾಯಿತು. ಮಾವನವರ ಊರಾದ ಮದ್ರಾಸಿಗೇ ಹೋಗಿ ಅಲ್ಲಿಯ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಓದಿ, 1877ರಲ್ಲಿ ಮೆಟ್ರಿಕ್ಯುಲೇಷನ್ ಪರೀಕ್ಷೆಗೆ ತಮಿಳನ್ನು ಐಚ್ಛಿಕ ವಿಷಯವಾಗಿ ತೆಗೆದುಕೊಂಡು ಉತ್ತಮ ವರ್ಗದಲ್ಲಿ ತೇರ್ಗಡೆಯಾದರು.

ನರಸಿಂಹಾಚಾರ್ಯರು ಬೆಂಗಳೂರಿಗೆ ಬಂದು ಶುಲ್ಕ ರಿಯಾಯಿತಿಯೊಂದಿಗೆ ಸೆಂಟ್ರಲ್ ಕಾಲೇಜ್ ಸೇರಿದರು. 1879ರಲ್ಲಿ ಎಫ್.ಎ. ಪರೀಕ್ಷೆಯಲ್ಲಿ ಪ್ರಥಮ ತರಗತಿಯಲ್ಲಿ ತೇರ್ಗಡೆಯಾದರು. ಇವರ ಉಪಾಧ್ಯಾಯರು ಇವರನ್ನು ಕುರಿತು "ಈತನು ಪ್ರತಿ ತರಗತಿಯಲ್ಲಿಯೂ ವಿದ್ಯಾರ್ಥಿವೇತನವನ್ನೂ, ಬಹುಮಾನಗಳನ್ನೂ ಗಳಿಸಿದ್ದಾನೆ. ಈತನ ವಿದ್ಯಾರ್ಥಿ ಜೀವನ ಬಹು ಉಪಯುಕ್ತವಾಗಿದೆ. ಬಹು ಪ್ರಾಮಾಣಿಕ, ಶ್ರದ್ಧಾಳು, ಉತ್ತಮ ಇಂಗ್ಲಿಷ್ ಪಂಡಿತ" ಎಂದು ಮುಂತಾಗಿ ಪ್ರಶಂಸಿಸಿದ್ದಾರೆ.

ಆಚಾರ್ಯರು 1882ರಲ್ಲಿ ಬಿ.ಎ., ಪದವಿ ಪೂರೈಸಿದ ನಂತರ ಮೊದಲ 4–5 ವರ್ಷಗಳು ಚಿಕ್ಕಮಗಳೂರು, ಶಿವಮೊಗ್ಗಗಳಲ್ಲಿ ಉಪಾಧ್ಯಾಯರಾಗಿ ಸೇವೆ ಸಲ್ಲಿಸಿದರು. ಆನಂತರ ಮೈಸೂರಿನ ಮಹಾರಾಜರವರ ಮತ್ತು ಮಹಾರಾಣೀಯವರ ಕಾಲೇಜಿನಲ್ಲಿ ಶಿಕ್ಷಕರಾದರು.

ಆರ್. ನರಸಿಂಹಾಚಾರ್ಯರು 1893ರಲ್ಲಿ ಮದ್ರಾಸ್ ವಿಶ್ವವಿದ್ಯಾಲಯದಲ್ಲಿ ಕನ್ನಡ ಪ್ರಧಾನ ಭಾಗವಾಗಿಯೂ ತಮಿಳನ್ನು ಸಹ ವಿಷಯವನ್ನಾಗಿಯೂ ತೆಗೆದುಕೊಂಡು ಎಂ.ಎ. ಪದವೀಧರರಾದರು.

ಆಚಾರ್ಯರ ಮಾತೃಭಾಷೆ ತಮಿಳೇ ಆಗಿದ್ದರೂ, ಅವರು ಶಾಲೆಗಳಲ್ಲಿ ವಿವಿಧ ವಿಷಯಗಳ ಬಗ್ಗೆ ಪಾಠ ಮಾಡುತ್ತಿದ್ದರು. ಆಚಾರ್ಯರಿಗೆ ಕನ್ನಡದ ಮೇಲಿದ್ದ ಅಭಿಮಾನ ಪ್ರಶಂಸನಾರ್ಹವಾದುದು. ಇವರು ಮಹಾರಾಣಿ ಕಾಲೇಜಿನಲ್ಲಿರುವಾಗಲೇ 'ನೀತಿಮಂಜರಿ', 'ಶಬ್ದರೂಪಾವಳಿ' ಹಾಗೂ ಚಂಪೂ ರಾಮಾಯಣದ ಕೆಲವು ಭಾಗಗಳನ್ನು ಪ್ರಕಟಿಸಿದರು. 'ಹಿತಬೋಧಿನಿ' ಪತ್ರಿಕೆಯಲ್ಲಿ ಸಂಗೀತಶಾಸ್ತ್ರದ ವಿಷಯವಾಗಿ ಕೆಲವು ಲೇಖನಗಳನ್ನು ಪ್ರಕಟಿಸಿದರು. 'ಹಿತಬೋಧಿನಿ' ಪತ್ರಿಕೆಯಲ್ಲಿ ಸಂಗೀತಶಾಸ್ತ್ರದ ವಿಷಯವಾಗಿ ಕೆಲವು ಲೇಖನಗಳನ್ನು ಬರೆದರು. ವಿದ್ಯಾ ಇಲಾಖೆಗಾಗಿ ಇಂಗ್ಲಿಷ್ ಕಾಪಿ ಪುಸ್ತಕವನ್ನೂ ಇವರು ಸಿದ್ಧಪಡಿಸಿದ್ದರು. ಆಚಾರ್ಯರು ವಿದ್ಯಾ ಇಲಾಖೆಯಲ್ಲಿ ಭಾಷಾಂತರಕಾರರಾಗಿ ನೇಮಕಗೊಂಡದ್ದು 1894ರಲ್ಲಿ. ಅಲ್ಲಿ ಅವರಿಗೆ ಸಂಶೋಧನಾ ಕಾರ್ಯ ಮತ್ತು ಕೃತಿರಚನೆಗೆ ಅನುಕೂಲವಾಯಿತು. 1899ರಲ್ಲಿ ನರಸಿಂಹಾಚಾರ್ಯರು ಮೈಸೂರಿನ ಪ್ರಾಚ್ಯವಿದ್ಯಾ ಇಲಾಖೆಯಲ್ಲಿ ಲೂಯಿ ರೈಸ್ ಅವರಿಗೆ ಸಹಾಯಕ ಅಧಿಕಾರಿಗಳಾಗಿ ನೇಮಕವಾದರು. ಇವರು 'ಪಂಪಭಾರತ' ಅಥವಾ 'ವಿಕ್ರಮಾರ್ಜುನ ವಿಜಯ'ದ ಸಂಪಾದನೆಯಲ್ಲಿ ರೈಸ್‌ರೊಂದಿಗೆ ಪರಿಷ್ಕರಣ ಕಾರ್ಯದಲ್ಲಿ ತೊಡಗಿದರು. ಇದು ಶ್ರಮಸಾಧ್ಯವಾದ ಕೆಲಸವಾಗಿಯೇ ಇತ್ತು. ಆ ಕಾರ್ಯದಲ್ಲಿ ಆಚಾರ್ಯರು ಬಹು ಸಮರ್ಪಕವಾಗಿ ಕೆಲಸ ನಿರ್ವಹಿಸಿ ರೈಸ್‌ರ ಉದಾರ ಪ್ರಶಂಸೆಗೆ ಪಾತ್ರರಾದರು. ಮುಂದೆ ರೈಸ್‌ರವರ ಸಲಹೆಯೊಂದಿಗೆ ನಾಗವರ್ಮನ 'ಕಾವ್ಯಾವಲೋಕನ' ಮತ್ತು 'ಭಾಷಾಭೂಷಣ' ಎಂಬ ಎರಡು ಶಾಸ್ತ್ರ ಗ್ರಂಥಗಳನ್ನು ಸ್ವತಃ ಸಂಶೋಧಿಸಿ, 1903ರ ಸುಮಾರಿನಲ್ಲಿ ಬಹು ದೀರ್ಘ ಹಾಗೂ ಸಂಶೋಧನಾತ್ಮಕ ಉಪೋದ್ಘಾತ ಹಾಗೂ ಅನುಬಂಧದಿಂದ ಕೂಡಿದ ವಿದ್ವತ್‌ಪೂರ್ಣ ಗ್ರಂಥವನ್ನು ಪ್ರಕಟಿಸಿದರು. ಈ ವಿಶೇಷ ಸಂಶೋಧನೆ ಕುರಿತು ರೈಸ್, ಪಂಜೆ ಮಂಗೇಶರಾವ್, ಹೆಚ್. ನಾರಾಯಣರಾವ್ ಮುಂತಾದವರು ಮುಕ್ತಕಂಠದಿಂದ ಪ್ರಶಂಸೆಯ ಮಾತುಗಳನ್ನಾಡಿದ್ದಾರೆ.

ಬಿ.ಎಲ್.ರೈಸ್ ಅವರು 1906 ಪ್ರಾಚ್ಯ ವಸ್ತು ಇಲಾಖೆಯಿಂದ ನಿವೃತ್ತಿ ಹೊಂದಿದ ನಂತರ ಆಚಾರ್ಯರೇ ಆ ಇಲಾಖೆಯ ಮುಖ್ಯಾಧಿಕಾರಿಗಳಾದರು. ಅಲ್ಲಿಂದ 1922ರವರೆಗೆ ಹದಿನಾರು ವರ್ಷಗಳ ಕಾಲ ಅಲ್ಲಿ ನಿರಂತರವಾಗಿ ಕಾರ್ಯನಿರ್ವಹಿಸಿದರು. ಅವರ ಅಧಿಕಾರದ ಅವಧಿಯಲ್ಲಿ ಸುಮಾರು 5000 ಹೊಸ ಶಾಸನಗಳು ಪ್ರಕಟಗೊಂಡವು. ಎಲ್ಲ ಧರ್ಮಗಳೀಗೆ ಸಂಬಂಧಿಸಿದ ಸುಮಾರು 1000 ಕಟ್ಟಡಗಳು ಪರೀಕ್ಷಿಸಲ್ಪಟ್ಟವು. 4100 ನಾಣ್ಯಗಳು ಸಂಶೋಧಿತವಾದವು. 1250 ಭಾವಚಿತ್ರಗಳೂ, 120 ನಕ್ಷೆಗಳೂ ತಯಾರಿಸಲ್ಪಟ್ಟವು. 125 ಕನ್ನಡ ಮತ್ತು 100 ಸಂಸ್ಕೃತ ಗ್ರಂಥಗಳನ್ನೊಳಗೊಂಡ ಸಂಪುಟಗಳು ಪ್ರತಿ ಮಾಡಲ್ಪಟ್ಟವು. ಸೋಮನಾಥಪುರ, ದೊಡ್ಡಗದ್ದವಳ್ಳಿಗಳಲ್ಲಿನ ವಾಸ್ತು ಮತ್ತು ಶಿಲ್ಪಗಳನ್ನು ಪರಿಚಯಿಸುವ ಕೈಪಿಡಿಗಳು ಪ್ರಕಟಗೊಂಡವು. ಪ್ರಸಿದ್ಧ ವ್ಯಾಕರಣ ಗ್ರಂಥ 'ಶಬ್ದಾನುಶಾಸನ' ಪರಿಶೋಧಿತ ಪುನರ್ಮುದ್ರಣವಾಯಿತು. ಚಂದ್ರವಳ್ಳಿ, ಹಳೇಬೀಡು, ಚಿತ್ರದುರ್ಗ, ತಲಕಾಡುಗಳಲ್ಲಿ ಭೂಶೋಧನೆ ನಡೆಸಲಾಯಿತು. ಬೇರೆ ಬೇರೆ ಜಿಲ್ಲೆಗಳ ಶಾಸನ ಸಂಪಟಗಳನ್ನು ಪ್ರಕಟಿಸಿದರು. ಶಿಲ್ಪಕ್ಕೆ ಸಂಬಂಧಪಟ್ಟಂತೆ ಅದುವರೆಗೆ ಚಾಲುಕ್ಯ ಶಿಲ್ಪದ ಅನುವರ್ತಿಯೆಂದು ಭಾವಿಸಲ್ಪಟ್ಟಿದ್ದ ಮೈಸೂರು ಶಿಲ್ಪಕ್ಕೆ ಹೊಯ್ಸಳ ಶೈಲಿ ಎಂದು ಪ್ರತ್ಯೇಕ ಹೆಸರು ನೀಡಿ ಅವುಗಳ ವೈಶಿಷ್ಟ್ಯವನ್ನು ಸ್ಪಷ್ಟಪಡಿಸಿದ ಕೀರ್ತಿ ಆಚಾರ್ಯರಿಗೆ ಸಲ್ಲುತ್ತದೆ. ಆಚಾರ್ಯರು ಸಾವಿರಾರು ನಾಣ್ಯಗಳನ್ನು ಸಂಶೋಧಿಸಿ ಹಲವಾರು ರಾಜಕೀಯ ವಂಶಗಳ ಮೇಲೆ ಬೆಳಕು ಚೆಲ್ಲಿದ್ದಾರೆ ಮತ್ತು ಹಲವಾರು ದೇಶಗಳ ನಾಣ್ಯಗಳನ್ನು ಸಂಶೋಧಿಸಿ



ಹಲವಾರು ರಾಜಕೀಯ ವಂಶಗಳ ಮೇಲೆ ಬೆಳಕು ಚೆಲ್ಲಿದ್ದಾರೆ ಮತ್ತು ಹಲವಾರು ದೇಶಗಳ ನಾಣ್ಯಗಳನ್ನು ಸಂಶೋಧಿಸಿ ಇತಿಹಾಸಕ್ಕೆ ಮಹತ್ವದ ಕೊಡುಗೆ ನೀಡಿದ್ದಾರೆ.

ಆಚಾರ್ಯರು ತಮ್ಮ ಅಧಿಕಾರಾವಧಿಯಲ್ಲಿ ಸಾವಿರಾರು ಸಂಸ್ಕೃತ, ಕನ್ನಡ ಕೈಬರಹದ ಓಲೆಯ ಮತ್ತು ಕಾಗದ ಪ್ರತಿಗಳನ್ನು ಅವಲೋಕಿಸಿ, ಅಧ್ಯಯನ ಮಾಡಿದ್ದಾರೆ.

ತಿರುವಾಂಕೂರಿನ ಗಣಪತಿ ಶಾಸ್ತ್ರಿಗಳಿಗಿಂತ ಮೊದಲೇ ಭಾಸನ 'ಸ್ವಪ್ನವಾಸವದತ್ತ' ಮತ್ತು 'ಪ್ರತಿಜ್ಞಾಯೌಗಂಧರಾಯಣ' ಕೃತಿಗಳನ್ನು ಇವರು ಗಮನಿಸಿದ್ದರು.

"ವಾಸ್ತವವಾಗಿ ಅವರು ಪ್ರಕಟಿಸಿದ ಹದಿನಾರು ವರ್ಷದ ವರದಿಗಳು ಭವ್ಯವಾಗಿ ಸಂಪಾದಿತವಾಗಿವೆ. ಸುಂದರವಾಗಿ ಮುದ್ರಿತವಾಗಿವೆ. ಇವು ದಕ್ಷಿಣ ದೇಶದ ಚರಿತ್ರೆಗೆ ಊಹಿಸುವುದಕ್ಕೂ ಆಗದಷ್ಟು ಅಗಾಧರಾಶಿಯ ಸಾಮಗ್ರಿಯನ್ನು ಒದಗಿಸುತ್ತವೆ. ಇವು ಪ್ರಪಂಚದ ಎಲ್ಲಾ ವಿದ್ವಾಂಸರಿಗೆ ಬೇಕಾದ ಎಲ್ಲಾ ಶಾಸ್ತ್ರಗಳಿಗೂ ಸಂಬಂಧಪಟ್ಟ ಸಾಧನ ಸಾಮಗ್ರಿಗಳನ್ನು ಹೊಂದಿವೆ. ಬಹು ಸುಂದರವಾದ ಅಸಂಖ್ಯಾತ ಛಾಯಾಚಿತ್ರಗಳಿಂದ ತುಂಬಿವೆ. ಅವರು ಕಂಡುಹಿಡಿದ ಶಾಸನಗಳ ಸಂಖ್ಯೆಯು ಯಾರನ್ನಾದರೂ ದಂಗುಬಡಿಸುತ್ತದೆ. ಅದರಲ್ಲಿ ಬರುವ ಅಪೂರ್ವವಾದ ಸಾಂಕೇತಿಕ ಶಬ್ದಗಳಿಗೆ ಅವರು ಕೊಟ್ಟಿರುವ ಅರ್ಥವಿವರಣೆಯು ಸಮರ್ಪಕವೂ, ಸಂಭವನೀಯವೂ ಆಗಿದೆ. ಒಂದೊಂದು ಭಾಗವೂ ಸಂಪಾದಕರ ದುಡಿಮೆಯ ಪ್ರಮಾಣವನ್ನೂ ಉತ್ಸಾಹದ ಕಾವನ್ನೂ ಹೊರಗೆಡಹುತ್ತದೆ. ಗಂಗರ ಕೃತಕವಲ್ಲದ ಶಾಸನಗಳನ್ನು ಕಂಡುಹಿಡಿದ ಕೀರ್ತಿ ಸಂಪೂರ್ಣವಾಗಿ ಅವರಿಗೇ ಸಲ್ಲತಕ್ಕದ್ದಾಗಿದೆ" ಎಂಬುದು ವಿದ್ವಾನ್ ಎನ್. ಅನಂತರಂಗಾಚಾರ್ ಅವರ ಅಭಿಪ್ರಾಯ.

ಆರ್. ನರಸಿಂಹಾಚಾರ್ಯರ ಹೆಸರು ಚಿರಸ್ಥಾಯಿಯಾಗಿರುವುದು ಅವರು ಸಂಪಾದಿಸಿ, ಪ್ರಕಟಿಸಿರುವ 'ಕರ್ನಾಟಕ ಕವಿಚರಿತೆ'ಯ ಮೂರು ಸಂಪುಟಗಳಿಂದ. ವಾಸ್ತವವಾಗಿ ವಿದ್ವತ್ಪ್ರಪಂಚವು ಅವರನ್ನು 'ಕರ್ನಾಟಕ ಕವಿಚರಿತಕಾರರು' ಎಂಬ ಹೆಸರಿನಿಂದ ಇಂದಿಗೂ ಸಂಬೋಧನೆ ಮಾಡುತ್ತದೆ. ಇದರಲ್ಲಿ ಮೊದಲ ಸಂಪುಟವನ್ನು ಎಸ್.ಜಿ. ನರಸಿಂಹಾಚಾರ್ಯರ ಸಹಾಯದಿಂದ ಮತ್ತು ಉಳಿದೆರಡು ಸಂಪುಟಗಳನ್ನು ತಾವೊಬ್ಬರೇ ಸಿದ್ಧಪಡಿಸಿದ್ದಾರೆ. ತಾವು ಸಂಪಾದಿಸಿದ ಈ ಕೃತಿಗಳಿಗಾಗಿ ಪಟ್ಟಶ್ರಮವನ್ನು ಮೊದಲ ಸಂಪುಟದ ಉಪೋದ್ಘಾತದಲ್ಲಿ ಹೀಗೆ ಹೇಳಿದ್ದಾರೆ ಎಂದು ರಾ. ನರಸಿಂಹಾಚಾರ್ಯರ ಬಗ್ಗೆ ಕೃತಿ ರಚಿಸಿರುವ ಎನ್. ಅನಂತರಂಗಾಚಾರ್ ದಾಖಲಿಸಿದ್ದಾರೆ.

ಆಚಾರ್ಯರು ಕವಿಚರಿತೆಯ ಮೊದಲ ಸಂಪುಟದಲ್ಲಿ ಕ್ರಿಶ.8 ರಿಂದ 14ನೆಯ ಶತಮಾನದವರೆಗೂ, ಎರಡನೇ ಸಂಪುಟದಲ್ಲಿ 15 ರಿಂದ 17ನೆಯ ಶತಮಾನದವರೆಗೂ, ಮೂರನೆಯ ಸಂಪುಟದಲ್ಲಿ 18–19ನೆಯ ಶತಮಾನದ ಕವಿ ಮತ್ತು ಕಾವ್ಯಗಳನ್ನೂ ಕುರಿತ ವಿಚಾರಗಳನ್ನು ದಾಖಲಿಸಿದ್ದಾರೆ. ಅವರು ಒಟ್ಟು 1148 ಕವಿಗಳ ಪರಿಚಯ ಮಾಡಿಕೊಟ್ಟಿದ್ದಾರೆ. ಇದು ಕನ್ನಡ ಸಾಹಿತ್ಯದ ಜ್ಞಾನ ಭಂಡಾರ ಮತ್ತು ದಕ್ಷಿಣ ಭಾರತದ ಭಾಷೆಗಳಲ್ಲಿಯೇ ಮೊದಲನೆಯ ಕವಿಚರಿತೆಯ ಸಂಪುಟ.

**ವಾಸ್ತವವಾಗಿ ಅವರು ಪ್ರಕಟಿಸಿದ ಹದಿನಾರು ವರ್ಷದ ವರದಿಗಳು ಭವ್ಯವಾಗಿ ಸಂಪಾದಿತವಾಗಿವೆ. ಸುಂದರವಾಗಿ ಮುದ್ರಿತವಾಗಿವೆ. ಇವು ದಕ್ಷಿಣ ದೇಶದ ಚರಿತ್ರೆಗೆ ಊಹಿಸುವುದಕ್ಕೂ ಆಗದಷ್ಟು ಅಗಾಧರಾಶಿಯ ಸಾಮಗ್ರಿಯನ್ನು ಒದಗಿಸುತ್ತವೆ. ಇವು ಪ್ರಪಂಚದ ಎಲ್ಲಾ ವಿದ್ವಾಂಸರಿಗೆ ಬೇಕಾದ ಎಲ್ಲಾ ಶಾಸ್ತ್ರಗಳಿಗೂ ಸಂಬಂಧಪಟ್ಟ ಸಾಧನ ಸಾಮಗ್ರಿಗಳನ್ನು ಹೊಂದಿವೆ.**

ವ್ಯಕ್ತಿಗಂಳತೆಯೇ ಈ ಕೃತಿಗಳನ್ನು ಕುರಿತು, ರಾಯಲ್ ಏಷಿಯಾಟಿಕ್ ಸೊಸೈಟಿ ಪತ್ರಿಕೆ, ಮಿಥಿಕ್ ಸೊಸೈಟಿ ಪತ್ರಿಕ್, ಈವನಿಂಗ್ ಮೇಲ್, ಪ್ರಬುದ್ಧ ಕರ್ನಾಟಕ, ವಿಶ್ವಬಂಧು ದಿನಪತ್ರಿಕೆಗಳೂ ಈ ಸಂಪುಟಗಳನ್ನು ನಾಯಕ ಕೃತಿಗಳೆಂದು ಕರೆದು, ಅದರ ವಿಸ್ತಾರ, ವೈಭವ ಮತ್ತು ಉಪಯುಕ್ತತೆಯನ್ನು ಕೊಂಡಾಡಿವೆ.

ಆಚಾರ್ಯರ ಸಂಶೋಧನೆ, ಕಾರ್ಯತತ್ಪರತೆ, ವಿದ್ವತ್ತನ್ನು ವಿದೇಶಿ ಹಾಗೂ ಸ್ವದೇಶೀ ವಿದ್ವಾಂಸರು ಪ್ರಶಂಸಿಸಿ ಆಚಾರ್ಯರಿಗೆ ಗೌರವ ಪ್ರಶಸ್ತಿಗಳ ಸರಮಾಲೆಯೇ ದೊರೆತಿವೆ. 1916ರಲ್ಲಿ ಬ್ರಿಟಿಷ್ ಸರ್ಕಾರವು ಇವರಿಗೆ 'ರಾವ್ ಬಹದ್ದೂರ್' ಪ್ರಶಸ್ತಿ ಪ್ರದಾನ ಮಾಡಿದೆ.

ಅಖಿಲ ಭಾರತ ಸಾಹಿತ್ಯ ಸಂಘವು 1924ರಲ್ಲಿ 'ಪ್ರಾಚ್ಯವಿದ್ಯಾ ವೈಭವ' ಎಂಬ ಮತ್ತು 1934ರಲ್ಲಿ ಇಂಡಿಯಾ ಸರ್ಕಾರವು 'ಮಹಾಮಹೋಪಾಧ್ಯಾಯ' ಎಂಬ ಪ್ರಶಸ್ತಿಯನ್ನು ಕೊಟ್ಟು ಗೌರವಿಸಿವೆ. ಇದಲ್ಲದೆ ಹಲವಾರು ಸಂಘ, ಸಂಸ್ಥೆಗಳು ಗೌರವ ಪದವಿಗಳನ್ನೂ ಹಾಗೂ ಪ್ರಶಸ್ತಿಗಳನ್ನು ಕೊಟ್ಟು ಗೌರವಿಸಿವೆ.

ಇವರು ಹಲವಾರು ಸಂಘ, ಸಂಸ್ಥೆಗಳನ್ನು ಕಟ್ಟಿ ಬೆಳೆಸಿದ್ದಾರೆ. ಸಮಾಜಕಾರ್ಯ ಮತ್ತು ಧಾರ್ಮಿಕ ಕಾರ್ಯಗಳಿಗಾಗಿ ವಿದ್ಯಾರ್ಥಿಗಳಿಗೆ ಸಹಾಯ ಮತ್ತು ಪ್ರೋತ್ಸಾಹ ನೀಡಿರುವುದಲ್ಲದೆ, ಕನ್ನಡ ನಾಡು ಮತ್ತು ನುಡಿಗಾಗಿ ಸೇವೆ ಸಲ್ಲಿಸಲು ಮಾರ್ಗದರ್ಶನವನ್ನೂ ಮಾಡಿದ್ದಾರೆ.

ಸ್ನೇಹಿತರಾಗಲೀ, ಸಹಾಯಕ ವರ್ಗದವರಾಗಲೀ ಮಾಡಿದ ಕಾರ್ಯದ ಗೌರವವನ್ನು ಸಂಬಂಧಿಸದವರಿಗೆ ಸಲ್ಲಿಸುತ್ತಿದ್ದರೇ ಹೊರತು ಅದರ ಖ್ಯಾತಿಯನ್ನು ತಮ್ಮದನ್ನಾಗಿಸಿಕೊಳ್ಳುತ್ತಿರಲಿಲ್ಲ. ಆಚಾರ್ಯರು 1936ನೆಯ ಡಿಸೆಂಬರ್ 6ರಂದು ಇಹಲೋಕ ತ್ಯಜಿಸಿದರು. ಭರತಖಂಡ ಮತ್ತು ಮೈಸೂರು ರಾಜ್ಯ ಮಾತ್ರವಲ್ಲದೆ ಇಡೀ ಪ್ರಪಂಚದ ವಿದ್ವತ್‌ಮಂಡಲವೇ ಅವರ ಸಾವಿಗೆ ಶೋಕ ಸೂಚಿಸಿತು.

ಕನ್ನಡದಲ್ಲಿಯೂ ವಿದ್ವತ್ತಿಗೆ ಅವಕಾಶವಿದೆ ಎಂದು ತೋರಿಸಿಕೊಟ್ಟ ಅಗ್ರಗಣ್ಯರಲ್ಲಿ ಆಚಾರ್ಯರೂ ಒಬ್ಬರು. ಕನ್ನಡವನ್ನು ಕಣ್ಣೆತ್ತಿ ನೋಡಲೂ ಹಿಂಜರಿಯುತ್ತಿದ್ದ ಕಾಲದಲ್ಲಿ ಬೇರೆ ಅಧಿಕಾರದಲ್ಲಿ ಸುಲಭವಾಗಿ ಖ್ಯಾತಿ ಪಡೆಯಲು ಶಕ್ತಿ ಇದ್ದ ಅವರ ಪಾಂಡಿತ್ಯವು ಕನ್ನಡಕ್ಕೆ ಮೀಸಲಾಗಿ ಆ ಭಾಷಾ ಕವಿಗಳ ಚರಿತ್ರೆಯನ್ನು ಕೂಲಂಕಷವಾಗಿ ವಿಮರ್ಶೆ ಮಾಡಿ ಮುಂದಿನ ಕಟ್ಟಡಕ್ಕೆ ತಳಹದಿ ಆದದ್ದು ಕನ್ನಡಿಗರ ಪುಣ್ಯ.

## ಗಂಗಾಧರರಾವ್ ದೇಶಪಾಂಡೆ

**(ಜನನ : 1871 ಮರಣ : 1961)**



ಬೆಳಗಾವಿ ಜಿಲ್ಲೆಯ ಜಲಾಲಪುರ ಎಂಬ ಗ್ರಾಮದಲ್ಲಿ ಜನಿಸಿದ ಗಂಗಾಧರರಾವ್ ದೇಶಪಾಂಡೆ ಬೆಳೆದದ್ದು ಹುದಲಿಯಲ್ಲಿ. ಬಾಲ್ಯದಲ್ಲೇ ಲೋಕಮಾನ್ಯ ಬಾಲಗಂಗಾಧರ ತಿಲಕರಿಂದ ಪ್ರಭಾವಿತರಾಗಿ, ನಂತರ ಗಾಂಧೀಜಿಯವರ ಅನುಯಾಯಿಯಾದರು. ಗೋಪಾಲಕೃಷ್ಣ ಗೋಖಲೆಯವರ ಪ್ರಭಾವಕ್ಕೂ ಸಿಕ್ಕಿದ್ದ ಗಂಗಾಧರರಾಯರು ಪುಣೆಯ ಡೆಕ್ಕನ್ ಕಾಲೇಜಿನಲ್ಲಿ ಓದುತ್ತಿದ್ದಾಗಲೇ ರಾಜಕೀಯ ಪ್ರಭಾವಕ್ಕೆ ಒಳಗಾಗಿದ್ದರು. ತಮ್ಮ ಮಗ ರಾಜಕೀಯ ಪ್ರಭಾವಕ್ಕೆ ಒಳಗಾಗುತ್ತಿದ್ದುದನ್ನು ಕಂಡ ಬಾಲಕೃಷ್ಣ ದೇಶಪಾಂಡೆ ಅವರು ತಿಲಕರ ಬಳಿ 'ನನ್ನ ಮಗನನ್ನು ನಿಮ್ಮೊಂದಿಗೆ ಎಳೆಯಬೇಡಿರಿ. ನನಗೆ ಇವನೊಬ್ಬನೇ ಮಗ. ಮೇಲಾಗಿ ನಮ್ಮ ಮನೆತನವು ಶ್ರೀಮಂತಿಕೆಯದು. ಶ್ರೀಮಂತರ ಒಬ್ಬನೇ ಒಬ್ಬ ಮಗ ಎಲ್.ಎಲ್.ಬಿ. ಪಾಸು ಆಗಿರುವಾಗ ಅವನನ್ನೇಕೆ ನಿಮ್ಮೊಡನೆ ಎಳೆಯುತ್ತೀರಿ? ಬೇಕಾದಷ್ಟು ದಡ್ಡ ಹುಡುಗರೂ, ಬಡವರ ಹುಡುಗರೂ ಇರುವಾಗ ಅವರನ್ನು ಬಿಟ್ಟು ನನ್ನ ಮಗನ ಮೇಲೆಯೇ ಏಕೆ ನಿಮ್ಮ ಕಣ್ಣು?' ಎಂದು ಅಲವತ್ತುಕೊಂಡರು. ಆಗ ತಿಲಕರು 'ಬಡವರಿಗೆ ಹೊಟ್ಟೆ ತುಂಬಿಕೊಳ್ಳಲು ದುಡ್ಡಿನ ಸಂಪಾದನೆಗಾಗಿ ಉದ್ಯೋಗ ಮಾಡಬೇಕಾಗುವುದು. ನೀವು ಹೇಗೂ ಸುದೈವಿಗಳು, ಮನೆಯಿಂದ ಸ್ಥಿತಿವಂತರಿದ್ದೀರಿ. ಅಲ್ಲದೆ ನನ್ನ ಕೆಲಸದಲ್ಲಿ ದಡ್ಡರಿಗೆ ಸ್ಥಾನವಿಲ್ಲ. ಎಲ್ಲ ಅನುಕೂಲತೆ ಇದ್ದ ನೀವೇ ಹೀಗೆ ಅಂದರೆ ಬಡವರು ತಮ್ಮ ಮಕ್ಕಳನ್ನು ಹೇಗೆ ಚಳವಳಿಗೆ ಕೊಡಬಲ್ಲರು?' ಎಂದು ಕೇಳಿ ಗಂಗಾಧರ ರಾಯರು ದೇಶಸೇವೆಗೆ ಅಚಲವಾಗಿ ಮುನ್ನಡೆಯಲು ಅವಕಾಶ ಕಲ್ಪಿಸಿದರು.

ಗೋಪಾಲಕೃಷ್ಣ ಗೋಖಲೆ, ಜಸ್ಟೀಸ್ ರಾನಡೆ, ಚಿಪಳೂಣಕರ, ಅಗರಕರ ಮುಂತಾದ ಹಲವು ರಾಜಕೀಯ ಪ್ರಮುಖರ ಜೊತೆಗೆ ಸಂಪರ್ಕ ಇರಿಸಿಕೊಂಡಿದ್ದ ರಾಯರು ಸಂಘಟನೆಗೆ ಹೆಸರಾದವರು. ಕೆಲವು ಕಾಲ ಮುಂಬಯಿಯಲ್ಲಿ 'ಲೋಕಮತ' ಎಂಬ ಮರಾಠಿ ಸಾಪ್ತಾಹಿಕದ ಸಂಪಾದಕರಾಗಿಯೂ ಕಾರ್ಯನಿರ್ವಹಿಸಿದ ರಾಯರು, ಬೆಳಗಾವಿಯಲ್ಲಿ 'ಸ್ವದೇಶೀ ವಸ್ತುಭಂಡಾರ' ಎಂಬ ಅಂಗಡಿಯನ್ನೂ, ಗಣೇಶ ವಿದ್ಯಾಲಯ ಎಂಬ ರಾಷ್ಟ್ರೀಯ ಶಾಲೆಯನ್ನೂ ಆರಂಭಿಸಿದರು.


1920ರಲ್ಲಿ ನಾಗಪುರದಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದಲ್ಲಿ ಕರ್ನಾಟಕ ಪ್ರದೇಶ ಕಾಂಗ್ರೆಸ್ ರಚನೆಗೆ ಅವಕಾಶ ಲಭಿಸಿತು. 1921ರಲ್ಲಿ ರಚನೆಯಾದ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಮೊದಲ ಅಧ್ಯಕ್ಷ ಸ್ಥಾನವನ್ನು ವಹಿಸಿಕೊಂಡವರು ಗಂಗಾಧರರಾವ್ ದೇಶಪಾಂಡೆ. 1924ರಲ್ಲಿ ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನವು ಬೆಳಗಾವಿಯಲ್ಲೇ ನಡೆಯಲು ಪ್ರಮುಖವಾಗಿ ಕಾರಣರಾದವರು ಗಂಗಾಧರರಾಯರು. ಆ ಸಂದರ್ಭದಲ್ಲಿ ಅಧಿವೇಶನದ ಸ್ವಾಗತಾಧ್ಯಕ್ಷರಾಗಿದ್ದ ಗಂಗಾಧರರಾಯರು, ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ತಮ್ಮದೇ ಆದ ವಿಶಿಷ್ಟ ಸೇವೆ ಸಲ್ಲಿಸಿದರೂ, ಅಧಿಕಾರಕ್ಕಾಗಿ ಎಂದೂ ಹಾತೊರೆದವರಲ್ಲ. ತಾನಾಗಿ ಬಂದ ಯಾವುದೇ ಅಧಿಕಾರವನ್ನು ಸಮರ್ಥವಾಗಿ ನಿಭಾಯಿಸಿದ ಗಂಗಾಧರರಾಯರು ಮೊದಲಿಗೆ ಕರ್ನಾಟಕೇತರ ಕಾಂಗ್ರೆಸ್ ಮುಖಂಡರು ಕರ್ನಾಟಕದಲ್ಲಿ ಮಾಡಿದ ಕನ್ನಡೇತರ ಭಾಷಣಗಳನ್ನು ಕನ್ನಡಕ್ಕೆ ಅನುವಾದ ಮಾಡುತ್ತಿದ್ದರು.

ಗಂಗಾಧರರಾವ್ ದೇಶಪಾಂಡೆಯವರು ತಮ್ಮ ರಾಜಕೀಯ ಜೀವನದ ಆರಂಭದ ದಿನಗಳಲ್ಲಿ ಮರಾಠೀ ಜನ ಮತ್ತು ಮರಾಠೀ ಭಾಷೆಯ ಪರವಾಗಿಯೇ ಇದ್ದರು. 1909ರಲ್ಲಿ ತಿಲಕರು ಹೋಂರೂಲ್ ಚಳುವಳಿಯ ಸಲುವಾಗಿ ಬೆಳಗಾವಿ, ಶಹಾಪುರ, ಗುರ್ಲಹೊಸೂರು ಮತ್ತಿತರ ಕರ್ನಾಟಕದಲ್ಲಿನ ಸ್ಥಳಗಳಿಗೆ ಭೇಟಿ ನೀಡಿದಾಗ, ಕರ್ನಾಟಕದಲ್ಲಿನ ಚಳುವಳಿಯು ಕನ್ನಡದಲ್ಲೇ ಆಗಬೇಕೆಂದು ಗಂಗಾಧರರಾವ್ ದೇಶಪಾಂಡೆ ಮತ್ತು ಇತರ ಮುಖಂಡರಿಗೆ ಮನವರಿಕೆ ಮಾಡಿಕೊಟ್ಟರು. ಗೋಪಾಲಕೃಷ್ಣ ಗೋಖಲೆಯವರ ನಿಧನದ ಸಂದರ್ಭದಲ್ಲಿ ಹಮ್ಮಿಕೊಳ್ಳಲಾಗಿದ್ದ ಸಂತಾಪ ಸೂಚನಾ ಸಭೆಯಲ್ಲಿ ಮರಾಠಿಯಲ್ಲಿ ಮಾತನಾಡಿದ ಶಂ.ಬಾ. ಜೋಶಿಯವರಿಗೆ, 'ಕನ್ನಡದಲ್ಲಿ ಮಾತನಾಡಿ ಕನ್ನಡ ಭಾಷೆಯ ಹಕ್ಕನ್ನು ಸ್ಥಾಪಿಸು' ಎಂದು ತಿಳಿಸಿದ್ದ ತಿಲಕರ ಮಾತುಗಳು ರಾಯರ ಮೇಲೂ ಪ್ರಭಾವ ಬೀರಿದವು. ರಾಜಕೀಯವಾಗಿ ಕರ್ನಾಟಕವನ್ನು ಒಗ್ಗೂಡಿಸುವ ಕೆಲಸದಲ್ಲಿ ಸಫಲರಾದವರು ಗಂಗಾಧರರಾಯರು 1927ರಲ್ಲಿ ಕರ್ನಾಟಕದ ಬಹುತೇಕ ಎಲ್ಲಾ ವರ್ಗದ ಮುಖ್ಯಸ್ಥರನ್ನೊಳಗೊಂಡ 34 ಜನರ ತಂಡವು ಕರ್ನಾಟಕ ಏಕೀಕರಣದ ಪರವಾಗಿ ಸಲ್ಲಿಸಿದ ಸಾರ್ವತ್ರಿಕ ಮನವಿಯನ್ನು ಸಲ್ಲಿಸಿತು. ಆ 34 ಜನರಲ್ಲಿ ಗಂಗಾಧರರಾಯರೂ ಒಬ್ಬರಾಗಿದ್ದರು.

ಭಾರತವು ಸ್ವತಂತ್ರವಾದ ನಂತರ, ಸಕ್ರಿಯ ರಾಜಕಾರಣದಿಂದ ಬಹುತೇಕ ಹೊರಗುಳಿದ ರಾಯರನ್ನು ಫಜಲ್ ಆಲಿ ನೇತೃತ್ವದ ರಾಜ್ಯ ಪುನರ್ವಿಂಗಡಣಾ ಆಯೋಗವು ಖುದ್ದಾಗಿ ಸಂದರ್ಶಿಸಿ, ಅವರ ಅಭಿಪ್ರಾಯಗಳನ್ನು ಪಡೆಯಿತು. ಆ ಸಂದರ್ಭದಲ್ಲಿ ಬೆಳಗಾವಿ ಭಾಗದ ಮತ್ತೊಬ್ಬ ಧುರೀಣ ದತ್ತೋಪಂತ ಬೆಳವಿ ಅವರೂ ರಾಯರ ಜೊತೆಗಿದ್ದರು. ಇಬ್ಬರೂ ಬೆಳಗಾವಿ ಜಿಲ್ಲೆಯು ಇಡಿಯಾಗಿ ಕರ್ನಾಟಕಕ್ಕೇ ಸೇರಬೇಕೆಂದು ಮನವಿ ಮಾಡಿದರು. 10-10-1955ರಂದು ಬೆಳಗಾವಿಯ ತಿಲಕ್ ಮೈದಾನದಲ್ಲಿ ವಿಧಾನಸಭಾ ಸದಸ್ಯ ಪಿ.ಎಚ್. ಗುಂಜಾಳರ ಅಧ್ಯಕ್ಷತೆಯಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ ರಾಯರು ಬೆಳಗಾವಿಯ ಕರ್ನಾಟಕಕ್ಕೇ ಸೇರಬೇಕೆಂದು ಮನವಿ ಮಾಡಿದ್ದರು.



# ಏಕೀಕರಣವನ್ನು ಹದಗೊಳಿಸಿದ (ರಂಗ)ಭೂಮಿ



ಎಚ್ಚಮ ನಾಯಕ'ನಾಗಿ ಸಿನಿಮಾ ನಟ ಡಿಕ್ಕಿ ಮಾಧವರಾವ್, ಚಾಂದಖಾನ್'ಆಗಿ ಎ.ಕೆ.ಮಂಜುನಾಥ್

**ಮುಕ್ಕಾಲು ಶತಮಾನದ ಹೋರಾಟದ ಫಲವಾಗಿ ಕರ್ನಾಟಕ ಅಸ್ತಿತ್ವಕ್ಕೆ ಬಂದಿತು. ಕನ್ನಡ ಜಾಗೃತಿ ಮೂಡಿಸಲು ಕತೆ, ಕಾವ್ಯ, ಕಾದಂಬರಿ, ಗ್ರಂಥಾಲಯ, ಕನ್ನಡಪರ ಹೋರಾಟಗಳಿಗೆ ಸರಿಸಾಟಿಯಾಗಿ ರಂಗಭೂಮಿಯೂ ಶ್ರಮಿಸಿತು. ಈ ನಿಟ್ಟಿನಲ್ಲಿ ವೃತ್ತಿರಂಗಭೂಮಿ ನೀಡಿದ ಕೊಡುಗೆ ಅಸಾಧಾರಣವಾದುದು.**

ಗುಡಿಹಳ್ಳಿ ನಾಗರಾಜ್

ಆಧುನಿಕ ಕನ್ನಡ ರಂಗಭೂಮಿ ಅಸ್ತಿತ್ವಕ್ಕೆ (1872) ಬಂದುದರ ಮುಖ್ಯ ಉದ್ದೇಶಗಳಲ್ಲಿ ನಾಡು ನುಡಿಯ ಜಾಗೃತಿ ಪ್ರಮುಖವಾಗಿತ್ತು.

ಆ ಕಾಲವೇ ಹಾಗಿತ್ತು. ಅದು ಹತ್ತೊಂಬತ್ತನೆಯ ಶತಮಾನ. ಕರ್ನಾಟಕದ ಸಾಂಸ್ಕೃತಿಕ ವಾತಾವರಣದಲ್ಲಿ ಮರಾಠಿಯ ಪ್ರಾಬಲ್ಯ. ಅದರಲ್ಲೂ ಉತ್ತರ ಕರ್ನಾಟಕ ಪೂರ್ತಿಯಾಗಿ ಮರಾಠಿಮಯವಾಗಿತ್ತು. ಬ್ರಿಟಿಷ್ ಅಧಿಕಾರ ಕೇಂದ್ರ ದಕ್ಷಿಣದ ಕಡೆ ಮದ್ರಾಸ್ (ಈಗಿನ ಚೆನ್ನೈ) ಆಗಿದ್ದರೆ; ಉತ್ತರದ ಕಡೆ ಮುಂಬಯಿ ಆಗಿತ್ತು. ಸಹಜವಾಗಿ ಮುಂಬೈಗೆ ಸೇರಿದ ಆಡಳಿತ ಪ್ರದೇಶದಲ್ಲಿ ಮರಾಠಿ ಅಧಿಕಾರಿಗಳು ಹೆಚ್ಚು ಸಂಖ್ಯೆಯಲ್ಲಿದ್ದರು. ಉತ್ತರ ಕರ್ನಾಟಕವನ್ನು ದಕ್ಷಿಣ ಮಹಾರಾಷ್ಟ್ರ ಎಂದು ಕರೆಯುವ ದಾರ್ಷ್ಟ್ಯ ಅವರಲ್ಲಿ ಬೆಳೆದುಬಿಟ್ಟಿತ್ತು. ಭಾಷಾವಾರು ಪ್ರಾಂತಗಳ ರಚನೆ ಆಗಿರಲಿಲ್ಲ. ಅಧಿಕಾರ ಇರುವವರ ಮೂಗಿನ ನೇರಕ್ಕೆ ಎಂಬಂತೆ ಕನ್ನಡ ಮಾತನಾಡುವ ಪ್ರದೇಶವನ್ನು ಮಹಾರಾಷ್ಟ್ರ ಎಂದು ಕರೆಯುವ ದುಸ್ಥಿತಿಯ ಕಾಲ ಅದು.

ಉಗಿಬಂಡಿಯ (ರೈಲು) ಪ್ರವಾಸದ ಅನುಕೂಲದಿಂದ ಮರಾಠಿ ಭಾಷೆಯ ಅಧಿಕಾರಿಗಳೇ ಹೆಚ್ಚಾಗಿ ಉತ್ತರ ಕರ್ನಾಟಕಕ್ಕೆ ಬಂದರು. ಇಲ್ಲಿನ ಶಿಕ್ಷಣವನ್ನು ಗುತ್ತಿಗೆ ಹಿಡಿದಂತೆ ವರ್ತಿಸಿದರು. ವ್ಯಾಪಾರೋದ್ಯಮಗಳ ಮೂಲಕ ಇಲ್ಲಿಯೇ ನೆಲೆಸಿದರು. ಮರಾಠಿ ನಾಟಕ ಕಂಪನಿಗಳನ್ನು ಇಲ್ಲಿಗೆ ಕರೆಸಿಕೊಂಡು ಸಾಲುಸಾಲಾಗಿ ಪ್ರದರ್ಶನ ನೀಡುತ್ತಿದ್ದರು. ಈ ಬಗ್ಗೆ ಮುದವೀಡು ಕೃಷ್ಣರಾಯರು ಚುರಮರಿಯವರ 'ಶಾಕುಂತಲಾ' ನಾಟಕಕ್ಕೆ ಬರೆದ ಪ್ರಸ್ತಾವನೆಯಲ್ಲಿ ಮನಮಿಡಿಯುವಂತೆ ವರ್ಣಿಸಿದ್ದಾರೆ: "ಪಂಪ, ರನ್ನ, ಕುಮಾರವ್ಯಾಸ, ವಾಲ್ಮೀಕಿಗಳ ತಿರುಳ್ಗನ್ನಡ ನಾಡಾದ ಈ ಸೀಮೆಯಲ್ಲಿ ಕನ್ನಡ ನುಡಿಯು ಹಿಂದೆಬಿದ್ದು ಮರಾಠಿ ಭಾಷೆಯು ಬೆಳೆಯಹತ್ತಿತು..." 1

"ಓದಿದರೆ ಮರಾಠಿ ಪುಸ್ತಕಗಳನ್ನೇ ಓದಬೇಕು; ತರಿಸಿದರೆ ಮರಾಠಿ ವರ್ತಮಾನ ಪತ್ರಿಕೆಗಳನ್ನೇ ತರಿಸಬೇಕು; ನೋಡಿದರೆ

ಮರಾಠಿ ನಾಟಕಗಳನ್ನೇ ನೋಡಬೇಕು; ಕೇಳಿದರೆ ಮರಾಠಿ ಹಿಂದೂಸ್ತಾನಿ ಸಂಗೀತವನ್ನೇ ಕೇಳಬೇಕು" ಎನ್ನುವ ವಾತಾವರಣದಲ್ಲಿ ಕನ್ನಡದ ಜಾಗೃತಿ ಮೂಡಿಸಲು ಡೆಪ್ಯುಟಿ ಚೆನ್ನಬಸಪ್ಪ, ಚುರಮುರಿ ಶೇಷಗಿರಿರಾಯರು, ಗಂಗಾಧರ ತುರಮರಿ, ಶಾಂತವೀರ ಕಿತ್ತೂರ, ವೆಂಕಟರಂಗೋಕಟ್ಟಿ, ಧೊಂಡೊನರಸಿಂಹ ಮುಳಬಾಗಲ, ವೆಂಕಟರಮಣಶಾಸ್ತ್ರೀ ಸೂರಿ, ರಾಮಚಂದ್ರ ದೇಶಪಾಂಡೆ, ಕೆರೂರ ವಾಸುದೇವಾಚಾರ್ಯ, ಆಲೂರ ವೆಂಕಟರಾಯರು, ಮುದವೀಡು ಕೃಷ್ಣರಾಯರು ಮುಂತಾದ ಕನ್ನಡದ ಕಟ್ಟಾಳುಗಳು ಕತೆ ಕಾದಂಬರಿ ಬರೆದು, ಪತ್ರಿಕೆಗಳನ್ನು ಆರಂಭಿಸಿ, ಗ್ರಂಥಾಲಯಗಳನ್ನು ತೆರೆದು, ಕನ್ನಡ ಸಂಘ ಸಂಸ್ಥೆಗಳನ್ನು ಕಟ್ಟಿ ಜನರಲ್ಲಿ ಕನ್ನಡ ಓದುವ ಬರೆಯುವ ಪ್ರವೃತ್ತಿ ಉಂಟುಮಾಡಿದರು. 2 ಶಾಂತಕವಿ ಆ ಕೆಲಸವನ್ನು ನಾಟಕಗಳ ಮೂಲಕ ಮಾಡಿದರು.

**ಶಾಂತಕವಿ ಅಲಿಯಾಸ್ ಸಕ್ಕರಿ ಬಾಳಾಚಾರ್ಯ**

ಶಾಂತಕವಿ ಎಂಬುದು ಸಕ್ಕರಿ ಬಾಳಾಚಾರ್ಯರ ಕಾವ್ಯನಾಮ. ಈಗಿನ ಹಾವೇರಿ ಜಿಲ್ಲೆ ಹಿರೇಕೆರೂರು ತಾಲ್ಲೂಕು ಸಾತೇನಹಳ್ಳಿಯವರು. ಪ್ರಾಥಮಿಕ ಶಾಲಾ ಶಿಕ್ಷಕರಾಗಿದ್ದರು. "ಕನ್ನಡ ನಾಡಿನಿರವನು ಕಂಡರೆದೆಯೊಡೆದು ನೀರಾಗುತಿಹುದಕ್ಕಟಾ!" ಎಂದು ಉದ್ಗರಿಸಿ ಅಂದಿನ ಕನ್ನಡ ಪರಿಸ್ಥಿತಿಗೆ ಮಮ್ಮಲ ಮರುಗಿದ ಶಾಂತಕವಿಗಳು 'ನಾಟಕಾವಲೋಕನ' ಎಂಬ ಪದ್ಯದಲ್ಲಿ ಅಂದಿನ ಕನ್ನಡದ ಉಸಿರುಕಟ್ಟಿದ ಪರಿಸ್ಥಿತಿಯನ್ನು ವಿಧವಿಧವಾಗಿ ಬಣ್ಣಿಸಿದ್ದಾರೆ. ಶಾಂತಕವಿಗಳು ನಾಟಕಗಳನ್ನು ಬರೆದರು, ಯುವಕರನ್ನು ಸಂಘಟಿಸಿದರು. ಮರಾಠಿ ನಾಟಕಗಳ ಆಕ್ರಮಣದ ವಿರುದ್ಧ ಬಂಡಾಯವನ್ನೇ ಸಾರಿದರು. ಶ್ರೀವೀರನಾರಾಯಣ ಪ್ರಸಾದಿತ ಕೃತಪುರ ನಾಟಕ ಮಂಡಳಿ, ಗದಗ ಎಂಬ ಸಂಸ್ಥೆಯನ್ನು ಯುವ ಕಲಾವಿದರ ನೆರವಿನಿಂದ 1872 ರಲ್ಲಿ ಹುಟ್ಟುಹಾಕಿ 'ಉಷಾಹರಣ' ನಾಟಕ ಬರೆದು ಆಡಿಸಿದರು. ಕನ್ನಡ ವೃತ್ತಿರಂಗಭೂಮಿಗೆ ನಾಂದಿ ಹಾಡಿದ ಘಟನೆ ಇದು. ಅಂತೆಯೇ ನಾವು 1872 ನ್ನು ವೃತ್ತಿರಂಗಭೂಮಿಯ ಆರಂಭ ಎಂದು ಕರೆಯುತ್ತೇವೆ.


'ಸಿಂಧೂರ ಲಕ್ಷ್ಮಣ' ನಾಟಕದಲ್ಲಿ ಸಿಐಡಿ ವಿಯೋಲನಾಗಿ ಮಾಲತಿಶ್ರೀ ಮೈಸೂರು ಮತ್ತು ಗಾರ್ಮನ್‌ಆಗಿ ಮಹಾಂತೇಶ ಮಾಟೂರ

ಸಂದೋಪಸುಂದ, ವತ್ಸಲಾಹರಣ, ಶ್ರೀಯಾಳಸತ್ಯ, ಕೀಚಕವಧ, ವಿರಾಟಪರ್ವ, ಸುಧನ್ವ ಕಾಳಗ, ಸೀತಾರಣ್ಯ ಪ್ರವೇಶ, ಚಂದ್ರಾವಳಿ ಚರಿತ್ರೆ, ಪಾರ್ವತಿ ಪರಿಣಯ ಮುಂತಾದ 26 ನಾಟಕಗಳು, 9 ಕವನ ಸಂಕಲನಗಳು, ಶಾಸ್ತ್ರ ಕೀರ್ತನ ಗ್ರಂಥಗಳು ಸೇರಿದಂತೆ 50 ಕ್ಕೂ ಅಧಿಕ ಕೃತಿಗಳನ್ನು ಶಾಂತಕವಿಗಳು ಹೊರತಂದರು. ಅವರು ರಚಿಸಿದ ಹಲವು ನಾಟಕಗಳು ಕೃತಪುರ ನಾಟಕ ಮಂಡಳಿಯ ಮೂಲಕ ಗದಗ, ಹಾವೇರಿ, ಧಾರವಾಡ, ಬೆಳಗಾವಿ ಪ್ರಾಂತ್ಯಗಳಲ್ಲಿ ಪ್ರಯೋಗಗೊಂಡವು. ಬ್ರಿಟಿಷರ ಸಾಮ್ರಾಜ್ಯಶಾಹಿ, ಮರಾಠರ ಆಕ್ರಮಣಶೀಲತೆ ವಿರುದ್ಧದ ಅಂಶಗಳನ್ನು ನಾಟಕಗಳು ಒಳಗೊಂಡಿರುವ ಜತೆಗೆ ಕನ್ನಡದ ಪುರಾಣ ಪುಣ್ಯಕತೆಗಳ ಸಾರವನ್ನು ಉಣಬಡಿಸುವ ಕೃತಿಗಳಾಗಿದ್ದವು.

**ಬಯಲಾಟದ ಸುಧಾರಿತ ರೂಪ**

ಅಂದು ಪ್ರಚಲಿತವಿದ್ದ ಕನ್ನಡ ಬಯಲಾಟಗಳ ಭವ್ಯತೆಯ ಅಂಶಗಳಿಗೆ ಬದಲಾದ ಸೌಮ್ಯರೂಪ, ಹಿತಮಿತ ಮಾತು, ಹಾಡು, ಕುಣಿತ ಪ್ರೇಕ್ಷಕರಿಗೆ ಹೊಸದೆನಿಸಿತು, ಹಿಡಿಸಿತು. ಇಂತಹ ಹೊಸದನ್ನು ಆವರೆಗೆ ಮರಾಠಿ ನಾಟಕಗಳಲ್ಲಿ ಮಾತ್ರ ಕಂಡಿದ್ದ ಅಂದಿನ ಪ್ರೇಕ್ಷಕರಿಗೆ ಕನ್ನಡ ನಾಟಕದಲ್ಲೂ ಸೊಗಸಿದೆಯಲ್ಲ ಎಂದೆನಿಸಿತು ಎಂದು ರಾಮಕೃಷ್ಣ ಮರಾಠೆ ಅವರು 'ರಂಗಭೂಮಿಯ ಕನ್ನಡ ಸಂವೇದನೆ' ಎಂಬ ತಮ್ಮ ಪುಸ್ತಕದಲ್ಲಿ ಪ್ರಸ್ತಾಪಿಸುತ್ತಾರೆ.

ಚುರಮುರಿ ಶೇಷಗಿರಿರಾಯರು ಕಾಳಿದಾಸನ 'ಶಾಕುಂತಲ'ವನ್ನು 1870 ರಲ್ಲಿ ಕನ್ನಡಕ್ಕೆ ತಂದುದು ಮಹತ್ವದ ಘಟನೆ. ಮೈಸೂರಿನಲ್ಲಿ ಬಸವಪ್ಪಶಾಸ್ತ್ರಿಗಳು ಕನ್ನಡಕ್ಕೆ ತಂದ 'ಶಾಕುಂತಲಾ' ನಾಟಕ ಹಳೇಮೈಸೂರು ಭಾಗದ ವೃತ್ತಿರಂಗಭೂಮಿಯ ಮೊದಲ ನಾಟಕವಾದರೆ; ಚುರಮುರಿಯವರ ನಾಟಕವು ಶಾಂತಕವಿಗಳ ನಂತರ ಕನ್ನಡ ಆಧುನಿಕ (ವೃತ್ತಿ) ನಾಟಕದ ಮುಂದುವರಿಕೆ ಮಾತ್ರವಲ್ಲ– ಮರಾಠಿ ವೃತ್ತಿರಂಗಭೂಮಿಯಲ್ಲಿ ವೈಭವದ ಯುಗ ಶುರುವಾಗಲು ಕಾರಣವಾಗುತ್ತದೆ. ದೇಸೀ ದಾಟಿಗಳ ಹಾಡುಗಾರಿಕೆ ಹಾಗೂ ಧಾರವಾಡ ಪ್ರದೇಶದ ಸರಳವಾದ ಆಡುನುಡಿಯ ಬಳಕೆಯು ನಾಟಕ ಬಹುಬೇಗ ಜನಪ್ರಿಯವಾಗಲು ಕಾರಣವಾಗುತ್ತದೆ. ಮರಾಠಿಯ ಮೇಲೆ ಗಾಢ ಪ್ರಭಾವ ಬೀರುತ್ತದೆ. ಮರಾಠಿ ವೃತ್ತಿರಂಗಭೂಮಿಯ ಪಿತಾಮಹನೆಂದು ಬಣ್ಣಿಸಲ್ಪಟ್ಟ ಅಣ್ಣಾಸಾಹೇಬ ಕಿರ್ಲೊಸ್ಕರ್ ಅವರು 1880 ರ ಅಕ್ಟೋಬರ್ 31 ರಂದು ಪುಣೆಯಲ್ಲಿ 'ಶಾಕುಂತಲ' ನಾಟಕದ ಅದ್ದೂರಿ ಪ್ರದರ್ಶನದಿಂದ ನಾಂದಿ ಹಾಡುತ್ತಾರೆ. (ಮರಾಠಿ ವೃತ್ತಿರಂಗಭೂಮಿಯ ಪ್ರಭಾವದಿಂದ ಕನ್ನಡ ವೃತ್ತಿರಂಗಭೂಮಿ ಆರಂಭವಾಯಿತು ಎಂದು ಬಹಳ ದಿನಗಳ ಕಾಲ ಹೇಳಿಕೊಂಡು ಬರಲಾಗುತ್ತಿತ್ತು. ಆದರೆ 1842 ರಲ್ಲಿ ಸಾಂಗಲಿಯಲ್ಲಿ ಪ್ರದರ್ಶನವಾದ ಯಕ್ಷಗಾನವನ್ನು ನೋಡಿ




'ಕಿತ್ತೂರು ಚೆನ್ನಮ್ಮ' ನಾಟಕದಲ್ಲಿ ಚೆನ್ನಮ್ಮಳಾಗಿ ಪ್ರೇಮಾ ಗುಳೇದಗುಡ್ಡ ಹಾಗೂ ಥ್ಯಾಕರೆಯಾಗಿ ಲಕ್ಷ್ಮೇಶ್ವರ ಶಿವಯ್ಯ

ಅದರಿಂದ ಪ್ರಭಾವಿತರಾದ ವಿಷ್ಣುದಾಸ ಭಾವೆಯವರು ಮರಾಠಿಯಲ್ಲಿ 'ಸೀತಾ ಸ್ವಯಂವರ' ಬರೆದು ಪ್ರದರ್ಶಿಸಿದರು. ಇಲ್ಲಿಂದಲೇ ಮರಾಠಿ ವೃತ್ತಿರಂಗಭೂಮಿಯ ಉದಯ ಎಂದು ಇತ್ತೀಚಿನ ಸಂಶೋಧನೆಗಳು ಹೇಳುತ್ತಿವೆ. ವೃತ್ತಿರಂಗಭೂಮಿಗೆ ಅಸ್ತಿಭಾರ ಹಾಕಿದ್ದು ಮರಾಠಿ ಮೊದಲು, ಕನ್ನಡ ಮೊದಲು ಎಂದು ಹೇಳುವ ಬದಲು ಪರಸ್ಪರ ಪ್ರಭಾವಕ್ಕೊಳಗಾದವು ಎಂದು ಹೇಳುವುದೇ ಸರಿ.)

ಕನ್ನಡದ ಬಯಲಾಟಗಳು ಪಂಜುಗಳ ಬೆಳಕಿನಲ್ಲಿ ನಡೆಯುತ್ತಿದ್ದವು. ಮರಾಠಿ ನಾಟಕಗಳು ಪರದೆಗಳನ್ನು ಬಳಸಿದ ಸಭಾಭವನ ಅಥವಾ ರಂಗಮಂದಿರದೊಳಗೆ ಪ್ರದರ್ಶನ ಕಾಣುತ್ತಿದ್ದವು. ಇದು ಕನ್ನಡಿಗರಿಗೆ ಹೊಸದು. ಮರಾಠಿಗರ ದಬ್ಬಾಳಿಕೆ ಹೆಚ್ಚಿದಾಗ ನಾವೇನು ಕಡಿಮೆ ಎಂಬಂತೆ ನಾಡಿನ ಜಾಗೃತಿ ಕಾರಣಕ್ಕೆ ಕನ್ನಡದಲ್ಲೂ ಸ್ವತಂತ್ರವಾದ ನಾಟಕಗಳು ಮೂಡಿಬಂದವು. ಬ್ರಿಟಿಷರು ಕೊಲ್ಕತ್ತಾದಲ್ಲಿ ಪ್ರೊಸಿನಿಯಂ (ಅಂದರೆ ಒಂದು ಕಡೆ ನಾಟಕ ಪ್ರಯೋಗ ಅದರ ಎದುರಿಗೆ ಪ್ರೇಕ್ಷಕರ ಸಭಾಂಗಣ) ರಂಗಮಂದಿರದ ನಾಟಕಗಳ ಪ್ರಯೋಗಗಳನ್ನು 19 ನೇ ಶತಮಾನದಲ್ಲಿ ಆರಂಭಿಸಿ ನಂತರ ಅವು ಮುಂಬಯಿಗೆ ಬಂದು ಅಲ್ಲಿಂದ ಕನ್ನಡ ನಾಡಿಗೆ ಬಂದವು. ಮುಂಬಯಿ ನಗರದ ಪಾರ್ಸಿ ಜನಾಂಗದವರು ಇಂತಹ ನಾಟಕಗಳಿಗೆ ಕಮರ್ಷಿಯಲ್ ಸ್ವರೂಪದ ವ್ಯವಸ್ಥಿತ ರೂಪ ಕೊಟ್ಟಾಗ ಅವೇ ಕಂಪನಿ ನಾಟಕಗಳಾದವು. ಈ ಕಂಪನಿ ನಾಟಕಗಳು ಅಂದರೆ ಬ್ರಿಟಿಷರಿಂದ ಭಾರತಕ್ಕೆ ಬಂದ ರಂಗತಂತ್ರ ಬ್ರಿಟಿಷರ ವಿರುದ್ಧವೇ ಸ್ವಾತಂತ್ರ್ಯ ಹೋರಾಟಕ್ಕೆ ಹಾಗೂ ಕರ್ನಾಟಕ ಏಕೀಕರಣಕ್ಕೆ ಅಸ್ತ್ರವಾಗಿದ್ದು ಕುತೂಹಲಕರ ಬೆಳವಣಿಗೆ.

**ಮೈಸೂರು ಪ್ರಾಂತ್ಯದಲ್ಲಿ ಮುಂದುವರಿಕೆ**

ಉತ್ತರ ಕರ್ನಾಟಕದಲ್ಲಿ ಮರಾಠಿ ನಾಟಕಗಳನ್ನು ಹಿಮ್ಮೆಟ್ಟಿಸಿದಾಗ ಅವು ದಕ್ಷಿಣ ಕರ್ನಾಟಕದತ್ತ ಮುಖ ಮಾಡಿದವು. 1875 ರ ಸುಮಾರಿನಲ್ಲಿ ಮರಾಠಿಗರು ಮೈಸೂರು ಅರಸರ ಅರಮನೆಗಳಲ್ಲಿ ಬಂದು ನಾಟಕ ಪ್ರದರ್ಶನ ನೀಡತೊಡಗಿದರು. ಕಲೆ, ಸಾಹಿತ್ಯಕ್ಕೆ ಅಪಾರ ಪ್ರೋತ್ಸಾಹ ನೀಡುತ್ತಿದ್ದ ಮೈಸೂರು ರಾಜರು ತಮ್ಮ ಆಸ್ಥಾನದಲ್ಲಿ ಅದಾಗಲೆ ಸಂಗೀತ, ನೃತ್ಯ ಮತ್ತು ಯಕ್ಷಗಾನ ಪ್ರದರ್ಶನಗಳಿಗೆ ಯಥೇಚ್ಛ ಅವಕಾಶ ನೀಡಿದ್ದರು. ಜತೆಗೆ ಈ ಹೊಸ ಪ್ರಕಾರವನ್ನು ತೆರೆದ ಮನಸ್ಸಿನಿಂದ ಪ್ರೋತ್ಸಾಹಿಸಿದರು. ಪರದೆಗಳನ್ನು ಇಳಿಬಿಟ್ಟು ನಾಟಕವಾಡುವ ಕ್ರಮ, ಢಾಳಾದ ಮೇಕಪ್, ಆಕರ್ಷಕ ಉಡುಪು– ಮೈಸೂರು ಭಾಗದವರಿಗೂ ಹೊಸದೆನಿಸಿತು. ಮೈಸೂರು ಆಸ್ಥಾನದ ಪ್ರೇಕ್ಷಕರಿಗೆ ಮರಾಠಿ ನಾಟಕಗಳು ಹಿಡಿಸಿಬಿಟ್ಟವು. ನೋಡಲು ಮುಗಿಬಿದ್ದರು. ಅಂತೆಯೇ ಮರಾಠಿ ನಾಟಕಗಳು ಸಾಲುಗಟ್ಟಿದವು.

ಕನ್ನಡ ನಾಟಕಗಳನ್ನು ಹೀಗೆಯೇ ಮಾಡಬಹುದು ಎನಿಸಿತು ಇಲ್ಲಿನ ಮಧ್ಯಮವರ್ಗದ ಶಿಕ್ಷಿತ ರಂಗಕರ್ಮಿಗಳಿಗೆ. ಸಿ.ಆರ್.ರಘುನಾಥರಾಯರ ನೇತೃತ್ವದಲ್ಲಿ 'ಶ್ರೀ ಶಾಕುಂತಲಾ ಕರ್ನಾಟಕ ನಾಟಕ ಸಭಾ' 1879 ರಲ್ಲಿ ಸ್ಥಾಪನೆಯಾಯಿತು. ಇದರ ಬೆನ್ನಿಗೆ ಚಾಮರಾಜೇಂದ್ರ ಒಡೆಯರು 1980 ರಲ್ಲಿ 'ಶ್ರೀಚಾಮರಾಜೇಂದ್ರ ಕರ್ನಾಟಕ ನಾಟಕ ಸಭಾ' ಆರಂಭಿಸಿದರು.

ಉತ್ತರ ಕರ್ನಾಟಕದ ಶಾಂತಕವಿಗಳ ಕೃತಪುರ ನಾಟಕ ಮಂಡಳಿ, ಮೈಸೂರರಸರ ಚಾಮರಾಜೇಂದ್ರ ನಾಟಕ ಸಭಾ ಹೊಸ ಪ್ರಕಾರಕ್ಕೆ ನಾಂದಿ ಹಾಡಿದ್ದವು. ಕನ್ನಡದ ಜಾಗೃತಿಗೆ ಅಪಾರ ಕೆಲಸ ಮಾಡಿದವು. ಆದರೆ ಅವಿನ್ನೂ ವ್ಯವಸಾಯಿಕ ಶಿಸ್ತನ್ನು ಪಡೆದಿರಲಿಲ್ಲ.



'ಸುರಪುರ ವೆಂಕಟಪ್ಪ ನಾಯಕ' ನಾಟಕದಲ್ಲಿ ತಾಯಿ ಈಶ್ವರಮ್ಮಳಾಗಿ ಮರಿಯಮ್ಮನಹಳ್ಳಿ ಹನುಮಕ್ಕ ಹಾಗೂ ದಿವಾನನಾಗಿ ವೈ.ಎನ್.ಹನುಮಯ್ಯ

ಪೂರ್ಣ ಪ್ರಮಾಣದ ವೃತ್ತಿ ನಾಟಕ ಕಂಪನಿಯಾಗಿ ಮೊದಲು ಅಸ್ತಿತ್ವಕ್ಕೆ ಬಂದದ್ದು ಬೆಳಗಾವಿ ಜಿಲ್ಲೆ ಕೊಣ್ಣೂರಿನ ಶಿವಮೂರ್ತಿಸ್ವಾಮಿ ಕಣಬುರ್ಗಿಮಠ ಅವರು ಸ್ಥಾಪಿಸಿದ ಶ್ರೀ ಕಾಡಸಿದ್ದೇಶ್ವರ ಸಂಗೀತ ನಾಟಕ ಮಂಡಳಿ (1901–1922). ಮಹಿಳೆಯರ ರಂಗ ಪ್ರವೇಶಕ್ಕೆ ಮೊಟ್ಟಮೊದಲ ಬಾರಿಗೆ ಅನುವು ಮಾಡಿಕೊಟ್ಟು; ಟ್ರಾನ್ಸ್‌ಫರ್ ಸೀನರಿಗಳ ಜೋಡಣೆ ಮಾಡಿ; ಡೈನಮೊ ಮೂಲಕ ವಿದ್ಯುದೀಪ ಬೆಳಗಿಸಿ; ವೇಷಭೂಷಣಗಳಲ್ಲಿ ನಾವಿನ್ಯ ತಂದು –ಹೀಗೆ ಹಲವು ಪ್ರಥಮಗಳ ದಾಖಲೆ ಮಾಡಿದ ಈ ನಾಟಕ ಮಂಡಳಿ ಒಂದು ಪರಿಪೂರ್ಣ ರಂಗ ಪ್ರಯೋಗಕ್ಕೆ ಬೇಕಾದ ಎಲ್ಲ ಸವಲತ್ತುಗಳನ್ನು ರಂಗದ ಮೇಲೆ ತಂದು ಕ್ರಾಂತಿಯನ್ನೆ ಮಾಡಿತು. ಕಲಾವಿದರು, ನೇಪಥ್ಯ ರಂಗಕರ್ಮಿಗಳ ಹತ್ತಾರು ಮಂದಿಯನ್ನು ಕಟ್ಟಿಕೊಂಡು ಸತತವಾಗಿ ಒಂದೂರಿನಿಂದ ಮತ್ತೊಂದೂರಿಗೆ ಕ್ಯಾಂಪ್ ಮಾಡುವ ಪರಿಪಾಠ ಹಾಕಿಕೊಟ್ಟ ನಾಟಕ ಮಂಡಳಿ ಇದು. ಹೀಗಾಗಿ ಪೂರ್ಣ ಪ್ರಮಾಣದ ಮೊದಲ ನಾಟಕ ಕಂಪನಿ ಇದೇ ಆಗಿದೆ. ಈ ಪರಿಪಾಠ ಉತ್ತರ ಕರ್ನಾಟಕ ಹಾಗೂ ಹಳೇಮೈಸೂರು ಎರಡೂ ಭಾಗದಲ್ಲೂ ಮುಂದುವರಿಯಿತು. ಮುಂದಿನ ಒಂದು ಶತಮಾನದ್ದು ವೃತ್ತಿರಂಗಭೂಮಿಯ ಉಜ್ವಲ ಇತಿಹಾಸ.

ಹೊಸದೊಂದು ರಂಗಪ್ರಕಾರ ಉದಯಿಸಿತು. ಆಧುನಿಕ ಕನ್ನಡ ನಾಟಕ ಪರಂಪರೆ ಎಂದು ಕರೆಸಿಕೊಂಡಿತು. ವ್ಯವಸಾಯಿ ಶಿಸ್ತನ್ನೂ ಪಡೆಯಿತು. ಈ ಎಲ್ಲ ಚಟುವಟಿಕೆಗಳ ಉದ್ದೇಶ ನವೀನ ರಂಗತಂತ್ರವನ್ನು ಕಟ್ಟಿಕೊಡುವುದಷ್ಟೇ ಆಗಿರಲಿಲ್ಲ, ಕನ್ನಡ ಭಾಷೆಯ ಬಗ್ಗೆ ಜಾಗೃತಿ ಮೂಡಿಸುವುದು ಬಹಳ ಪ್ರಮುಖವಾಗಿತ್ತು. ಮಂಡ್ಯ, ಮೈಸೂರಿನಲ್ಲಿ ಶುರುವಾದ ಶ್ರೀಚಾಮುಂಡೇಶ್ವರಿ ಕರ್ನಾಟಕ ನಾಟಕ ಸಭಾ ಸೇರಿದಂತೆ ಎಲ್ಲ ನಾಟಕ ಕಂಪನಿಗಳ ಪ್ರಯೋಗಗಳಲ್ಲಿ ಕನ್ನಡದ ಜಾಗೃತಿ ಉಂಟುಮಾಡುವ ಕೆಲಸ ಅವ್ಯಾಹತವಾಗಿ ನಡೆಯುತ್ತಿತ್ತು. ಬೆಂಗಳೂರಿನ ಎ.ವಿ.ವರದಾಚಾರ್ಯರ ಕಂಪನಿಗೆ ರಚಿಸಿಕೊಟ್ಟ ಸಾಮಾಜಿಕ ನಾಟಕ 'ನಿರುಪಮಾ'ದ ಪ್ರಸ್ತಾವನೆಯಲ್ಲಿ ನಂಜನಗೂಡು ಶ್ರೀಕಂಠಶಾಸ್ತ್ರಿಗಳು, "ಕರ್ನಾಟಕ ಭಾಷೆಯನ್ನು ಅಭಿವೃದ್ಧಿಪಡಿಸುವುದರಲ್ಲಿ ಬದ್ಧವಾಗಿರುವ ಶ್ರೀಮನ್ಮಹಾರಾಜಾ ಶ್ರೀಕೃಷ್ಣರಾಜ ಒಡೆಯರ್ ಬಹದ್ದೂರ್ ಅವರ ಪ್ರೋತ್ಸಾಹ ಬಲದಿಂದ ಕರ್ನಾಟಕ ಗ್ರಂಥರಚನಾತತ್ಪರನಾಗಿರುವ ನಾನು 'ನಿರುಪಮಾ' ಎಂಬೀ ಪ್ರಕರಣವನ್ನು ಪಠನಾಭಿನಯಗಳಿಗೆ ಅನುಕೂಲವಾಗುವಂತೆ ವಿರಚಿಸಿ ಕನ್ನಡಿಗರ ಪರಾಮರ್ಶಕ್ಕೆ ತಂದೊಪ್ಪಿಸಿರುವೆನು." –

**ಕರ್ನಾಟಕ ಏಕೀಕರಣಕ್ಕೆ ಕನ್ನಡ ನೆಲವನ್ನು ಹದಗೊಳಿಸುವ ಕೆಲಸವನ್ನು ನಾಟಕಗಳು ದೊಡ್ಡ ಪ್ರಮಾಣದಲ್ಲಿ ಮಾಡಿದವೆನ್ನಬಹುದು. ಶಾಂತಕವಿಗಳು ನೆಟ್ಟ ಬೀಜ ಸಸಿಯಾಗಿ, ಮರವಾಗಿ ಬೆಳೆಯಿತು. ಅದು ಹೆಮ್ಮರದ ರೂಪ ತಾಳಿದ್ದು ಕರ್ನಾಟಕ ಏಕೀಕರಣಕ್ಕೆ ತುಸು ಮುಂಚೆ. ಅಂತೆಯೇ ಕನ್ನಡ ರಂಗಭೂಮಿ ಏಕೀಕರಣ ಚಳವಳಿಗೆ ಸೂಕ್ತವಾಗಿ ಸ್ಪಂದಿಸಿತು.**

ವರದಾಚಾರ್ಯರ ಅಭಿನಯ ಕೌಶಲ ಮತ್ತು ಕಂದವೃತ್ತಗಳನ್ನು ಹಾಡುತ್ತಿದ್ದ ಸೊಗಸು ಕನ್ನಡ ಭಾಷೆಯ ಅಂದವನ್ನು ಹೆಚ್ಚಿಸಿತು. ಮುಂದೆ ಬಂದ ಬಹುದೊಡ್ಡ ನಟ ಪರಂಪರೆ ಕನ್ನಡದ ಜಾಗೃತಿಯನ್ನು ತೀವ್ರಗೊಳಿಸಲು ಸಹಕಾರಿಯಾಯಿತು.

**ಸ್ವತಂತ್ರಕೃತಿ, ರೂಪಾಂತರದಲ್ಲಿ ಕನ್ನಡ ಜಾಗೃತಿ**

ಅನುವಾದ, ರೂಪಾಂತರಗಳಿಗೆ ಬದಲಾಗಿ ಕನ್ನಡದ್ದೇ ಸ್ವತಂತ್ರ ಕೃತಿಗಳು ಮೂಡಿಬರಬೇಕು ಎಂದು ಹಲವು ನಾಟಕಕಾರರು ಬಯಸಿದ್ದರು. ಉದಾಹರಣೆ ನೋಡುವುದಾದರೆ ನಂಜನಗೂಡು ಶ್ರೀಕಂಠಶಾಸ್ತ್ರಿಗಳು 'ಕನಕಲತಾ ಪರಿಣಯ' ಎಂಬ ಮತ್ತೊಂದು ಹೊಸ ನಾಟಕದ ಮುನ್ನುಡಿಯಲ್ಲಿ ಹೀಗೆ ಬರೆಯುತ್ತಾರೆ:

"ಇದುವರೆಗೆ ಕರ್ನಾಟಕ ಭಾಷೆಯಲ್ಲಿ ವಿರಚಿತವಾಗಿರುವ ನಾಟಕಗಳೆಲ್ಲವೂ ಸಂಸ್ಕೃತ ಮತ್ತು ಇಂಗ್ಲಿಷ್ ಭಾಷಾಂತರಗಳಾಗಿರುವುದಲ್ಲದೆ ಮತ್ತೆ ಬೇರೆ ಅಲ್ಲ. ಈಗ ನಾನು ಕರ್ನಾಟಕ ಭಾಷೆಯಲ್ಲಿ ನಾಟಕ ರಚನೆಯೇ ಇಲ್ಲವೆಂಬ ಕೊರತೆಯನ್ನು ಹೋಗಲಾಡಿಸ ಬೇಕೆಂದುದ್ಯುಕ್ತನಾಗಿ 'ಕನಕಲತಾ ಪರಿಣಯ' ಎಂಬ ನಾಟಕವನ್ನು ರಚಿಸಿರುವೆನು."4 ಇದೇ ಧಾಟಿಯ ಮಾತುಗಳು ಹಲವು ನಾಟಕಕಾರರ ಮುನ್ನುಡಿಯಲ್ಲಿ ಬರುತ್ತವೆ. ಅಂತೆಯೇ ಅನುವಾದ, ರೂಪಾಂತರಗಳನ್ನು ರಚಿಸುವ ಜತೆಗೆ ಸ್ವತಂತ್ರ ನಾಟಕಗಳನ್ನೂ ರಚಿಸಿದರು. ನಾಟಕ ಸ್ವತಂತ್ರವಾಗಿರಲಿ ಅಥವಾ ಇಂಗ್ಲಿಷ್ ಮತ್ತು ಸಂಸ್ಕೃತದ ಅನುವಾದ, ರೂಪಾಂತರ ಏನೇ ಆಗಿರಲಿ– ಅವೆಲ್ಲ ಕನ್ನಡ ಕಟ್ಟುವ ಕೆಲಸವನ್ನು ಮಾಡಿದವು. ನಾಟಕಕಾರರು ಮಾತ್ರವಲ್ಲ. ನಟ ನಟಿಯರೂ ಕನ್ನಡಪ್ರಜ್ಞೆ ಜಾಗೃತಗೊಳಿಸುವ ಕೆಲಸ ಮಾಡಿದರು. ಅಂತಹ ಹೇರಳ ಸಂಭಾಷಣೆಗಳನ್ನು ನುಡಿಯುತ್ತಿದ್ದರು. ಮೂಲಕೃತಿಯಲ್ಲಿ ಇಲ್ಲದಿದ್ದರೂ ಕೆಲವೊಮ್ಮೆ ಸಂದರ್ಭೋಚಿತವಾಗಿ ಕನ್ನಡ ಪರ ಮಾತುಗಳನ್ನು ಆಡಿ ಕನ್ನಡ ನಾಟಕಗಳನ್ನು ಬೆಳೆಸುತ್ತಿದ್ದರು. ಇವು ನಾಟಕವನ್ನು ಕಳೆಗಟ್ಟಿಸಿದವು. ಸ್ಪಷ್ಟ ಉಚ್ಚಾರಣೆ, ಅಸ್ಖಲಿತ ಮಾತುಗಾರಿಕೆಯೂ ಕನ್ನಡ ಭಾಷೆಯ ಬಗ್ಗೆ ಪ್ರೇಕ್ಷಕರಲ್ಲಿ ಹೆಮ್ಮೆ ಮೂಡಿಸಿದವು. ಆ ಕಾಲಕ್ಕೆ ಜಾನಪದ ಹೊರತುಪಡಿಸಿದರೆ–ರಂಗಭೂಮಿ ಎಂದರೆ ವೃತ್ತಿರಂಗಭೂಮಿ ಒಂದೇ ಆಗಿತ್ತು.

ನಾಟಕ ಪೌರಾಣಿಕ ಇರಲಿ, ಐತಿಹಾಸಿಕ ಇರಲಿ, ಸಾಮಾಜಿಕ ಇರಲಿ ಕನ್ನಡಜಾಗೃತಿ ಬಗ್ಗೆ ಸಾಕಷ್ಟು ಸಂಭಾಷಣೆಗಳಿರುತ್ತಿದ್ದವು. ಕಿತ್ತೂರು ಚೆನ್ನಮ್ಮ, ಸಂಗೊಳ್ಳಿ ರಾಯಣ್ಣ, ಸಿಂಧೂರ ಲಕ್ಷ್ಮಣ, ಎಚ್ಚಮ ನಾಯಕ ಮುಂತಾದ ಐತಿಹಾಸಿಕ ನಾಟಕಗಳೂ ಕನ್ನಡ ಜಾಗೃತಿ ಮೂಡಿಸಿದವು. ಇತಿಹಾಸ ಘಟನೆಯನ್ನು ಸಾದರಪಡಿಸುವ ಜತೆಗೆ ಬ್ರಿಟಿಷರ ವಿರುದ್ಧ ಹೋರಾಟ ರೂಪಿಸುವಲ್ಲಿ ಈ ಎಲ್ಲ ನಾಟಕಗಳು ಪ್ರತ್ಯಕ್ಷವಾಗಿ ಪರೋಕ್ಷವಾಗಿ ಕೆಲಸಮಾಡಿದವು. ಸ್ವಾತಂತ್ರ್ಯ ಹೋರಾಟ ಮಾತ್ರವಲ್ಲ, ಕನ್ನಡ ಭಾಷಾ ಬೆಳವಣಿಗೆಗೆ ಪ್ರೇಕ್ಷಕರನ್ನು ಹುರಿದುಂಬಿಸುತ್ತಿದ್ದವು. ಕನ್ನಡಿಗರ ಕುರಿತ ಕೆಚ್ಚೆದೆಯ ಮಾತುಗಳು ನೋಡುಗರನ್ನು ರೋಮಾಂಚಿತಗೊಳಿಸುತ್ತಿದ್ದವು. ನಾಡು ನುಡಿ ರಕ್ಷಣೆಗೆ ಪಣ ತೊಡಲು ಪ್ರೇರೇಪಿಸುತ್ತಿದ್ದವು.



'ಎಚ್ಚಮ ನಾಯಕ'ನಾಗಿ ಸಿನಿಮಾನಟ ಡಾ.ರಾಜಕುಮಾರ್ ಹಾಗೂ ತಿರುವೆಂಕಟನಾಗಿ ಮತ್ತೊಬ್ಬ ಸಿನಿಮಾನಟ ಟಿ.ಎನ್.ಬಾಲಕೃಷ್ಣ

ವೃತ್ತಿ ರಂಗಭೂಮಿ ನಾಟಕಗಳು ಬೇರೂರಿದ 1900 ರಿಂದ ಸ್ವಾತಂತ್ರ್ಯ ಸಿಗುವ 1947 ರ ವರೆಗಿನ ಎಲ್ಲ ಐತಿಹಾಸಿಕ, ಬಹುತೇಕ ಪೌರಾಣಿಕ ಸಾಮಾಜಿಕ ನಾಟಕಗಳು ಕನ್ನಡದ ಜಾಗೃತಿ ಮೂಡಿಸಿದವು. ಕನ್ನಡ ಭಾಷೆ ಆಡುವ ಪ್ರಾಂತ್ಯದುದ್ದಕ್ಕೂ ಕನ್ನಡ ಪರ ಘೋಷಣೆಗಳು ನಾಟಕದಲ್ಲಿ ಮೊಳಗಿದವು. ಆಗಿನ್ನೂ ಏಕೀಕರಣ ಆಗಿರಲಿಲ್ಲ. ಕರ್ನಾಟಕ ಎಂಬ ಕಲ್ಪನೆಯೇ ಇರಲಿಲ್ಲ. ಆದರೆ ಕನ್ನಡ ಮಾತನಾಡುವ ಎಲ್ಲೆಡೆ ಕನ್ನಡ ಜಾಗೃತಿ ಹಮ್ಮುತ್ತಿದ್ದುದು ಆಶಾದಾಯಕ ಬೆಳವಣಿಗೆ ಆಗಿತ್ತು. ಕರ್ನಾಟಕ ಏಕೀಕರಣಕ್ಕೆ ಕನ್ನಡ ನೆಲವನ್ನು ಹದಗೊಳಿಸುವ ಕೆಲಸವನ್ನು ನಾಟಕಗಳು ದೊಡ್ಡ ಪ್ರಮಾಣದಲ್ಲಿ ಮಾಡಿದವೆನ್ನಬಹುದು. ಶಾಂತಕವಿಗಳು ನೆಟ್ಟ ಬೀಜ ಸಸಿಯಾಗಿ, ಮರವಾಗಿ ಬೆಳೆಯಿತು. ಅದು ಹೆಮ್ಮರದ ರೂಪ ತಾಳಿದ್ದು ಕರ್ನಾಟಕ ಏಕೀಕರಣಕ್ಕೆ ತುಸು ಮುಂಚೆ. ಅಂತೆಯೇ ಕನ್ನಡ ರಂಗಭೂಮಿ ಏಕೀಕರಣ ಚಳವಳಿಗೆ ಸೂಕ್ತವಾಗಿ ಸ್ಪಂದಿಸಿತು.

ಏಣಗಿ ಬಾಳಪ್ಪ ಅವರು ತಮ್ಮ ಕಲಾವೈಭವ ನಾಟ್ಯಸಂಘದ ವತಿಯಿಂದ 1947 ರಲ್ಲಿ 'ಕರ್ನಾಟಕ ಏಕೀಕರಣ' ಎಂಬ ನಾಟಕವನ್ನು ಬರೆಸಿ ಹಲವು ಅಡ್ಡಿ ಆತಂಕಗಳ ಮಧ್ಯೆ ಮೂರ್ನಾಲ್ಕು ವರ್ಷ ಕಾಲ ಪ್ರದರ್ಶಿಸುತ್ತಾರೆ. ಸಾಕಷ್ಟು ನಷ್ಟವನ್ನು ಅನುಭವಿಸುತ್ತಾರೆ. ಬೆದರಿಕೆ ಪತ್ರಗಳು ಬರುತ್ತವೆ. ಇದಾವುದಕ್ಕೂ ಅವರು ಜಗ್ಗುವುದಿಲ್ಲ. ಏಕೀಕರಣಕ್ಕೆ ಮುಂಚಿತವಾಗಿಯೇ "ಕಲಾವೈಭವ ನಾಟ್ಯಸಂಘ, ಬೆಳಗಾವಿ ಜಿಲ್ಲೆ, ಕರ್ನಾಟಕ ರಾಜ್ಯ" ಎಂಬ ಫಲಕವನ್ನು ತಮ್ಮ ನಾಟಕ ಕಂಪನಿಯ ಮುಂದೆ ತೂಗುಹಾಕಿದ ಸಾಹಸಿ ಅವರು. ನಾಟಕಗಳ ಮೂಲಕ ಏಕೀಕರಣಕ್ಕೆ ಅವರು ನೀಡಿದ ಕೊಡುಗೆ ದೊಡ್ಡದು. ಅದು ಪ್ರತ್ಯೇಕ ಅಧ್ಯಯನದ ವಸ್ತು.




# ಏಕೀಕರಣ ಚಳವಳಿಯಲ್ಲಿ ಪತ್ರಿಕೆಗಳು

ಸಿ.ವಿ. ವೇದಾವತಿ

**ಕ**ರ್ನಾಟಕ ಉದಯಿಸಿ ಈಗ ಅರವತ್ತು ವರ್ಷಗಳು. ಕನ್ನಡ ಮಾತನಾಡುವ ಪ್ರದೇಶಗಳೆಲ್ಲ ಒಂದಾಗಲು ನಡೆದ ಚಳವಳಿಯಲ್ಲಿ ಪತ್ರಿಕೆಗಳ ಪಾತ್ರವೂ ಬಹು ಮಹತ್ವವಾದುದು.

ಅಕ್ಷರಗಳ ಮೊಳೆ – ಮುದ್ರಣಾಲಯ – ಇವೆಲ್ಲ ಹೊಸದಾಗಿ ಆವಿಷ್ಕಾರಗೊಂಡಿದ್ದ ಸಂದರ್ಭ ಅದು. ವ್ಯಾಪಾರಕ್ಕೆಂದು ಭಾರತಕ್ಕೆ ಒಂದು ಕೊನೆಗೆ ಭಾರತವನ್ನೇ ತನ್ನ ಆಳ್ವಿಕೆಗೆ ಇಂಗ್ಲೆಂಡ್ ಸೇರಿಸಿಕೊಂಡಿದ್ದ ದಿನಗಳು. ಮತ ಪ್ರಚಾರಕ್ಕೆಂದು ಕ್ರೈಸ್ತ ಮಿಷನರಿಗಳು ಕನ್ನಡ ಪ್ರದೇಶಗಳಿಗೆ ಬಂದು ತಳವೂರಿದವು.

ಆವರೆಗೆ ಕೇವಲ ಮೌಖಿಕವಾಗಿ ಸಾಗುತ್ತಿದ್ದ ಪ್ರಚಾರಕ್ಕೆ ಮುದ್ರಣವನ್ನು ಅಳವಡಿಸಿಕೊಂಡ ಕ್ರೈಸ್ತಮತ ಪ್ರಚಾರ ಸಂಸ್ಥೆಗಳು ಶುರುವಿನಲ್ಲಿ ಅಳವಡಿಸಿಕೊಂಡಿದ್ದು ಕಲ್ಲಚ್ಚು ಮುದ್ರಣವನ್ನು ನಂತರದ ದಿನಗಳಲ್ಲಿ ಎರಕ ಹೊಯ್ದು ತಯಾರಿಸಿದ ಮೊಳೆಗಳನ್ನು ಜೋಡಿಸಿ ಮುದ್ರಿಸುವ ಪರಿಪಾಠ ಶುರುವಾಯಿತು. ಈ ಪ್ರಯೋಗಗಳಿಂದ ಮೊದಲಿಗೆ ಹೊರಬಂದಿದ್ದು ಹಲವಾರು ಪುಸ್ತಕಗಳು. ಆಮೇಲೆ ಹುಟ್ಟಿಕೊಂಡಿದ್ದು ಪತ್ರಿಕೆಗಳು.



ಕನ್ನಡ ನೆಲದಲ್ಲಿ ಮೊಟ್ಟಮೊದಲನೆಯದಾಗಿ ಪ್ರಕಟಗೊಂಡ ಪತ್ರಿಕೆ ಮಂಗಳೂರು ಸಮಾಚಾರ (1843) ಅದೂ ಕೂಡ ಮೊದಲು ಮುದ್ರಣಗೊಂಡಿದ್ದು ಕಲ್ಲಚ್ಚಿನಲ್ಲಿ. ಆಮೇಲೆ ಮೊಳೆ ಬಳಕೆ, ಮುದ್ರಣ ಯಂತ್ರದ ಉಪಯೋಗ ಬಂತು. ಆಗ ಭಾರತೀಯರು ಪರಕೀಯರ ಆಡಳಿತವನ್ನು ಪ್ರತಿರೋಧಿಸಲು ಶುರು ಮಾಡಿದ್ದರು. ಆದರೆ ಬ್ರಿಟಿಷ್ ಆಡಳಿತ ಭಾರತೀಯ ಪ್ರತಿಭಟನೆಗಳನ್ನು ಮಣಿಸಿತು. ಒಡೆದು ಆಳುವ ನೀತಿಯನ್ನು ಎಲ್ಲೆಡೆ ಪ್ರಯೋಗಿಸಿತ್ತು. ತನ್ನ ಅನುಕೂಲಕ್ಕೆ ತಕ್ಕಂತೆ ಭಾರತವನ್ನು ತಿರುಗಿಸಲು ಆರಂಭಿಸಿತ್ತು. ಟಿಪ್ಪುಸುಲ್ತಾನ್‌ನನ್ನು ಯುದ್ಧದಲ್ಲಿ ಸೋಲಿಸಿದ ಬಿಳಿಯರು (1799) ಕನ್ನಡ ಮಾತನಾಡುವ ಪ್ರದೇಶಗಳನ್ನು ತಮಗಿಷ್ಟ ಬಂದಂತೆ ಅನುಕೂಲಕ್ಕೆ ತಕ್ಕಂತೆ ಹೋಳು ಹೋಳು ಮಾಡಿದರು. ಅಕ್ಕಪಕ್ಕದ ಆಳ್ವಿಕೆಯ ಪ್ರಾಂತ್ಯಗಳಿಗೆ ಹಂಚಿಬಿಟ್ಟರು.

ಮೈಸೂರು ಸಂಸ್ಥಾನದಲ್ಲಿ ಕನ್ನಡಿಗರೇ ಅರಸರಾಗಿದ್ದರೂ ಉಳಿದೆಲ್ಲ ಭಾಗಗಳಲ್ಲಿ ಅನ್ಯ ಭಾಷಿಕರ ಪ್ರಭುತ್ವವಿತ್ತು. ಅಲ್ಲಿ ಕನ್ನಡಿಗರ ನೋವು ಮುಗಿಲು ಮುಟ್ಟಿತ್ತು. ಜನರ ಭಾವನೆಗಳನ್ನು ಪ್ರಕಟಿಸಲು ಪತ್ರಿಕೆಗಳನ್ನು ವೇದಿಕೆಗಳನ್ನಾಗಿ ಮಾಡಿಕೊಳ್ಳಲು ಮದ್ರಾಸ್ ಆಡಳಿತದಲ್ಲಿದ್ದ ಮೈಸೂರು ಪ್ರಾಂತ್ಯದಲ್ಲಿ ಹಾಗೂ ಮುಂಬೈ ಆಳ್ವಿಕೆಯಲ್ಲಿದ್ದ ಪ್ರದೇಶಗಳಲ್ಲಿ ಕನ್ನಡ ಪತ್ರಿಕೆಗಳು ಪ್ರಕಟಗೊಳ್ಳಲಾರಂಭಿಸಿದವು.

ಮೈಸೂರು ಸಂಸ್ಥಾನವನ್ನು ಯದುವಂಶದ ಅರಸರಿಗೆ ಆಳಲು ಬಿಟ್ಟಿದ್ದರೂ ಲಗಾಮು ಬಿಟ್ಟಿರಲಿಲ್ಲ. ಬ್ರಿಟಿಷರ ಆಡಳಿತದಿಂದ ನಮ್ಮ ಜನರಿಗೆ ಎದುರಾಗುತ್ತಿದ್ದ ಕಷ್ಟನಷ್ಟಗಳನ್ನು ಪತ್ರಿಕೆಗಳು ಪ್ರತಿಬಿಂಬಿಸುತ್ತಿದ್ದವು. ಜನರೂ ತಮ್ಮ ಅಹವಾಲುಗಳನ್ನು ಪತ್ರಿಕೆಗಳ ಮೂಲಕ ಹೇಳಿಕೊಳ್ಳುವ ಜಾಗೃತಿ ಬೆಳೆಸಿಕೊಂಡರು. ಇದು ಆಳುವವರಿಗೆ ಮುಜುಗರವನ್ನು ತರುತ್ತಿತ್ತು. ಪತ್ರಿಕೆಗಳನ್ನು ತಮ್ಮ ಹಿಡಿತದಲ್ಲಿ ಇಟ್ಟುಕೊಳ್ಳಲು ಹೊಸ ಕಾನೂನು ಜಾರಿಗೊಳಿಸಲು ಸರ್ಕಾರ ತಡ ಮಾಡಲಿಲ್ಲ.



ಮುಂಬೈ ಕರ್ನಾಟಕದಲ್ಲಿ ಕನ್ನಡಿಗರು ಹಲವು ಬಗೆಯ ಕಷ್ಟಗಳಿಗೆ ತುತ್ತಾಗಿದ್ದರು. ಅದರಲ್ಲಿ ಬಹಳ ಪ್ರಮುಖವಾದುದೆಂದರೆ ಕನ್ನಡ ಭಾಷೆಯ ಮೇಲೆ ಆಗುತ್ತಿದ್ದ ಅನ್ಯಭಾಷಿಕರ ದಬ್ಬಾಳಿಕೆ. ಮರಾಠಿ ಮಾತನಾಡುವವರು ಕನ್ನಡ ಪ್ರಭುತ್ವದ ಭಾಗಗಳಲ್ಲಿ ನೆಲೆಯೂರಿ ಇಲ್ಲಿಯ ನೆಲದ ಭಾಷೆಯನ್ನು, ಭಾಷಿಕರನ್ನು ಶೋಷಿಸಲು ಶುರು ಮಾಡಿದ್ದರಿಂದ ಹತ್ತಾರು ಬಗೆಯ ಸಮಸ್ಯೆಗಳೂ ಎದ್ದುನಿಂತಿದ್ದವು.

ಆ ಹೊತ್ತಿಗಾಗಲೇ ಕನ್ನಡಿಗರು ಸಂಘಟಿತರಾಗುವತ್ತ ಹೆಜ್ಜೆ ಹಾಕಿದ್ದರು. ಬರಬರುತ್ತ ಕನ್ನಡಿಗರ ದನಿಯೂ ಹೆಚ್ಚಿತು. ಕನ್ನಡ ಕೃತಿಗಳೂ ಹೊರಬಂದವು. ಕನ್ನಡ ನಾಡಿನ ಭವ್ಯ ಪರಂಪರೆಯನ್ನು ಜನರಿಗೆ ತಿಳಿಹೇಳುವ ಕೆಲಸ ನಡೆಯುತ್ತಿತ್ತು. ಆಗ ಪ್ರಚಲಿತಕ್ಕೆ ಬಂದ ಪತ್ರಿಕೆಗಳು ಸರ್ಕಾರದ ಮುಖಪತ್ರಗಳೇ ಆಗಿದ್ದವು. ಸರ್ಕಾರದ ಕೆಲಸಗಳನ್ನು ಮೆಚ್ಚುವುದೇ ಆ ಪತ್ರಿಕೆಗಳ ಕೆಲಸವಾಗಿತ್ತು. ಕನ್ನಡಿಗರ ಆಸೆ-ಆಕಾಂಕ್ಷೆಗಳನ್ನು ಪ್ರತಿಪಾದಿಸುವ ನಿಟ್ಟಿನಲ್ಲಿ ಶುರುವಾದ ಕನ್ನಡ ಪತ್ರಿಕೆಗಳಲ್ಲಿ ಕಲಾದಗಿ (ಈಗಿನ ಬಾಗಿಲುಕೋಟೆ ಸಮೀಪದ ಸ್ಥಳ)ಯಿಂದ ಪ್ರಕಟವಾಗುತ್ತಿದ್ದ 'ಹಿತೇಚ್ಛು' (1870) ಪತ್ರಿಕೆ ಮೊದಲನೆಯದು.

ರಾಷ್ಟ್ರೀಯತೆ ಹಾಗೂ ಕರ್ನಾಟಕ ಏಕೀಕರಣ ಕುರಿತ ಸುದ್ದಿ-ಸಮಾಚಾರಗಳು ಮತ್ತು ಲೇಖನಗಳನ್ನು ಈ ಪತ್ರಿಕೆ ಪ್ರಕಟಿಸುತ್ತಿತ್ತು. ಬಿಳಿಯರ ದಬ್ಬಾಳಿಕೆ, ಮರಾಠಿಗರ ಅವಗಣನೆಯನ್ನು ಎತ್ತಿತೋರಿಸಿ ಕನ್ನಡಿಗರನ್ನು ಬಡಿದೆಬ್ಬಿಸುವ ಕೆಲಸವನ್ನು ಮಾಡುವ ಹಲವಾರು ಪತ್ರಿಕೆಗಳು ಮುಂಬೈ ಕರ್ನಾಟಕದಲ್ಲಿ ಪ್ರಕಟಗೊಳ್ಳಲು ಮೊದಲಾದವು.

ವಿಭೂತಿ ಹುಚ್ಚಯ್ಯ, ಮಾನದ ಕಟ್ಟಿ ಕಲ್ಯಾಣಪ್ಪ, ಮುದವೀಡು ಕೃಷ್ಣರಾಯರು, ದೇಸಾಯಿ ಸೀನಪ್ಪ ಮೊದಲಾದವರು ಪತ್ರಿಕೆಗಳನ್ನು ಪ್ರಕಟಿಸುವ ಸಾಹಸಕ್ಕೆ ಕೈಹಾಕಿದರು. ಧಾರವಾಡದಲ್ಲಿ ರಾಜಹಂಸ, ಪುಷ್ಪಮಾಲಿಕೆ, ವಿಜಯ ಕರ್ನಾಟಕ ಪತ್ರ ಇತ್ಯಾದಿ ಪತ್ರಿಕೆ ಹೊರ ಬರುತ್ತಿದ್ದವು. ಇವುಗಳಲ್ಲಿ ದೇಶಾಭಿಮಾನ ಮೂಡಿಸುವ ಕೆಲಸ ಹೆಚ್ಚಾಗಿತ್ತು. ಕನ್ನೆ ಏಕೀಕರಣ ವಿಚಾರಕ್ಕೂ ಆದ್ಯತೆ ಕೊಡುತ್ತಿದ್ದ ಅನೇಕ ಪತ್ರಿಕೆಗಳನ್ನು ಬ್ರಿಟಿಷರು ನಿಷೇಧಿಸಿದರು ಕೂಡ.

ದೇಶದುದ್ದಕ್ಕೂ ಹಬ್ಬುತ್ತಿದ್ದ ಸ್ವಾತಂತ್ರ್ಯ ಚಳವಳಿ ಕರ್ನಾಟಕಕ್ಕೆ ಪ್ರವೇಶಿಸಿದ್ದು ಮುಂಬೈ-ಕರ್ನಾಟಕ ಪ್ರಾಂತ್ಯದಿಂದ ಮೈಸೂರು ಭಾಗದಲ್ಲಿ ಅದರ ಕಾವು ಮೊದಲಿಗೆ ಹೆಚ್ಚಿರಲಿಲ್ಲ. ನಂತರ ಸ್ವಾತಂತ್ರ್ಯ ಪ್ರವಾಹದಲ್ಲಿ ಎಲ್ಲ ಭಾಗಗಳೂ ಸೇರಿದವು. ಈ ಪ್ರವಾಹಕ್ಕೆ ಏಕೀಕರಣ ತೊರೆಯೂ ಸೇರಿತ್ತು.

ಕನ್ನಡ ಭಾಷೆ ಹಾಗೂ ಕನ್ನಡ ಭಾಷಿಕರ ಹಿತರಕ್ಷಣೆ ಮತ್ತು ಅಭಿವೃದ್ಧಿಗೆ ಧಾರವಾಡದಲ್ಲಿ ಸ್ಥಾಪನೆಗೊಂಡ ಕರ್ನಾಟಕ ವಿದ್ಯಾವರ್ಧಕ ಸಂಘ 'ವಾಗ್ಭೂಷಣ' ಪತ್ರಿಕೆಯನ್ನು ಪ್ರಕಟಿಸಲಾರಂಭಿಸಿತು. ಹರ್ಡೀಕರ್ ಮಂಜಪ್ಪನವರು 'ಧನುರ್ಧಾರಿ' ಪತ್ರಿಕೆಯನ್ನು ಸ್ಥಾಪಿಸಿ ರಾಷ್ಟ್ರೀಯ ಆಂದೋಲನದಲ್ಲಿ ಸೇರಿಕೊಂಡರು. 'ಕರ್ನಾಟಕವೃತ' 'ವಿಜಯ' 'ಲೋಕಬಂಧು' 'ರಾಜಹಂಸ' ಧನಂಜಯ 'ಲೋಕ ಶಿಕ್ಷಕ' ಮೊದಲಾದ ಪತ್ರಿಕೆಗಳಲ್ಲೂ ಏಕೀಕರಣ ಹಾಗೂ ಸ್ವಾತಂತ್ರ್ಯ ಹೋರಾಟದ್ದೇ ಸುದ್ದಿ ಸಮಾಚಾರಗಳಿರುತ್ತಿದ್ದವು.

ರಾಷ್ಟ್ರ ನೇತಾರ ಬಾಲಗಂಗಾಧರ ತಿಲಕ್ ಅವರ ಸಂಪಾದಕತ್ವದ ಮರಾಠಿ ಭಾಷೆಯ 'ಕೇಸರಿ' ಪ್ರಭಾವ ಧಾರವಾಡ ಭಾಗದಲ್ಲಿ ಜೋರಾಗಿತ್ತು. ನಂತರ ಅದು 'ಕನ್ನಡ ಕೇಸರಿ' ಎಂಬ ಹೆಸರಿನಲ್ಲಿ ರಾಷ್ಟ್ರ ಉದ್ದೀಪನ ಲೇಖನ-

**ದೇಶದುದ್ದಕ್ಕೂ ಹಬ್ಬುತ್ತಿದ್ದ ಸ್ವಾತಂತ್ರ್ಯ ಚಳವಳಿ ಕರ್ನಾಟಕಕ್ಕೆ ಪ್ರವೇಶಿಸಿದ್ದು ಮುಂಬೈ-ಕರ್ನಾಟಕ ಪ್ರಾಂತ್ಯದಿಂದ ಮೈಸೂರು ಭಾಗದಲ್ಲಿ ಅದರ ಕಾವು ಮೊದಲಿಗೆ ಹೆಚ್ಚಿರಲಿಲ್ಲ. ನಂತರ ಸ್ವಾತಂತ್ರ್ಯ ಪ್ರವಾಹದಲ್ಲಿ ಎಲ್ಲ ಭಾಗಗಳೂ ಸೇರಿದವು. ಈ ಪ್ರವಾಹಕ್ಕೆ ಏಕೀಕರಣ ತೊರೆಯೂ ಸೇರಿತ್ತು.**

ಸುದ್ದಿಗಳೊಂದಿಗೆ ಹೊರಬರತೊಡಗಿತು.

ಕರ್ನಾಟಕ ಏಕೀಕರಣ ಮತ್ತು ರಾಷ್ಟ್ರೀಯ ಆಂದೋಲನ ಒಟ್ಟಾಗಿ ಹೆಜ್ಜೆ ಹಾಕುತ್ತ ಜನರನ್ನು ಜಾಗೃತಗೊಳಿಸುತ್ತಿದ್ದವು. ಅದೇ ಸಂದರ್ಭದಲ್ಲಿ ಬ್ರಿಟಿಷರು ಬಂಗಾಲವನ್ನು ವಿಭಾಗಿಸಿದರು. ಆ ಸಂದರ್ಭದಲ್ಲಿ ದೊಡ್ಡ ಪ್ರಮಾಣದ ಪ್ರತಿಭಟನೆ ಪ್ರಾರಂಭಗೊಂಡು ವಿದೇಶಿ ವಸ್ತುಗಳನ್ನು ಬಹಿಷ್ಕರಿಸುವ ಚಳವಳಿ ಅದರಲ್ಲಿ ಸೇರಿತು. ಇದಕ್ಕೆಲ್ಲ ಕನ್ನಡ ಜನ – ಕನ್ನಡ ಪತ್ರಿಕೆಗಳು ಸ್ಪಂದಿಸಿದವು.

ಮುದವೀಡು ಕೃಷ್ಣರಾಯರ 'ಕರ್ನಾಟಕ ವೃತ್ತ', ವೆಂಕಟರಂಗೇಕಟ್ಟಿ ಅವರ 'ಕರ್ನಾಟಕ ಪತ್ರ', ಮಣ್ಣೂರು ಗುಂಡೇರಾಯರ 'ಕರ್ನಾಟಕ ವೈಭವ' ಪತ್ರಿಕೆಗಳಲ್ಲಿ ದೇಶದ ಎಲ್ಲಾ ವಿದ್ಯಮಾನಗಳನ್ನು ಕುರಿತ ಲೇಖನ-ಸುದ್ದಿಗಳು ಪ್ರಕಟಗೊಳ್ಳುತ್ತಿದ್ದವು. ಇದರಲ್ಲಿ ಬರುತ್ತಿದ್ದ ಲೇಖನಗಳು ನೇರವಾಗಿ ಬ್ರಿಟಿಷ್ ಸರ್ಕಾರಕ್ಕೆ ಮರಾಠಿ ಸಮೂಹಕ್ಕೆ ಮುಟ್ಟುತ್ತಿದ್ದವು. ಇವೆಲ್ಲ ಅಧಿಕಾರಸ್ಥರಿಗೆ ನುಂಗಲಾರದ ತುತ್ತಾಗಿದ್ದವು. ಈ ಬೆಳವಣಿಗೆಗಳಿಂದ ಕನ್ನಡಿಗರು ಜಾಗೃತಿಗೊಳ್ಳಲು ನೆರವಾಯಿತು. ಭಾಷಾಭಿಮಾನ ರೂಢಿಸಿಕೊಳ್ಳಲೂ ಕಾರಣವಾಯಿತು. ಸೇವಾದಳ ಸ್ಥಾಪಕ ನಾ.ಸು. ಹರ್ಡೀಕರ್, ಆಲೂರು ವೆಂಕಟರಾಯರು, ಮೈಸೂರಿನಲ್ಲಿ ಎಂ. ವೆಂಕಟಕೃಷ್ಣಯ್ಯ, ಮಂಗಳೂರಿನಲ್ಲಿ ವಿ.ಎಸ್. ಕಾಮತ್, ಬೆಂಗಳೂರಿನಲ್ಲಿ ಡಿ.ವಿ. ಗುಂಡಪ್ಪ ಪತ್ರಿಕೆಗಳಲ್ಲಿ ಸಕ್ರಿಯರಾದರು, ಚಳವಳಿ ಅವರ ಬೆನ್ನ ಹಿಂದೆ ಇತ್ತು.

ಕನ್ನಡ ಭಾಗಗಳಿಗೆಂದೇ ಕಾಂಗ್ರೆಸ್ ಸಮಿತಿ ಕಾರ್ಯಾರಂಭ ಮಾಡಿದ ಮೇಲೆ ಕರ್ನಾಟಕ ಏಕೀಕರಣಕ್ಕೆ ಇನ್ನಷ್ಟು ಒತ್ತು ಸಿಕ್ಕಿತು. ಬಹುತೇಕ ಪತ್ರಿಕೆ – ಪತ್ರಕರ್ತರು ಸರ್ಕಾರದ ವಿರುದ್ಧವೇ ಇದ್ದರೂ ಆಂಗ್ಲ ಆಡಳಿತವನ್ನು ಹೊಗಳುವ ಪತ್ರಿಕೆಗಳೇನು ಇಲ್ಲದಿರಲಿಲ್ಲ. ಕನ್ನಡ ಗೊತ್ತಿದ್ದ ಜನರಿಗೆ ವಾಸ್ತವ ಸ್ಥಿತಿಯನ್ನು ತಿಳಿಸುವುದಷ್ಟೇ ಆಗಿನ ಪತ್ರಿಕೆಗಳ ಕೆಲಸ. ಈ ಕಾರ್ಯದಲ್ಲಿ ವಿಜಯ, ರಾಜಹಂಸ, ಕರ್ಮವೀರ, ಕರ್ನಾಟಕ ವೃತ್ತಪತ್ರಿಕೆಗಳು ನೇರಾನೇರ ಆಂಗ್ಲರ ಆಳ್ವಿಕೆ ವಿರುದ್ಧ ನಿಂತವು. ಉಗ್ರವಾದ ಲೇಖನಗಳನ್ನು ಪ್ರಕಟಿಸಿದವು. ಸರ್ಕಾರ ಇವರ ಬಾಯಿ ಮುಚ್ಚಿಸಲು ಸಂಪಾದಕರನ್ನು ಬಂಧಿಸಿತು. ಆದರೆ

ಪತ್ರಿಕೆಗಳು ನಿಲ್ಲಲಿಲ್ಲ. ಅವುಗಳಲ್ಲಿ ಬ್ರಿಟಿಷರ ಕೃತ್ಯಗಳನ್ನು ಖಂಡಿಸುವುದೂ ನಿಲ್ಲಲಿಲ್ಲ.

ನಾಗಪುರದಲ್ಲಿ ಜರುಗಿದ ಕಾಂಗ್ರೆಸ್ ಅಧಿವೇಶನಕ್ಕೆ 'ಕನ್ನಡ' ಪ್ರತಿನಿಧಿಗಳು ಅಧಿಕೃತವಾಗಿ ಪಾಲ್ಗೊಂಡರು. ಕನ್ನಡ ರಾಜ್ಯ ಸ್ಥಾಪನೆಗೆ ಆಗ್ರಹಿಸಿದರು. ಇವರ ನಡೆಯನ್ನು ಸ್ವಾಗತಿಸಿದ ಕನ್ನಡ ಪತ್ರಿಕೆಗಳು ಇವರ ಹೋರಾಟಕ್ಕೂ ಬೆಂಬಲ ಕೊಟ್ಟವು. ಇದರಿಂದ ಬೇರೆಯವರ ಆಳ್ವಿಕೆ ಇದ್ದ ಕನ್ನಡ ನೆಲದಲ್ಲಿ ಹಲವು ಕನ್ನಡ ಪರ, ಸ್ವಾತಂತ್ರ್ಯ ಪರ ಪತ್ರಿಕೆಗಳು ಚಿಗುರೊಡೆದವು. ಕರ್ನಾಟಕ ಏಕೀಕರಣಕ್ಕೆ ದನಿ ಕೊಟ್ಟವು.

ತಾಯಿನಾಡು, ಪ್ರಜಾಮತ, ವಿಶ್ವ ಕರ್ನಾಟಕ, ಜನವಾಣಿ, ನವಶಕ್ತಿ, ಚಿತ್ರಗುಪ್ತ, ವೀರಕೇಸರಿ, ರಾಷ್ಟ್ರಬಂಧು, ಸಂಯುಕ್ತ ಕರ್ನಾಟಕ, ಸ್ವರಾಜ್ಯ, ಕರ್ಮವೀರ, ತಿಂಗಳ ಸಂದೇಶ, ಸತ್ಯಾಗ್ರಹೀ, ದೇಶಾಭಿಮಾನಿ ಹೀಗೆ ಕನ್ನಡದ ಎಲ್ಲಾ ಭೂಭಾಗಗಳಿಂದ ಕನ್ನಡ ಪತ್ರಿಕೆಗಳು ಪ್ರಾರಂಭಗೊಂಡು ಸ್ವಾತಂತ್ರ್ಯ, ಏಕೀಕರಣಕ್ಕೆ ಹೊಸ ಚೈತನ್ಯ ಸಿಕ್ಕಿತು. ಈ ಪತ್ರಿಕೆಗಳ ಮೂಲಕ ಮೊಹರೆ ಹನುಮಂತ ರಾಯರು, ತಿ.ತಾ. ಶರ್ಮ, ಪಿ.ಆರ್. ರಾಮಯ್ಯ, ಬಿ.ಎನ್. ಗುಪ್ತ, ಡಿ.ಕೆ. ಭಾರದ್ವಾಜ್, ಎಚ್.ಕೆ. ವೀರಣ್ಣಗೌಡ, ಆರ್.ಆರ್. ದಿವಾಕರ್, ಕಡೆಂಗೋಡ್ಲು ಶಂಕರಭಟ್ಟ ಮೊದಲಾದವರು ತಮ್ಮ ಶಕ್ತಿಯುತ ಬರಹಗಳ ಮೂಲಕ ಚಳವಳಿಗೆ ಜೀವ ತುಂಬಿದರು.

ತಾಯ್ನಾಡಿನ ವಿಮೋಚನೆ ಹಾಗೂ ಕನ್ನಡಿಗರು 'ಒಂದಾಗುವ' ವಿಚಾರಗಳ ಬಗ್ಗೆ ಸವಿಸ್ತಾರವಾದ ಲೇಖನಗಳನ್ನು ಪತ್ರಿಕೆಗಳು ಹೊತ್ತು ತಂದವು. ನಾಡಿನ ಜನತೆಯ ಆಶಯಗಳನ್ನು ಪ್ರತಿಪಾದಿಸುವ ಸಂಪಾದಕೀಯಗಳು ಪ್ರಕಟವಾದವು. ಅಧಿಕಾರಸ್ಥರ ದೌರ್ಜನ್ಯಗಳನ್ನು ಖಂಡಿಸುವ ಉಗ್ರಲೇಖನಗಳು ಆಡಳಿತವನ್ನು ಕಂಗೆಡಿಸಿತು. ಅನೇಕ ಪತ್ರಕರ್ತರು, ಸಂಪಾದಕರು ಬಂಧನಕ್ಕೆ ಒಳಗಾದರು. ವರ್ಷಗಟ್ಟಲೆ ಸಜೆಗೆ ಒಳಗಾದ ಸಂಪಾದಕರ ಪತ್ರಿಕಾಲಯಗಳನ್ನು ಸರ್ಕಾರ ಬಂದ್ ಮಾಡಿದ್ದೂ ನಡೆಯಿತು.

ಕನ್ನಡಿಗರಲ್ಲಿ ಕನ್ನಡತನದ ಅರಿವು ಮೂಡಿಸಲು ಕೃತಿ ಪ್ರಕಟಣೆ ಭಾಷಣ, ಸಮ್ಮೇಳನ, ಸಭೆ–ಸಮಾರಂಭಗಳೊಂದಿಗೆ ಹೆಚ್ಚು ಪರಿಣಾಮಕಾರಿಯಾಗಿ ಹೊರಹೊಮ್ಮಿದ್ದು ಪತ್ರಿಕೆಗಳು. ಇಂತಹ ಅನೇಕ ಕನ್ನಡ ಪತ್ರಿಕೆಗಳಲ್ಲಿ ಸಾಹಿತಿ ಗಣ್ಯರು ಮೌಲ್ಯಯುತ ಬರಹಗಳನ್ನು ಬರೆದರು. ಪಂಜೆ ಮಂಗೇಶರಾಯರು, ಡಿ.ವಿ. ಗುಂಡಪ್ಪ, ಕೆರೂರು ವಾಸುದೇವಾಚಾರ್ಯ, ವಿ.ಆರ್. ಕೃಷ್ಣಶಾಸ್ತ್ರೀ, ಬೆನಗಲ್ ರಾಮರಾಯರು, ವೆಂಕಟರಂಗೋಕಟ್ಟಿ, ಮುದವೀಡು ಕೃಷ್ಣರಾಯರು, ಬಿ.ಎಂ. ಶ್ರೀಕಂಠಯ್ಯ, ಮಂಜೇಶ್ವರ ಗೋವಿಂದ ಪೈ, ಆಲೂರು ವೆಂಕಟರಾಯರು, ಬೆಳ್ಳಾವೆ ನಾರಾಯಣಪ್ಪ, ಎಂ.ಎ. ರಾಮಾನುಜ ಅಯ್ಯಂಗಾರ್, ಎಸ್.ಜಿ. ನರಸಿಂಹಾಚಾರ್ ಇಂತಹ ಸಾಹಿತಿಗಳಲ್ಲಿ ಮುಖ್ಯರು.

ಬೆಂಗಳೂರಿನಲ್ಲಿ ಮೈಸೂರು ಅರಸರ ನೇತೃತ್ವದಲ್ಲಿ ಸ್ಥಾಪನೆಯಾದ ಕನ್ನಡ ಸಾಹಿತ್ಯ ಪರಿಷತ್ತು (1915) ಕನ್ನಡ ನಾಡು ನುಡಿಯನ್ನು ಹರಡಿಸಲು ಶ್ರಮಿಸಿತು. ಎಲ್ಲೆಡೆ ಏಕೀಕರಣದ ಬೇಡಿಕೆಯ ಕೂಗು ಹೆಚ್ಚಿತು. ಅದಕ್ಕೆ ಎಲ್ಲಾ ಪತ್ರಿಕೆಗಳೂ ಬೆಂಬಲ್ಕಕೆ ನಿಂತವು. ಪತ್ರಿಕೆಗಳ ಪರಿಕಲ್ಪನೆಯೇ ಹೊಸದಾಗಿದ್ದ ಈ ನಾಡಿನಲ್ಲಿ ಕ್ರೈಸ್ತ ಪಾದ್ರಿಗಳು ಧರ್ಮ ಪ್ರಚಾರಕ್ಕಾಗಿ ಆರಂಭಿಸಿದ ಪತ್ರಿಕೆಗಳೇ ಕನ್ನಡದ ಪತ್ರಿಕೆಗಳ ಪ್ರಾರಂಭಕ್ಕೆ ಪ್ರೇರಣೆ ನೀಡಿದವು. ಕನ್ನಡಿಗರಿಗೆ ಇಂಗ್ಲಿಷ್ ಪ್ರಭುತ್ವದಲ್ಲಿ ಆಗುತ್ತಿದ್ದ ಅನ್ಯಾಯಗಳನ್ನು ಎತ್ತಿತೋರಿಸಲು, ಕನ್ನಡಿಗರಿಗೆ ಜಾಗೃತಿ ಮೂಡಿಸಲು ಪತ್ರಿಕೆಗಳು ಅಸ್ತ್ರಗಳಾಗಿ ಕಾರ್ಯನಿರ್ವಹಿಸಿದವು. ಇದರ ಪರಿಣಾಮ ಕನ್ನಡಿಗರು ಹೋರಾಟಕ್ಕೆ ಅಣಿಯಾದರು. ಕನ್ನಡ ಏಕೀಕರಣ ಮುಖಂಡರ ಚಳವಳಿಯ ವಿವಿಧ ಹಂತಗಳ ವಿಚಾರಗಳನ್ನು ಪತ್ರಿಕೆಗಳು ಹೊತ್ತು ತರುತ್ತಿದ್ದು ಅದನ್ನೇ ಜನ ಹಿಂಬಾಲಿಸುತ್ತಿದ್ದರು.

ಇಂತಹ ಪತ್ರಿಕೆಗಳು ಸರ್ಕಾರಕ್ಕೆ ಚುರುಕು ಮುಟ್ಟಿಸುತ್ತಿದ್ದು ಅನೇಕ ಸಂದರ್ಭಗಳಲ್ಲಿ ಅಧಿಕಾರಿಗಳು ಇವುಗಳನ್ನು ನಿಯಂತ್ರಿಸಲು, ತಡೆಗಟ್ಟಲು ಹಲವಾರು ಕಠಿಣ ಕ್ರಮಗಳನ್ನು ಪ್ರಯೋಗಿಸಿದರು. ಅನೇಕ ಸಂಪಾದಕರು–ಪತ್ರಕರ್ತರು ಸೆರೆವಾಸ ಅನುಭವಿಸಬೇಕಾಯಿತು. ಪತ್ರಿಕೆಗಳ ಪ್ರಕಟಣೆ ನಿಲ್ಲಿಸಬೇಕಾಯಿತು. ಮುದ್ರಣಾಲಯಗಳು ಜಪ್ತಿ ಆದವು. ಇವೆಲ್ಲವನ್ನು ದಿಟ್ಟತನದಿಂದ ಪತ್ರಿಕೆಗಳು ಎದುರಿಸಿದವು.

ಕರ್ನಾಟಕ ಏಕೀಕರಣಕ್ಕೆ ಕವಿ ಸಾಹಿತಿಗಳ ಶ್ರಮ ಕೊನೆವರೆಗೂ ಇತ್ತು. ಇವರೊಡನೆ ಪತ್ರಕರ್ತರೂ ಕೈಜೋಡಿಸಿದರು. ರಾಜಕೀಯಸ್ಥರ ಪ್ರವೇಶ ಆಗಿದ್ದು ನಂತರದ ಘಟ್ಟದಲ್ಲಿ. ಪತ್ರಿಕೆಗಳನ್ನು ನಡೆಸುತ್ತಿದ್ದವರು, ಪತ್ರಿಕೆಗಳಲ್ಲಿ ಬರೆಯುತ್ತಿದ್ದವರು ಎಲ್ಲರ ಮುಖ್ಯಗುರಿ ಕರ್ನಾಟಕ ಏಕೀಕರಣವಾಗಿತ್ತು ಎಂಬುದರಲ್ಲಿ ಎರಡು ಮಾತಿರಲಿಲ್ಲ.

**ಕರ್ನಾಟಕ ಏಕೀಕರಣ ಮತ್ತು ರಾಷ್ಟ್ರೀಯ ಆಂದೋಲನ ಒಟ್ಟಾಗಿ ಹೆಜ್ಜೆ ಹಾಕುತ್ತ ಜನರನ್ನು ಜಾಗೃತಗೊಳಿಸುತ್ತಿದ್ದವು. ಅದೇ ಸಂದರ್ಭದಲ್ಲಿ ಬ್ರಿಟಿಷರು ಬಂಗಾಲವನ್ನು ವಿಭಾಗಿಸಿದರು. ಆ ಸಂದರ್ಭದಲ್ಲಿ ದೊಡ್ಡ ಪ್ರಮಾಣದ ಪ್ರತಿಭಟನೆ ಪ್ರಾರಂಭಗೊಂಡು ವಿದೇಶಿ ವಸ್ತುಗಳನ್ನು ಬಹಿಷ್ಕರಿಸುವ ಚಳವಳಿ ಅದರಲ್ಲಿ ಸೇರಿತು. ಇದಕ್ಕೆಲ್ಲ ಕನ್ನಡ ಜನ – ಕನ್ನಡ ಪತ್ರಿಕೆಗಳು ಸ್ಪಂದಿಸಿದವು.**

**ಹಚ್ಚೇವು ಕನ್ನಡದ ದೀಪ**
**ಕರುನಾಡ ದೀಪ**

– ಡಿ.ಎಸ್. ಕರ್ಕಿ





# ಕರ್ನಾಟಕದ ಹೆಮ್ಮೆಯ ವಾಸ್ತುಶಿಲ್ಪ

ಡಾ. ಎಸ್. ನಂಜುಂಡಸ್ವಾಮಿ

**ಕದಂಬರ ವಾಸ್ತುಶಿಲ್ಪ**

ಕದಂಬರು ಕರ್ನಾಟಕದ ಮೊದಲ ಸಾಮ್ರಾಜ್ಯ ಸ್ಥಾಪಕರು. ಇವರ ಕಾಲದಲ್ಲಿಯೇ ದೇವಾಲಯಗಳ ನಿರ್ಮಾಣ ಆರಂಭವಾಯಿತು. ಕದಂಬರ ಕಾಲದ ಕೆಲವು ದೇವಾಲಯಗಳು ಮತ್ತು ಬಸದಿಗಳು ಉಳಿದು ಬಂದಿವೆ. ತಾಳಗುಂದದ ಪ್ರಣವೇಶ್ವರ ದೇವಾಲಯವು ಕರ್ನಾಟಕದ ಅತ್ಯಂತ ಹಳೆಯ ದೇವಾಲಯವಾಗಿದ್ದು, ಶಾತವಾಹನರ ಕಾಲದಲ್ಲಿ ನಿರ್ಮಾಣಗೊಂಡು, ಕದಂಬರ ಕಾಲದಲ್ಲಿ ಮತ್ತು ಅವರ ನಂತರ ನವೀಕರಣಗೊಂಡಿದೆ.

ಚಿತ್ರದುರ್ಗದ ಬ್ರಹ್ಮಗಿರಿಯಲ್ಲಿ ಕದಂಬರ ಕಾಲದಲ್ಲಿ ಇಟ್ಟಿಗೆಯಿಂದ ನಿರ್ಮಿತವಾದ ಚೈತ್ಯಾಲಯಗಳ ಅವಶೇಷಗಳು ಕಂಡು ಬಂದಿವೆ ಬೆಳಗಾವಿ ಜಿಲ್ಲೆಯ ಹಲಸಿಯಲ್ಲಿರುವ ಜೈನಾಲಯವು ಮೃಗೇಶವರ್ಮನಿಂದ ನಿರ್ಮಿತವಾಗಿದ್ದು, ಕೇವಲ ಗರ್ಭಗೃಹ ಮತ್ತು ಮೊಗಸಾಲೆಯನ್ನು ಹೊಂದಿದೆ. ಬೆಳಗಾವಿ ಜಿಲ್ಲೆಯ ಕಾದರೋಳಿಯಲ್ಲಿರುವ ಶಂಕರದೇವ ಮಂದಿರದ ಪಿರಮಿಡ್ ಆಕಾರದ ವಿಮಾನ(ಗೋಪುರ) ಕದಂಬರ ಶೈಲಿಯ ವಿಶೇಷ.

ಬನವಾಸಿಯ ಮಧುಕೇಶ್ವರ ದೇವಾಲಯದ ಗರ್ಭಗೃಹವು ಕದಂಬರ ಕಾಲದ್ದು, ನಂತರ ಈ ದೇಗುಲ ನವೀಕೃತಗೊಂಡಿದೆ. ಹಲಸಿಯಲ್ಲಿ ಹಟ್ಟಕೇಶ್ವರ ದೇವಾಲಯದ ಜಾಲಂಧ್ರಗಳು ಗಮನಾರ್ಹ. ಕಲ್ಲೇಶ್ವರ, ಸುವರ್ಣೇಶ್ವರ, ನರಸಿಂಹ ಮೊದಲಾದ ದೇವಾಲಯಗಳು ಕದಂಬರ ಕಾಲದ್ದು. ಕದಂಬರ ವಾಸ್ತುಶಿಲ್ಪವನ್ನು ಕಳಿಂಗ ಮಾದರಿ ಎಂದೂ ಹೇಳುತ್ತಾರೆ. ಕದಂಬರಿಗಿಂತ ಪೂರ್ವದಲ್ಲಿ ಕರ್ನಾಟಕದ ಕೆಲವು ಭಾಗಗಳನ್ನು ಆಳುತ್ತಿದ್ದ ಶಾತವಾಹನರ ಕೆಲವು ಬೌದ್ಧ ಸ್ತೂಪಗಳು, ವಿಹಾರಗಳ ಅವಶೇಷಗಳು ಬನವಾಸಿಯಲ್ಲಿ, ಯಾದಗಿರಿ ಜಿಲ್ಲೆಯ ಚಿತ್ತಾಪುರ ತಾಲ್ಲೂಕಿನಲ್ಲಿ ದೊರಕಿವೆ. ಕದಂಬರು ಬೌದ್ಧ ವಿಹಾರಕ್ಕೆ ದತ್ತಿಯನ್ನು ನೀಡಿದ ಉಲ್ಲೇಖವಿದೆ.

**ಬಾದಾಮಿ ಚಾಲುಕ್ಯರ ಶಿಲ್ಪಕಲೆ**

ಹುನಗುಂದ ತಾಲ್ಲೂಕಿನ ಐಹೊಳೆಯಲ್ಲಿ ಸುಮಾರು 120 ದೇವಾಲಯಗಳಿವೆ. ಐಹೊಳೆಯಲ್ಲಿ ದೇವಾಲಯಗಳ ನಿರ್ಮಾಣ ಕಾರ್ಯದಲ್ಲಿ ಪ್ರಯೋಗಗಳು ನಡೆದಿರುವುದು ಕಂಡು ಬರುತ್ತದೆ. ಐಹೊಳೆ ವಾಸ್ತುಶಿಲ್ಪಿಗಳ ತರಬೇತಿಯ ಪ್ರಯೋಗಶಾಲೆ ಎಂದು ಕರೆಯಲ್ಪಟ್ಟಿದೆ. ಐಹೊಳೆಯಲ್ಲಿ, ನಾಗರ, ದ್ರಾವಿಡ, ವೇಸರ, ಬೌದ್ಧಶೈಲಿಯ ವಾಸ್ತುಶಿಲ್ಪದ ಅನೇಕ ಚಿಕ್ಕಪುಟ್ಟ ಹಾಗೂ ದೊಡ್ಡ ದೇವಾಲಯಗಳಿವೆ.

ಐಹೊಳೆಯ ಗೌಡರ ಗುಡಿ ಅತ್ಯಂತ ಪ್ರಾಚೀನ ಗುಡಿ. ಇದರ ದ್ವಾರಬಂಧವು ಅತ್ಯಂತ ಸುಂದರವಾಗಿದೆ. ಲಾಡ್‌ಖಾನ್ ಗುಡಿಯು ಕ್ರಿ.ಶ.450 ರಲ್ಲಿ ನಿರ್ಮಿತವಾಗಿದೆ. ಇದೇ ಕಾಲದ ದುರ್ಗಾ ದೇವಾಲಯವು ಬೌದ್ಧ ಶೈಲಿಯಲ್ಲಿ ಅಂದರೆ ಗಜಪೃಷ್ಠಾಕಾರದ ಅಥವಾ ಕುದುರೆಯ ಲಾಳದ ಆಕಾರದ ವಿನ್ಯಾಸವನ್ನು ಹೊಂದಿದೆ. ಈ ರೀತಿಯ ದೇವಾಲಯ ಮಹಾಕೂಟದಲ್ಲಿ ಇದೆ. ಇದರ ಮುಂದೆ ಕೊಂತ ದೇವಾಲಯಗಳೆಂಬ, ಚೌಕಾಕಾರದ ಕಂಬದಿಂದ ಕೂಡಿದ, ಪ್ರದಕ್ಷಿಣ ಪಥವಿಲ್ಲದ ಪ್ರಾಚೀನ ಸಣ್ಣಪುಟ್ಟ ಗುಡಿಗಳ ಒಂದು ಗುಂಪು ಕಂಡು ಬರುತ್ತದೆ.

ಐಹೊಳೆಯಲ್ಲಿ ರಾವಳಫಡಿ ಮತ್ತು ಜಿನಾಲಯ ಎಂಬ ಎರಡು ಗುಹಾಲಯಗಳಿವೆ. ಗುಹಾಂತರ್ಗದ ದೇವಾಲಯಗಳ ನಿರ್ಮಾಣದ ಪ್ರಯೋಗ ಇಲ್ಲಿ ಆರಂಭವಾಗಿದೆ. ರಾವಳಫಡಿ ಗುಹಾದೇವಾಲಯ 30 ಅಡಿ ಉದ್ದದ 20 ಅಡಿ ಅಗಲ 10 ಅಡಿ ಎತ್ತರವಿದೆ. ಈ ಗುಹಾಲಯದ ಬಾಗಿಲಲ್ಲಿ ಶಂಖನಿಧಿ, ಪದ್ಮನಿಧಿ ಇವರ ವಿಗ್ರಹಗಳಿವೆ. ಅರ್ಧನಾರೀಶ್ವರ, ಮಹಿಷಮರ್ದಿನಿ, ಗಂಗಾಧರ, ನಟರಾಜನ ಶಿಲ್ಪಗಳು ಗಮನಾರ್ಹ. ಜೈನ ಗುಹೆಯಲ್ಲಿ ತೀರ್ಥಂಕರರ ವಿಗ್ರಹಗಳಿವೆ.

ಬಾದಾಮಿಯಲ್ಲಿ ಕಲ್ಲಿನಿಂದ ನಿರ್ಮಿಸಲಾದ 20 ದೇವಾಲಯಗಳಿವೆ. ಅವುಗಳಲ್ಲಿ ಮಾಲೆಗಿತ್ತಿ ಶಿವಾಲಯ, ಮೇಲಿನ ಶಿವಾಲಯ, ಕೆಳಗಿನ ಶಿವಾಲಯ, ಜಂಬುಲಿಂಗನಗುಡಿ ಎಂದು ಹೇಳುವ ತ್ರಿಕೂಟಾಚಲ ದೇವಾಲಯಗಳು ಕ್ರಿ.ಶ.699ರ ಹೊತ್ತಿಗೆ ನಿರ್ಮಾಣಗೊಂಡಿದ್ದ ಸುಂದರ ಪ್ರಮುಖ ದೇವಾಲಯಗಳು. ಬಾದಾಮಿಯಲ್ಲಿ ದೇವಾಲಯಗಳಿಗಿಂತ ಪ್ರಮುಖವಾಗಿ ಬಂಡೆಯಲ್ಲಿ ಕೊರೆಯಲಾದ ದೊಡ್ಡ ದೊಡ್ಡ ನಾಲ್ಕು ಗುಹಾಲಯಗಳಿವೆ. ಇವುಗಳನ್ನು ಅಚ್ಚಕನ್ನಡದಲ್ಲಿ ಕಲ್ಮನೆ ಎಂದು ಕರೆಯಲಾಗಿದೆ. ಮೊದಲನೆಯದು ಶೈವ ಗುಹಾಲಯ. ಈ ಗುಹೆಯಲ್ಲಿ ಬೃಹತ್ತಾದ ಹದಿನೆಂಟು ಕೈಗಳಿರುವ ನಟರಾಜ, ಅರ್ಧನಾರೀಶ್ವರ ಮೂರ್ತಿ, ಹರಿಹರನ ಮೂರ್ತಿಗಳಿವೆ. ಎರಡನೆಯ ವಿಷ್ಣುಗುಹೆಯಲ್ಲಿ ಆದಿಶೇಷನ ಮೇಲೆ ಸುಖಾಸೀನವಾಗಿರುವ ಬೃಹತ್ ವಿಷ್ಣುವಿನ ಮೂರ್ತಿ ಇದೆ. ಇದು ಮಂಗಳೇಶನಿಂದ ಸು. ಕ್ರಿ.ಶ.600ರಲ್ಲಿ ನಿರ್ಮಿತವಾದ ಗುಹಾಲಯ. ಮೂರನೆಯ ಗುಹೆಯಲ್ಲಿ ಅಂದಿನ ಕಾಲದ ವರ್ಣಚಿತ್ರಗಳು ಇಂದಿಗೂ ಉಳಿದುಕೊಂಡು ಬಂದಿವೆ. ನಾಲ್ಕನೆಯ ಜೈನಗುಹೆಯಲ್ಲಿ ಸಿಂಹಪೀಠದ ಮೇಲೆ ಕುಳಿತಿರುವ ಆದಿನಾಥ ತೀರ್ಥಂಕರನ ಮೂರ್ತಿ ಇದೆ.

ಪಟ್ಟದಕಲ್ಲಿನಲ್ಲಿ ಬಾದಾಮಿ ಚಾಲುಕ್ಯರ ಅಂತಿಮ ಹಂತದ 12 ದೇವಾಲಯಗಳಿದ್ದು, ನಾಲ್ಕು ನಾಗರ ಶೈಲಿಯಲ್ಲಿ, ಮಿಕ್ಕವು ದ್ರಾವಿಡ ಶೈಲಿಯಲ್ಲಿವೆ. ಇವುಗಳಲ್ಲಿ ಪಾಪನಾಥ ಗುಡಿಯು ಬಹಳ ದೊಡ್ಡದು. ಗರ್ಭಗುಡಿ, ಸುಖನಾಸಿ, ಪ್ರದಕ್ಷಿಣಪಥ, ನವರಂಗ, ಹೊರಮಂಟಪಗಳಿದ್ದು ಶಿಖರ ಚಿಕ್ಕದು. ಈ ದೇವಾಲಯದ ಉತ್ತರ ದಿಕ್ಕಿನ ಭಿತ್ತಿಯ(ಗೋಡೆ) ಮೇಲೆ, ಅರ್ಜುನನು ತಪಸ್ಸು ಮಾಡುತ್ತಿರುವುದು, ರಾವಣ ಕೈಲಾಸ ಪರ್ವತ ಎತ್ತುತ್ತಿರುವುದು, ಮಹಿಷಮರ್ದಿನಿ, ನೃತ್ಯಗಣಪತಿ, ನಟರಾಜ, ಹಿರಣ್ಯಕಶ್ಯಪನನ್ನು ಸಂಹರಿಸುತ್ತಿರುವ ನರಸಿಂಹ ಮೂರ್ತಿಗಳು ಸೊಗಸಾಗಿವೆ.

**ರಾಷ್ಟ್ರಕೂಟರ ಶಿಲ್ಪಕಲೆ**

ರಾಷ್ಟ್ರಕೂಟರ ಶಿಲ್ಪಕಲೆಯ ದಾಕ್ಷಿಣಾತ್ಯ ವಾಸ್ತುಕಲೆ ಎಂಬುದು ವಿದ್ವಾಂಸರ ಅಭಿಪ್ರಾಯ. ಎಲ್ಲೋರದ ಕೈಲಾಸ ದೇವಾಲಯ, ಎಲಿಫೆಂಟಾದ ತ್ರಿಮೂರ್ತಿ ಮಂದಿರಿ, ಜೋಗೇಶ್ವರಿ, ಗುಲಬರ್ಗಾ ಜಿಲ್ಲೆಯ ಶಿರವಾಳಗಳಲ್ಲಿ ರಾಷ್ಟ್ರಕೂಟರ ವಾಸ್ತು ರಚನೆಗಳನ್ನು ಕಾಣಬಹುದು. ಎಲ್ಲೋರವು ರಾಷ್ಟ್ರಕೂಟರ ಮೊದಲಿನ ರಾಜಧಾನಿ. ಇಲ್ಲಿ ಬೌದ್ಧಧರ್ಮದ ಹನ್ನೆರಡು ಗುಹೆಗಳು, ಹಿಂದೂಧರ್ಮದ 17 ಗುಹೆಗಳೂ, 5 ಜೈನಧರ್ಮದ ಗುಹೆಗಳೂ ಇವೆ.

ಹಿಂದೂ ಗುಹೆಗಳಲ್ಲಿರುವ ಜಗತ್ ಪ್ರಸಿದ್ಧವಾದ ಕೈಲಾಸ ದೇವಾಲಯವನ್ನು ರಾಷ್ಟ್ರಕೂಟರ ಪ್ರಖ್ಯಾತ ದೊರೆ ಒಂದನೆಯ ಕೃಷ್ಣನು (756–74) ಕೊರೆಯಿಸಿದನು. ಒಂದೇ ಬಂಡೆಯಲ್ಲಿ ಕೊರೆದು ನಿರ್ಮಿಸಿರುವ ಕೈಲಾಸ ದೇವಾಲಯದ ಮುಖ್ಯಭಾಗವೇ 150 ಅಡಿ ಉದ್ದ, 100 ಅಡಿ ಅಗಲ ಮತ್ತು 95 ಅಡಿ ಎತ್ತರವಾಗಿದೆ. ಈ ದೇವಾಲಯದ ಅಧಿಷ್ಠಾನವು 25 ಅಡಿ ಎತ್ತರವಿದ್ದು ಇದು ಎರಡು ಅಂತಸ್ತಿನ ರಚನೆಯಂತೆ





ಕಾಣುತ್ತದೆ. ಈ ದೇವಾಲಯದ ಅಧಿಷ್ಠಾನದಲ್ಲಿ ಸುತ್ತಲೂ ಬೃಹತ್ ಗಾತ್ರದ ಆನೆ ಮತ್ತು ಸಿಂಹಗಳನ್ನು ಕೆತ್ತಲಾಗಿದ್ದು ಈ ಮೃಗಗಳು ದೇವಾಲಯವನ್ನು ಹೊತ್ತುಕೊಂಡಿರುವಂತೆ ಕಾಣುತ್ತದೆ. ದೇವಾಲಯದಲ್ಲಿ ಗರ್ಭಗೃಹ ವಿಶಾಲ ಮುಖಮಂಟಪ ಇದೆ, ದೇವಾಲಯದ ಮುಂದೆ ಪ್ರತ್ಯೇಕ ನಂದಿ ಮಂಟಪವಿದೆ. ಗರ್ಭಗೃಹದ ಸುತ್ತ ಐದು ಪರಿವಾರ ದೇವತೆಗಳ ಗುಡಿಗಳಿವೆ. ರಾವಣನು ಕೈಲಾಸಪರ್ವತವನ್ನು ಎತ್ತುತ್ತಿರುವ ಚಿತ್ರ ವಿಸ್ಮಯಕಾರಿಯಾಗಿದೆ.

**ಗಂಗರ ಶಿಲ್ಪಕಲೆ**

ಉತ್ತರಭಾಗದಲ್ಲಿ ಚಾಲುಕ್ಯರು, ರಾಷ್ಟ್ರಕೂಟರು ತಮ್ಮ ಶಿಲ್ಪಕಲೆಯನ್ನು ಉತ್ತುಂಗಕ್ಕೆ ಕೊಂಡೊಯ್ದ ಅವಧಿಯಲ್ಲಿಯೇ ದಕ್ಷಿಣದಲ್ಲಿ ಗಂಗರು ಮತ್ತು ಅವರ ಮಾಂಡಲಿಕರಾದ ನೊಳಂಬರು, ಬಾಣರು ಶಿಲ್ಪಕಲೆಯಲ್ಲಿ ತಮ್ಮ ಸಿದ್ಧಿಯನ್ನು ಮೆರೆದಿದ್ದರು. ಉದ್ದ, ಅಗಲ ಕಡಿಮೆಯಾದ ನಿರಾಡಂಬರ ಶೈಲಿಯ, ಭಿತ್ತಿಯಮೇಲೆ ಸ್ಥಂಭ ರಚನೆಗಳುಳ್ಳ, ಗರ್ಭಗೃಹ, ಅಂತರಾಳ, ನವರಂಗಗಳಿಂದ ಕೂಡಿದ, ದುಂಡಾದ ಕಂಬ ಮತ್ತು ಬೋಧಿಗೆಯಿಂದ ಕೂಡಿದ ಶೈಲಿಯೇ ಗಂಗರ ಶೈಲಿ. ಸಾಮಾನ್ಯವಾಗಿ ಗಂಗರ ದೇವಾಲಯಗಳು ಊರ ಹೊರಗೆ ಇರುತ್ತವೆ. ಶಿವನ ದೇವಾಲಯಗಳು, ಪಂಚಲಿಂಗ ದೇವಾಲಯಗಳು ಹೆಚ್ಚಾಗಿರುತ್ತವೆ. ದೇವಾಲಯದಲ್ಲಿ ಲಿಂಗರೂಪಿ ಶಿವ, ಪರಿವಾರ ದೇವತೆಗಳಾದ ಗಣಪತಿ, ಸೂರ್ಯ, ನಂದಿ, ಮಹಿಷಮರ್ದಿನಿ ಈ ಮೂರ್ತಿಗಳು ಇರುತ್ತವೆ. ಸಪ್ತಮಾತೃಕೆಯರ ಪ್ರತಿಮೆಗಳು ಗಂಗರ ಕಾಲದ ವಿಶೇಷ. ಅತ್ಯಂತ ಸುಂದರವಾದ ಬಸದಿಗಳು, ಜಿನ ತೀರ್ಥಂಕರ ಮೂರ್ತಿಗಳು, ಶ್ರವಣಬೆಳಗೊಳದ ಗೊಮ್ಮಟೇಶ್ವರ ಮೂರ್ತಿ ಇವೆಲ್ಲಾ ಗಂಗರ ರಚನೆಗಳು.

ಮೊದಲಿಗೆ ಸುಟ್ಟ ಇಟ್ಟಿಗೆಯಿಂದ ದೇವಾಲಯ, ಬಸದಿ, ಗೋಪುರಗಳನ್ನು ನಿರ್ಮಿಸುತ್ತಿದ್ದರು. ನಂತರ ಭಿತ್ತಿಯನ್ನು ಕಲ್ಲಿನಿಂದಲೂ,. ಗೋಪುರಗಳನ್ನು ಇಟ್ಟಿಗೆಯಿಂದಲೂ ನಿರ್ಮಿಸಲು ಮೊದಲು ಮಾಡಿದರು. ತಿಪಟೂರಿನ ಅರಳಗುಪ್ಪೆಯ ಕಲ್ಲೇಶ್ವರ ದೇವಾಲಯ, ಮದ್ದೂರು ತಾಲ್ಲೂಕಿನ ವೈದ್ಯನಾಥೇಶ್ವರ ದೇವಾಲಯ, ತಲಕಾಡಿನ ಪಂಚಲಿಂಗ ದೇವಾಲಯಗಳು, ಬೆಂಗಳೂರು ನಗರದ ಬೇಗೂರಿನ ನಾಗೇಶ್ವರ ಮತ್ತು ಇತರ ನಾಲ್ಕು ಶಿವಾಲಯಗಳು ಸೇರಿದಂತೆ ಪಂಚಲಿಂಗೇಶ್ವರ ದೇವಾಲಯಗಳು, ಕೋಲಾರದ ಸೋಮೇಶ್ವರ, ಕೋಲಾರಮ್ಮ ದೇವಾಲಯ, ಚಾಮರಾಜನಗರ ತಾಲ್ಲೂಕು ನರಸಮಂಗಲದ ರಾಮೇಶ್ವರ ದೇವಾಲಯ, ಸಪ್ತಮಾತೃಕಾ ದೇವಾಲಯ, ನಂದಿಯಲ್ಲಿರುವ ಗಂಗರ ಸಾಮಂತರಾದ ಬಾಣರು ನಿರ್ಮಿಸಿದ ಭೋಗನಂದೀಶ್ವರ ಮತ್ತು ಅರುಣಾಚಲೇಶ್ವರ ದೇವಾಲಯಗಳು, ನೊಣವಿನಕೆರೆಯ ನೋಣಬೇಶ್ವರ ಮತ್ತು ಇತರ ನಾಲ್ಕು ಶಿವಾಲಯಗಳು, ನೆಲಮಂಗಲ ತಾಲ್ಲೂಕು ಮಣ್ಣೆಯ ಕಪಿಲೇಶ್ವರ ದೇವಾಲಯ ಇವು ಪ್ರಮುಖ ಗಂಗರ ದೇವಾಲಯಗಳು. ನಾಗಮಂಗಲ ತಾಲ್ಲೂಕು ಕಂಬದಹಳ್ಳಿಯಲ್ಲಿರುವ ಪಂಚಕೂಟ ಬಸದಿ, ಶ್ರವಣಬೆಳಗೊಳದ ಚಿಕ್ಕಬೆಟ್ಟದಲ್ಲಿರುವ, ಚಂದ್ರಗುಪ್ತಬಸದಿ, ಕತ್ತಲೆಬಸದಿ, ಪಾರ್ಶ್ವನಾಥಬಸದಿ, ಚಂದ್ರಪ್ರಭ ಬಸದಿ, ಮಜ್ಜಿಗಣಬಸದಿ, ಎರಡು ಕಟ್ಟೆ ಬಸದಿ ಮತ್ತು ದೊಡ್ಡಬೆಟ್ಟದ ಗೊಮ್ಮಟೇಶ್ವರ ಮೂರ್ತಿಯು ಗಂಗರ ಕಾಲದ ಸುಪ್ರಸಿದ್ಧ ರಚನೆಗಳು.

**ಕಲ್ಯಾಣದ ಚಾಲುಕ್ಯರ ವಾಸ್ತು, ಶಿಲ್ಪಕಲೆ:**

ಕಲ್ಯಾಣದ ಚಾಲುಕ್ಯರ ವಾಸ್ತು ಶಿಲ್ಪವು ಬಾದಾಮಿ ಚಾಲುಕ್ಯರ ವಾಸ್ತು ಶಿಲ್ಪದ ಸುಧಾರಿತ ಅಥವಾ ಮುಂದುವರಿದ ರೂಪ. ಈ ಶೈಲಿಯು ತನ್ನದೇ ಆದ ಹೊಸ ಅಂಶಗಳನ್ನು ಮೈಗೂಡಿಸಿಕೊಂಡು, ವೇಸರ ಅಥವಾ ಚಾಲುಕ್ಯ ಶೈಲಿ ಶಿಖರಗಳನ್ನು, ಕಗ್ಗಲ್ಲಿನ ಬಳಕೆಗೆ ಬದಲು ನುಣುಪಾದ ಮೆದುವಾದ ಸೂಕ್ಷ್ಮ ಕೆತ್ತನೆಗೆ ಅನುಕೂಲವಾಗುವ ಕರಿಯ ಬಳಪದ ಕಲ್ಲಿನ ಬಳಕೆ ಮಾಡಲಾಯಿತು. ದೇವಾಲಯಗಳಲ್ಲಿ ಮೂರ್ತಿಶಿಲ್ಪ, ಕುಸುರಿ ಕೆಲಸ, ಅಲಂಕಾರ ಇವುಗಳಿಗೆ ಮಹತ್ವ ದೊರೆಯಿತು. ಆಯತಾಕಾರದ ಗರ್ಭಗುಡಿ ಅಂತರಾಳ, ನವರಂಗ, ತೆರೆದ ಮುಖಮಂಟಪಗಳು, ನಂದಿಮಂಟಪಗಳು, ಮಳೆಯ ನೀರು ದೇವಾಲಯದ ಗೋಡೆಗಳ ಮೇಲೆ ಬೀಳದೆ ಸರಾಗವಾಗಿ ಕೆಳಕ್ಕೆ ಬೀಳುವಂತೆ ಮಾಡಲು ಇಳಿಜಾರಾದ



ಛತ್ತುಗಳ, ಈ ದೇವಾಲಯಗಳ ಮುಖ್ಯ ಸ್ವರೂಪ. ದೇವಾಲಯದೊಳಗೆ ಸಾಕಷ್ಟು ಗಾಳಿ ಬೆಳಕಿಗಾಗಿ ಕಲಾತ್ಮಕ ಜಾಲಂಧ್ರಗಳು(ಕಿಟಕಿ), ಚೌಕಾಕಾರದ ಸುಂದರ ಬಾಗಿಲುವಾಡ ಅಥವಾ ದ್ವಾರಬಂಧಗಳು, ಹಂತಗಳನ್ನೊಳಗೊಂಡ ಸುಂದರ ಗೋಪುರಗಳು, ಗೋಪುರದ ತುದಿ ಅಥವಾ ಕುಂಭ ಕಲಶಗಳು, ಇನ್ನೂ ಕೆಲವು ಮುಖ್ಯ ಲಕ್ಷಣಗಳು.

ಕೊಪ್ಪಳ ಜಿಲ್ಲೆ ಕುಕ್ಕನೂರಿನ ನವಲಿಂಗ ಮತ್ತು ಕಲ್ಲೇಶ್ವರ ದೇವಾಲಯಗಳು ಮರಳುಗಲ್ಲಿನಲ್ಲಿ ನಿರ್ಮಿಸಿರುವ ಕಲ್ಯಾಣ ಚಾಲುಕ್ಯರ ಕಾಲದ ಆರಂಭದ ರಚನೆಗಳು. ಬಳಪದ ಕಲ್ಲಿನಲ್ಲಿ ನಿರ್ಮಿಸಿರುವ ಲಕ್ಕುಂಡಿಯ ಜೈನದೇವಾಲಯ 93 ಅಡಿ ಉದ್ದ, 35 ಅಡಿ ಅಗಲ ಮತ್ತು 42 ಅಡಿ ಎತ್ತರ ಸುಂದರ ರಚನೆ. ಇಲ್ಲೇ ಇರುವ ಕಾಶಿ ವಿಶ್ವೇಶ್ವರ ದೇವಾಲಯವು ಮತ್ತೊಂದು ಸುಂದರ ದೇವಾಲಯ ಈ ದೇವಾಲಯದ ದ್ವಾರಬಂಧವು ಕಲಾಮಯವಾಗಿದೆ. ಕೊಪ್ಪಳ ಜಿಲ್ಲೆಯ ಇಟಗಿಯ ಮಹದೇವ ದೇವಾಲಯವನ್ನು ಹೆನ್ರಿ ಕಸೆನ್ಸ್ ಎಂಬ ಕಲಾವಿಮರ್ಶಕನು ಬೇಲೂರು ಹಳೇಬೀಡು ದೇವಾಲಯಗಳನ್ನು ಬಿಟ್ಟರೆ, ಕರ್ನಾಟಕದಲ್ಲೇ ಅತ್ಯಂತ ಸುಂದರವಾದ ದೇವಾಲಯ ಇದೆಂದು ಹೇಳಿದ್ದಾನೆ.

**ಹೊಯ್ಸಳರ ಕಾಲದ, ವಾಸ್ತು ಶಿಲ್ಪಕಲೆ**

ಹೊಯ್ಸಳ ವಾಸ್ತುಶಿಲ್ಪದ ಮೇಲೆ ಔತ್ತರೇಯ ವಾಸ್ತುಶಿಲ್ಪದ ಪ್ರಭಾವವಿಲ್ಲ. ಇದು ಕೇವಲ ದ್ರಾವಿಡ ಶೈಲಿಯ ಅತ್ಯಂತ ಸುಧಾರಿತ ಸುಂದರ ರೂಪವಾಗಿದೆ. ಹೊಯ್ಸಳರ ದೇವಾಲಯಗಳು ಹಸಿರುಗಪ್ಪು ಬಣ್ಣದ ಬಳಪದ ಕಲ್ಲು ಅಥವಾ ಕ್ಲೋರೈಟಿಕ್ ಶಿಸ್ಟ್ ಕಲ್ಲಿನ ರಚನೆಗಳು. ಈ ಕಲ್ಲಿನ ಉಪಯೋಗದಿಂದ ಅತ್ಯಂತ ಅಲಂಕೃತವಾದ ಸೂಕ್ಷ್ಮವಾದ ಕೆತ್ತನೆಗಳನ್ನು ಮಾಡಲು ಸಾಧ್ಯವಾಗಿದೆ. ಹೊಯ್ಸಳರ ದೇವಾಲಯಗಳಲ್ಲಿ ಸಾಮಾನ್ಯವಾಗಿ, ಗರ್ಭಗೃಹ, ಅಂತರಾಳ, ನವರಂಗ ಅಥವಾ ಮಹಾಮಂಟಪ ಎಂಬ ಮೂರು ಭಾಗಗಳಿರುತ್ತವೆ. ದೇವಾಲಯದ ಮುಂದೆ ಅದಕ್ಕೆ ಹೊಂದಿಕೊಂಡ ಹಾಗೆ ಪ್ರತ್ಯೇಕವಾದ ನಂದಿಮಂಟಪಗಳಿರುತ್ತವೆ. ಈ ದೇವಾಲಯಗಳಲ್ಲಿ ಸಾಮಾನ್ಯವಾಗಿ ಒಂದು ಗರ್ಭಗೃಹ ಅದರ ಮೇಲೆ ಒಂದು ಗೋಪುರ ಇದ್ದರೆ ಏಕಕೂಟ ದೇವಾಲಯ ಎನ್ನುತ್ತಾರೆ. ಆದರೆ ಈ ಗರ್ಭಗೃಹ ಮತ್ತು ಗೋಪುರಗಳ ಸಂಖ್ಯೆ ಹೆಚ್ಚುತ್ತಾ ಹೋಗುತ್ತದೆ. ದ್ವಿಕೂಟ, ತ್ರಿಕೂಟ, ಚತುಷ್ಕೂಟ, ಪಂಚಕೂಟ ದೇವಾಲಯಗಳೂ ಬಹುಸಂಖ್ಯೆಯಲ್ಲಿವೆ.

ಬೇಲೂರು ಚೆನ್ನಕೇಶವ ದೇವಾಲಯವು ಕ್ರಿ.ಶ.1117ರಲ್ಲಿ ನಿರ್ಮಾಣವಾಯಿತು. ದಾಸೋಜ ಅವನ ಮಗ ಚಾವಣ ಇದರ ಶಿಲ್ಪಿಗಳು. ದೇವಾಲಯದ ನವರಂಗದ ಸ್ಥಂಭಗಳು, ಛಾವಣಿಯ ಭುವನೇಶ್ವರಿಗಳು, ಚೆನ್ನಕೇಶವನ ಪ್ರತಿಮೆ, ದೇವಾಲಯದ ಹೊರಭಿತ್ತಿಗೂ ಛಾವಣಿಗೂ ಮಧ್ಯದಲ್ಲಿ ಜೋಡಿಸಿರುವ ಶಿಲಾಬಾಲಿಕೆಯರ ಪ್ರತಿಮೆಗಳು ಇದರ ಪ್ರಮುಖ ಆಕರ್ಷಣೆ. ಹಳೇಬೀಡಿನ ಹೊಯ್ಸಳೇಶ್ವರ ದೇವಾಲಯವು ಎರಡು ದೇವಾಲಯಗಳ ಜೋಡಣೆ. ಈ ದೇವಾಲಯದ ಹೊರಗೋಡೆಗಳ ಶಿಲ್ಪಕಲಾಕೃತಿಗಳು ಭಾರತೀಯ ಶಿಲ್ಪಕಲೆಯ ಮಹೋನ್ನತ ರಚನೆಗಳು. ಇದರ ಶಿಲ್ಪಿ ಕೇದಾರೋಜ. ಹಳೇಬೀಡಿನ ಕೇದಾರೇಶ್ವರ ದೇವಾಲಯ ಮತ್ತೊಂದು ಸುಂದರ ರಚನೆ. 1268ರಲ್ಲಿ ಸೋಮದಂಡನಾಯಕನು ಕಟ್ಟಿಸಿದ ಸೋಮನಾಥಪುರದ ತ್ರಿಕೂಟಾಚಲ ಕೇಶವ ದೇವಾಲಯ ಇನ್ನೊಂದು ಅದ್ಭುತ ರಚನೆ.

**ವಿಜಯನಗರದ ಶಿಲ್ಪಕಲೆ**

ವಿಜಯನಗರದ ವಾಸ್ತು ರಚನೆಗಳು ಗ್ರಾನೈಟ್ ಅಂದರೆ ಕಗ್ಗಲ್ಲಿನಿಂದ ನಿರ್ಮಿತವಾದ ಬೃಹತ್ತು ಮಹತ್ತುಗಳಿಂದ ಕೂಡಿದ ರಚನೆಗಳು. ದೀರ್ಘಕಾಲ ಉಳಿಯ ಬೇಕೆಂಬುದೇ ಇದರ ಹಿಂದಿನ ಉದ್ದೇಶ. ಬೃಹದಾಕಾರದ ಗ್ರಾನೈಟ್ ಕಂಬಗಳು, ಭಿತ್ತಿಗಳು, ಪೌಳಿಗೋಡೆಗಳು, ಗಾರೆಯಿಂದ ನಿರ್ಮಿಸಲಾದ ದೊಡ್ಡ ಗೋಪುರಗಳು, ಬೃಹತ್ತಾದ ಮೂರ್ತಿ ಶಿಲ್ಪಗಳು, ಗರುಡಗಂಬಗಳು ಅಥವಾ ದೀಪಸ್ಥಂಭಗಳು, ವಿಜಯನಗರ ಕಾಲದ ವಾಸ್ತುವಿನ ಪ್ರಮುಖ ಲಕ್ಷಣಗಳು. ದೇವಾಲಯಗಳ ಜೊತೆಗೆ ಕೋಟೆಕೊತ್ತಲುಗಳು, ಅರಮನೆಗಳು, ಸುಂದರವಾದ ಮೆಟ್ಟಿಲುಗಳನ್ನುಳ್ಳ ದೊಡ್ಡ ದೊಡ್ಡ ಕಲ್ಯಾಣಿಗಳು ವಿಜಯನಗರ ವಾಸ್ತುರಚನೆಯ ವಿಶೇಷಗಳು.

ವಿಜಯನಗರ ಸಾಮ್ರಾಜ್ಯದ ಕೇಂದ್ರವಾದ ಹಂಪಿಯ ವಿರೂಪಾಕ್ಷ ದೇವಾಲಯದಲ್ಲಿ ವಿಜಯನಗರ ವಾಸ್ತುವಿನ ಎಲ್ಲ ಲಕ್ಷಣಗಳನ್ನೂ ಕಾಣಬಹುದು. ಹಂಪಿಯ ವಿಜಯವಿಠಲ, ಕೃಷ್ಣ, ಅಚ್ಯುತ, ಮಾಲ್ಯವಂತ ರಘುನಾಥ, ಉದ್ದಾನ ವೀರಭದ್ರ, ಹಜಾರ ರಾಮಸ್ವಾಮಿ ದೇವಾಲಯ, ಕಮಲಾಪುರದ ಅನಂತಶಯನ, ಅನಂತ ಪದ್ಮನಾಭ, ತಿಮ್ಮಲಾಪುರದ ಶಿವ ಮತ್ತು ಗೋಪೀನಾಥ ಇವು ಹಂಪಿ ಪರಿಸರದ ಪ್ರಮುಖ ದೇವಾಲಯಗಳು. ಶೃಂಗೇರಿಯ ವಿದ್ಯಾಶಂಕರ ದೇವಾಲಯವೂ ವಿಜಯನಗರ ಕಾಲದ ಆರಂಭ ರಚನೆಗಳಲ್ಲಿ ಒಂದು. ಕೋಲಾರದ ಸೋಮೇಶ್ವರ, ಕೋಲಾರ ಜಿಲ್ಲೆಯ ಗಡಿದಂ ವೆಂಕಟರಮಣ, ಮುಳಬಾಗಿಲಿನ ಸಮೀಪದ ವಿರೂಪಾಕ್ಷಿಯ ಪ್ರಸನ್ನ ವಿರೂಪಾಕ್ಷ, ಗುಂಡ್ಲುಪೇಟೆ ತಾಲ್ಲೂಕಿನ ತ್ರಿಯಂಬಕಪುರದ ತ್ರಿಯಂಬಕೇಶ್ವರ, ಲೇಪಾಕ್ಷಿಯ ವೀರಭದ್ರ, ಆಂಧ್ರ ಪ್ರದೇಶದ ತಾಡಪತ್ರಿಯಲ್ಲಿರುವ ಚಿಂತಲರಾಯ ಮತ್ತು ರಾಮೇಶ್ವರ, ಮೂಡಬಿದರೆಯ ಸಾವಿರ ಕಂಬದ ಬಸದಿ, ಇವೆಲ್ಲಾ ವಿಜಯನಗರ ಕಾಲದ ಪ್ರಮುಖ ರಚನೆಗಳು. ಶ್ರವಣಬೆಳಗೊಳದಲ್ಲಿಯೂ ಕೂಡಾ ವಿಜಯನಗರ ಕಾಲದ ಬಸದಿಗಳಿವೆ.

Published by : The Director, Department of Information & Public Relation, 17, Varthasoudha, Bhagwan Mahaveer Road, Bangalore - 560 001
Printed at : M/s Lavanya Mudrana, #19, Vidyapeeta Circle, Banashankari 1st Stage, Bangalore - 560 050